ಒದಗಿಸಲು NOC ಸಹ ಕೊಟ್ಟಿದ್ದಾರೆ ಮತ್ತು ಇವರಿಂದ ಬಾಡಿಗೆಯನ್ನು ಸಹ ವಸೂಲು ಮಾಡು ತ್ತಿದ್ದರು. ಹೀಗಿರುವಾಗ ಅವರ ಅಂಗಡಿಯನ್ನು ಕೆಡವಿರುವುದು ಅಸಂಬದ್ಧ ಮತ್ತು ಅನ್ಯಾಯ, ಆದ್ದರಿಂದ ಅವರಿಗೆ ಸೂಕ್ತ ಪರಿಹಾರ ಮತ್ತು ಅವರ ವ್ಯಾಪಾರಕ್ಕೆ ಸ್ಥಳಾವಕಾಶ ಒದಗಿಸಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ಉತ್ತರವನ್ನು ಸಭೆಗೆ ಒದಗಿಸುತ್ತೇದೆ.

ವಿತ್ತೀಯ ಕಾರ್ಯಕಲಾಪಗಳು

೧೯೮೬–೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಅಧ್ಯಕ್ಷರು.—ಈಗ ಬೇಡಿಕೆಗಳ ಮೇಲಿನ ಚರ್ಚೆ. ಮಾನ್ಯ ಸಚಿವರುಗಳು ಬೇಡಿಕೆಗಳನ್ನು ಮಂಡಿಸುವುದು.

DEMAND No. 5

INDUSTRIES (EXCLUDING SMALL SCALE INDUSTRIES AND SERICULTURE)

SRI J. H. PATEL (Minister for Major and Medium Industries).—Sir, on the recommendation of the Governor, I beg to move ;

> "That a sum not exceding Rs. 6,33,44,000 on Revenue Account and Rs. 10,77,00,000 on Capital Account be granted to the Government to defray the charges which will come in course of payment during the financial year ending 31st day of March 1987 in respect of "Industries"(Excluding Small Scale Industries and Sericulture)

DEMAND No. 7

SMALL SCALE INDUSTIES

SRI R. V. DESHAPANDE (Minister for Small Scale Industries).—Sir, on the recommendation of the Governor, I beg to move :

> "That a sum not exceeding Rs. 32,54,35,000 on Revenue Account and Rs. 5,77.75,000 on Capital Account be granted to the Government to defray the charges which will come in course of payment during the financial year ending 31st day of March 1987 in respect of "Small Scale Industries."

DEMAND NO: 8 SERICULTURE

SRI Y. K. RAMAIAH (Minister of State for Sericulture).—Sir, on the recommendation of the Governor, I beg to move.

"That a sum not exceeding Rs. 30,05,70,000 on Reveue Account and 7,01,00 000 on Capital Account be granted to the Government to defray the charges which will come in course of payment during the financial year ending 31st day of March 1987 in respect of Sericulture."

Question was proposed

ಅಧ್ಯಕ್ಷರು.—ಎಲ್ಲಾ ಬೇಡಿಕೆಗಳು ಸಭೆಯ ಮುಂದೆ ಇವೆ. ಈಗ ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಚರ್ಚೆಯನ್ನು ಪ್ರಾರಂಭಿಸಲಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಈ ಇಲಾಖೆಗಳ ಬೇಡಿಕೆಗಳ ಮೇಲೆ ಕೆಲವೊಂದು ಮಾತನಾಡಲು ಬಯಸುತ್ತೇನೆ. ನಮ್ಮ ರಾಜ್ಯದ ಕೈಗಾರಿಕೆಗಳು ಯಾವ ಹಂತದಲ್ಲಿದೆ, ಅವು ಯಾವ ಸ್ಥಿತಿಯನ್ನು ತಲುಪಿವೆ ಮತ್ತು ಅವುಗಳ ಸುಧಾರಣೆಗೆ ಏನು ಮಾಡಬಹುದು ಎನ್ನುವ ಬಗ್ಗೆ ನನಗೆ ತೋರಿದ ಕೆಲವು ಸಂಗತಿಗಳನ್ನು ಈ ಸಭೆಯ ಗಮನಕ್ಕೆ ತರಲು ಬಯಸುತ್ತೇನೆ, ಮತ್ತು ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸುತ್ತದೆ ಎಂದು ನಾನು ನಿರೀಕ್ಷೆ ಮಾಡುತ್ತೇನೆ. ಯಾವುದೇ ರಾಷ್ಟ್ರ ರಾಜಕೀಯವಾಗಿ, ಆರ್ಥಿಕವಾಗಿ ಮುನ್ನಡೆಯಬೇಕಾದರೆ ಆ ರಾಷ್ಟ್ರಕ್ಕೆ ತನ್ನದೇ ಆದ ಒಂದು ಕೈಗಾರಿಕಾ ನೀತಿ ಇರಬೇಕಾದುದು ಅವಶ್ಯವಾಗಿದೆ. ಕೈಗಾರಿಕೆಗಳ ಬಗ್ಗೆ ಯಾವುದೇ ಒಂದು ರಾಷ್ಟ್ರಕ್ಕೆ ಸರಿಯಾದ ನೀತಿ ಇಲ್ಲದಿದ್ದರೆ ಈ ದಿವಸ ಪ್ರಪಂಚದಲ್ಲಿ ಮಿಲಿಟರಿ ಸ್ವರೂಪದ ಸಾಮ್ರಾಜ್ಯಶಾಹಿ ಆಡಳಿತ ಇರುತ್ತಿತ್ತು. ನಮ್ಮ ರಾಷ್ಟ್ರದಲ್ಲಿ ೧೯೪೮ರಲ್ಲಿ ಕೈಗಾರಿಕಾ ಕ್ರಾಂತಿ ಪ್ರಾರಂಭವಾಯಿತು. ಮತ್ತು ೧೯೫೧ರಲ್ಲಿ Industries Development and Regulation Act ಜಾರಿಗೆ ಬಂತು. ನಂತರ ೧೯೫೬ರಲ್ಲಿ Industrial Policy Resolution ಅಳವಡಿಸಿಕೊಳ್ಳಲಾಯಿತು ನಂತರ ಇದಕ್ಕೆ ಸರ್ಕಾರೀ ವಲಯದಿಂದ ತಿದ್ದುಪಡಿಗಳನ್ನು ತಂದರು. ನಮ್ಮ ರಾಷ್ಟ್ರದ ಕೈಗಾರಿಕೆ ಈ ಸಂದರ್ಭದಲ್ಲಿ ಒಂದು ಸ್ಪಷ್ಟ ರೂಪವನ್ನು ಪಡೆಯಿತು. ಅನಂತರ ಇಂಡಸ್ಟ್ರೀಸ್ ಪಾಲಿಸಿ ಎನ್‌ಕ್ವೈರಿ ಕಮಿಟಿ ೧೯೬೭ ರಲ್ಲಿ ರಚನೆಯಾಯಿತು. ಅದು ರಚನೆ ಯಾದಾಗ, ಅಂದರಿಂದಾಗಿ ಎಂ. ಆರ್. ಟಿ. ಪಿ ಕಾನೂನು ಅಂತ ಹೇಳಿ ಜಾರಿಗೆ ಬರುವುದಕ್ಕೆ ಕಾರಣವಾಯಿತು. ಆ ಕಾಲದಲ್ಲಿ ನಮ್ಮ ರಾಷ್ಟ್ರದಲ್ಲಿರುವ ಕೈಗಾರಿಕೆಗಳನ್ನು ಹಲವಾರು ಗುಂಪುಗಳನ್ನಾಗಿ ಅವತ್ತು ವಿಂಗಡಿಸಿದ್ದಾರೆ. Core Sector, Non-Core Heavy Investment Sector, Joint Sector, Middle Sector, Unlicenced Sector, Relicenced Sector, Small Sector, Cooperative Sector and Export-oriented Sector. ಈ ವಿಂಗಡಣೆ ಕೂಡ ೧೯೭೦ರಲ್ಲಿ ರಚನೆಯಾದಂತಹ ವಿಚಾರಣಾ ಸಮಿತಿಯು ತೆಗೆದುಕೊಂಡಂತಹ ತೀರ್ಮಾನದಿಂದಾಗಿ ಅದು ಒಂದು ರೂಪ ತಾಳಿತು. ಅನಂತರ ಕೇಂದ್ರದಲ್ಲಿ ಜನತಾಪಕ್ಷದ ಸರ್ಕಾರ ಬಂದಂತಹ ಸಂದರ್ಭದಲ್ಲಿ ಅಂದರೆ ೧೯೭೭ ರಲ್ಲಿ ಒಂದು ಇಂಡಸ್ಟ್ರೀಸ್ ಪಾಲಿಸಿ ರೆಸಲ್ಯೂಸನ್ ಜಾರಿಗೆ ಬಂತು. ಅದರಲ್ಲಿ ಕೈಗಾರಿಕೆಗಳನ್ನು ವಿಕೇಂದ್ರೀಕರಣವನ್ನಾಗಿ ಮಾಡುವುದರ ಜೊತೆಗೆ ಸಣ್ಣ ಕೈಗಾರಿಕೆಗಳು ಹಾಗೂ ಗ್ರಾಮ ಕೈಗಾರಿಕೆಗಳು ಎಂಬುದಾಗಿ ಎರಡು ಪಂಗಡಗಳನ್ನಾಗಿ ಮಾಡುವುದರ ಜೊತೆಗೆ ಉತ್ಪಾದನೆಯಷ್ಟೇ ಉದ್ಯೋಗವನ್ನೂ ಕೂಡ ಸೃಷ್ಟಿ ಮಾಡತಕ್ಕಂತಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ಹೆಚ್ಚಿನ ಒಂದು ಆದ್ಯತೆಯನ್ನು ಆ ಒಂದು ನಿರ್ಣಯ ಸೂಚನೆ ಮಾಡಿತು.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಮತ್ತು ಅದೇ ಕಾಲದಲ್ಲಿ ೫೦೦ ವಸ್ತುಗಳನ್ನು ಈ ಒಂದು ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಒಳಪಡಿಸತಕ್ಕಂತಹ ಒಂದು ಅಭಿಪ್ರಾಯ ಕೂಡ ಆ ಒಂದು ನಿರ್ಣಯ ಪ್ರತಿಪಾದನೆ ಮಾಡಿತು, ಗುಡಿ ಮತ್ತು ಗೃಹ ಕೈಗಾರಿಕೆ ಖಾದಿ ಮತ್ತು ಗ್ರಾಮೋದ್ಯೋಗ, ಬೃಹತ್ ಕೈಗಾರಿಕೆಗಳು ದೊಡ್ಡ ದೊಡ್ಡ ನಗರಗಳಲ್ಲೇ ಏನು ಇವೆ, ಅವುಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬಿಸತಕ್ಕಂತಹ ಪ್ರಯತ್ನ ಕೂಡ ನಡೆಯಿತು. ಅಲ್ಲದೆ ಪ್ರಪ್ರಥಮವಾಗಿ ಕೈಗಾರಿಕೆಗಳಿಂದ ಉಂಟಾಗತಕ್ಕಂತಹ ಮಾಲಿನ್ಯ ಮತ್ತು ಪರಿಸರ ಅಸಮತೋಲನದ ವಿಚಾರದ ಕಡೆಗೂ ಕೂಡ ಈ ನಿರ್ಣಯ ಗಮನಹರಿಸಿತು. ೧೯೮೦ ರಲ್ಲಿ

ಮತ್ತೊಂದು ಕೈಗಾರಿಕಾ ಪಾಲಿಸಿ ಸ್ಟೇಟ್‌ಮೆಂಟ್ ಬಂತು. ಆವಾಗ ಹೊಸ ಸರ್ಕಾರ ಬಂತು. ಹೊಸ ನೀತಿ ಜಾರಿಗೆ ಬಂತು. ಅಲ್ಲಿ ಮತ್ತೆ ಕೈಗಾರಿಕೆಗಳ ಬಗ್ಗೆ ವ್ಯಾಖ್ಯಾನ ವಿಶ್ಲೇಷಣೆ ಪರಿಷ್ಕರಣಕ್ಕೆ ಒಳಪಡಿಸದ್ದಲ್ಲದೆ ನೂರಕ್ಕೆ ನೂರು ರಫ್ತು ಮಾಡತಕ್ಕಂತಹ ಕೈಗಾರಿಕೆಗಳಿಗೆ ಒಂದು ಮುಕ್ತ ವ್ಯಾಪಾರದವಲಯದ ವಿಸ್ತರಣೆ ಜಾರಿಗೆ ಬಂತು. ಅಲ್ಲದೆ ರೋಗಗ್ರಸ್ತ ಕೈಗಾರಿಕೆಗಳ ಸ್ಥಿತಿಯನ್ನು ಹೇಗೆ ಸರಿ ಮಾಡಬೇಕು ಎನ್ನತಕ್ಕಂತಹ ವಿಚಾರ ಕೂಡ ಅದರಲ್ಲಿ ಅಡಕವಾಯಿತು. ಇದನ್ನು ನಾನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಕರ್ನಾಟಕ ರಾಜ್ಯವೂ ಕೂಡ ಭಾರತ ದೇಶದ ಸಮಗ್ರವಾದ ಕೈಗಾರಿಕಾ ನೀತಿಯ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಬೇಕೇ ಹೊರತು, ಸಂಪೂರ್ಣವಾಗಿ ಹೊಸದಾದ ನೀತಿಯನ್ನೇ ನಾವು ನಿರೂಪಣೆ ಮಾಡತಕ್ಕಂತಹದ್ದು ಸಾಧ್ಯವಾಗುವುದಿಲ್ಲ ಎಂಬುದಕ್ಕೋಸ್ಕರ ಇವನ್ನೆಲ್ಲಾ ಹೇಳುತ್ತಿದ್ದೇನೆ. ಆದ್ದರಿಂದ ರಾಷ್ಟ್ರದ ನೀತಿಯನ್ನು ಜೊತೆಯಲ್ಲೇ ಇಟ್ಟುಕೊಂಡು ರಾಜ್ಯದ ಪರಿಸ್ಥಿತಿಯನ್ನು ಕೂಡ ವಿಶ್ಲೇಷಣೆ ಮಾಡಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳಿದ್ದೇನೆ. ನಮ್ಮ ರಾಜ್ಯವೇ ಕೈಗಾರಿಕಾ ನೀತಿಯಲ್ಲಿ ಹೊಸ ಹೊಸ ನೀತಿಯನ್ನು ವ್ಯಾಖ್ಯಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಆ ಮಾತನ್ನು ಭಾಷಣದ ಮಟ್ಟದಲ್ಲಿ ವ್ಯಾಖ್ಯಾನ ಮಾಡಿದರೂ ಕೂಡ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುವುಲ್ಲ ಎನ್ನುವ ಮಾತನ್ನು ಪ್ರಪ್ರಥಮವಾಗಿ ಪ್ರಸ್ತಾಪ ಮಾಡುವುದಕ್ಕಾಗಿ ಈ ಎಲ್ಲ ವಿಚಾರಗಳನ್ನೂ ಹೇಳಿದ್ದೇನೆ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲೂ ಕೂಡ ಹೊಸದಾಗಿ ಜನತಾ ಪಕ್ಷದ ಸರ್ಕಾರ ಬಂದ ಮೇಲೆ ೧೯೮೩ರ ಜುಲೈ ತಿಂಗಳಲ್ಲಿ ಒಂದು ಕೈಗಾರಿಕಾ ಪಾಲಿಸಿ ರೆಸಲ್ಯೂಷನ್ ಅನ್ನು ಅದು ಅಂಗೀಕಾರಮಾಡಿತು. ಅದರ ಪ್ರಕಾರ ಸುಮಾರು ೨೦ ಅಂಶಗಳು ಅದರಲ್ಲಿ ಅಡಕವಾಗಿವೆ. ಆದರೆ ಇದರಲ್ಲಿ ಬಹಳ ಸ್ಪಷ್ಟವಾಗಿ ೨೪ ಅಂಶಗಳಲ್ಲಿ ಯಾವ್ಯಾವುದಕ್ಕೆ ಎಷ್ಟೆಷ್ಟು ಆದ್ಯತೆಯನ್ನು ಕೊಟ್ಟಿದ್ದಾರೆ ಎನ್ನತಕ್ಕಂತಹದ್ದು ಅದರಲ್ಲಿ ಅಷ್ಟಾಗಿಲ್ಲದಿದ್ದರೂ ೨೪ ಅಂಶಗಳೂ ಕೂಡ ಆದ್ಯತೆ ಅಂಶಗಳಾಗಿವೆ ಎಂಬುದು ಆ ನಿರ್ಣಯದಲ್ಲಿ ಪ್ರಸ್ತಾಪವಾಗಿದೆ. ಸಾಧಾರಣವಾಗಿ ಅದರಲ್ಲಿ ನನಗೆ ಕಂಡು ಬಂದಿರತಕ್ಕಂತಹದ್ದು ಸಣ್ಣ ಕೈಗಾರಿಕೆಗಳಿಗೆ, ಗುಡಿ ಹಾಗೂ ಗೃಹ ಕೈಗಾರಿಕೆಗಳಿಗೆ, ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆ, ಇವುಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಬೇಕು, ಮತ್ತು ಉದ್ಯೋಗವನ್ನು ಸೃಷ್ಟಿ ಮಾಡತಕ್ಕಂತಹ ಕೈಗಾರಿಕೆಗಳಿಗೆ ಹೆಚ್ಚು ಒತ್ತು ಕೊಡಬೇಕು ಮತ್ತು ದೊಡ್ಡ ದೊಡ್ಡ ನಗರಗಳಲ್ಲಿ ಕೈಗಾರಿಕೆಗಳು ಬೆಳೆಯುವ ಬದಲು ಗ್ರಾಮೀಣ ಪ್ರದೇಶಗಳಿಗೂ ಅವುಗಳನ್ನೂ ಹಬ್ಬಿಸುವುದಕ್ಕೆ ಪ್ರಯತ್ನ ಮಾಡಬೇಕು, ಮತ್ತು ನಮ್ಮ ರಾಜ್ಯದಲ್ಲಿರತಕ್ಕ ವಿದ್ಯುತ್ ಕ್ಷಾಮದ ಹಿನ್ನಲೆಯಲ್ಲಿ ಯಾವ ಕೈಗಾರಿಕೆಗಳು ವಿದ್ಯುಚ್ಛಕ್ತಿಯನ್ನು ಕಡಿಮೆ ಪಾಲು ಉಪಯೋಗ ಮಾಡಿಕೊಂಡು, ಹೆಚ್ಚು ಉದ್ಯೋಗವನ್ನು ಸೃಷ್ಟಿ ಮಾಡುವುದಕ್ಕೆ ಸಾಧ್ಯವೋ ಅಂತಹ ಕೈಗಾರಿಕೆಗಳಿಗೆ ಆದ್ಯತೆಯನ್ನು ಕೊಡಬೇಕು. ವಿದ್ಯುತ್ ಅನ್ನೇ ಹೆಚ್ಚು ಉಪಯೋಗ ಮಾಡತಕ್ಕಂತಹ ಕೈಗಾರಿಕೆಗಳಿಗೆ ಲೈಸನ್ಸನ್ನೇ ಕೊಡಕೂಡದು ಎನ್ನತಕ್ಕಂತಹದ್ದು ಪ್ರಾಯಶಃ ನನ್ನ ಮನಸ್ಸಿಗೆ ೨೪ ಅಂಶಗಳಲ್ಲಿ ಬಹಳ ಪ್ರಾಮುಖ್ಯವಾದ ಅಂಶವೆಂದು ನಾನು ಅಂದು ಕೊಂಡಿದ್ದೇವೆ. ಇನ್ನೂ ಒಂದೆರಡು ಮುಖ್ಯವಾದ ಅಂಶಗಳು ಇರಬಹುದು. ನಾನು ಅರ್ಥೈಸಿರುವ ಮಟ್ಟಿಗೆ ಅವುಗಳು ಮುಖ್ಯವಾದವುಗಳು. ಮತ್ತು ಸರ್ಕಾರ ಕೊಟ್ಟಿರುವಂತಹ ವರದಿಯಲ್ಲಿ ಸ್ವಲ್ಪ ಹೆಮ್ಮೆಯಿಂದ ಹೇಳಿಕೊಂಡಿದೆ. ಅದೇನೆಂದರೆ.—The first conscious articulation of the industrial strategy for the State is the Industrial Policy Resolution of Karnataka framed in July 1983. ಸರ್ಕಾರ ತನ್ನ ಈ ನಿರ್ಣಯದ ಬಗ್ಗೆ ಹೆಮ್ಮೆಪಟ್ಟುಕೊಳ್ಳುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ, ವಸ್ತುತಃ ನಮ್ಮ ರಾಜ್ಯ ಕೈಗಾರಿಕಾ ನೀತಿಯ ಬಗ್ಗೆ ಸಂಪೂರ್ಣವಾಗಿ ಹೊಸದಾಗಿ ೧೯೮೩ ರಲ್ಲಿ ಹೆಚ್ಚಿಗೆ ಆಲೋಚನೆ ಮಾಡಿದ್ದೇವೆಂದು ಭಾವಿಸತಕ್ಕಂತಹದ್ದು ಅಷ್ಟೊಂದು ಸಮಂಜಸವಾದುದಲ್ಲ. ನಮ್ಮ ರಾಜ್ಯದಲ್ಲಿ ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಕೈಗಾರಿಕೆಯ ಬಗ್ಗೆ ಪ್ರಾಮುಖ್ಯತೆಯನ್ನು ಪಡೆದು, ನಾವು ಮುಂಚೂಣಿಯಲ್ಲಿರುವಂತಹ ಒಂದು ರಾಜ್ಯವಾಗಿದ್ದೇವೆ. ಆಗಿನ ಕಾಲದ ಹಳೇ ಮೈಸೂರು ಇದ್ದಾಗ ಮಹಾರಾಜರು ಮತ್ತು ಆಗ ಇದ್ದಂತಹ ದಿವಾನರುಗಳೂ ಆದ ಸರ್. ಎಂ. ವಿಶ್ವೇಶ್ವರಯ್ಯನವರು ಇಡೀ ರಾಷ್ಟ್ರದಲ್ಲೇ ಆಧುನೀಕತೆಗೆ, ತಾಂತ್ರಿಕತೆಗೆ, ಕೈಗಾರಿಕೀಕರಣಕ್ಕೆ ದಾರಿದೀಪವಾಗಿದ್ದರು. ತಮಗೆ ಇಲ್ಲಿ ಸಿಕ್ಕಿದಂತಹ ಅವಕಾಶ, ಸಂದರ್ಭದಲ್ಲಿ ಕರ್ನಾಟಕ ಕೂಡ ಕೈಗಾರಿಕಾ ವಲಯದಲ್ಲಿ ಮುನ್ನಡೆಸುವುದಕ್ಕೆ ಅವರು ಸಾಕಷ್ಟು ಆ ಕಾಲದಲ್ಲೇ ಪ್ರಯತ್ನಪಟ್ಟಿದ್ದಾರೆ. ನಿಜ ಅಂದರೆ ೧೯೦೨ರಲ್ಲೇ ನಮಗೆ ಮೊಟ್ಟಮೊದಲು ಜಲವಿದ್ಯುತ್ ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ ಎಲ್ಲಕ್ಕಿಂತ ಬಹಳ

ಮುಖ್ಯವಾದುದು ನಮ್ಮ ಕೈಗಾರಿಕಾ ಇಲಾಖೆ ಏನಿದೆ ಅದೂ ಕೂಡ ಬಹಳ ಹಿಂದೆ ಸ್ಥಾಪನೆಯಾಗಿ, ಅಂದರೆ ೧೯೧೩ರಲ್ಲೇ ಪ್ರಪ್ರಥಮವಾಗಿ ಈ ದೇಶದಲ್ಲಿ ಸ್ಥಾಪನೆಯಾದಂತಹ ಕೈಗಾರಿಕಾ ಇಲಾಖೆಗಳಲ್ಲೊಂದು. ಆ ದೃಷ್ಟಿಯಿಂದ ಇದಕ್ಕೆ ಸಾಕಷ್ಟು ಹಿನ್ನಲೆ ಇದೆ ಪೂರ್ತಿ ಬಂದಿರತಕ್ಕಂತಹದ್ದು ನಮ್ಮ ಕಾಲದಲ್ಲಿ ಎಂಬುದಾಗಿ ಈ ಸರ್ಕಾರ ಹೇಳಿದರೆ ಅದು ಸರಿಯಾದುದಲ್ಲ. ಆದ್ದರಿಂದ ಹೇಳುವುದಕ್ಕಿಂತ ಮೊದಲು ಅದರ ಹಿನ್ನಲೆಯನ್ನು ತಿಳಿದುಕೊಳ್ಳುವುದು ಬಹಳ ಮುಖ್ಯವಾದುದು. ಈ ಒಂದು ಹಿನ್ನಲೆಯಲ್ಲಿ ಕೆಲವೊಂದು ಪ್ರಬಲವಾದ ಅನುಕೂಲತೆಗಳೂ ಇವೆ. ಕೆಲವು ನ್ಯೂನತೆಗಳೂ ಇವೆ. ಅವುಗಳನ್ನು ಗ್ರಹಿಸಿಕೊಳ್ಳುವಂತಹ ದೃಷ್ಟಿ ಹಾಗೂ ಪರಿಜ್ಞಾನದ ಅಗತ್ಯ ಇದೆ. ಐತಿಹಾಸಿಕವಾಗಿ ಕೈಗಾರಿಕಾ ವಲಯ ಹೇಗೆ ಪೂರ್ತಿ ಬಂತು, ಎನ್ನುವದರ ಪರಿಜ್ಞಾನದ ಅವಶ್ಯಕತೆ ಇದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

೩.೦೦ ಪಿ. ಎಂ.

ಏಕೆಂದರೆ ಮುಂದುವರಿದ ಮನಸ್ಥಿತಿ ಮೌನದಿಂದ ನಿರ್ಣಯವನ್ನು ಮನ್ನಿಸುತ್ತಾ ಹೋಗಿರುತ್ತದೆಂದರೆ ತನ್ನ ಸಾಧಕ ಪ್ರಭುತ್ವ ಹೊರಟು ಹೋಗಿರುತ್ತದೆ. ಇಂಥ ಮಾನವ ಸಹಜ ದೌರ್ಬಲ್ಯ ನನಗೆ ಇರಬಹುದು, ಮತ್ತೊಬ್ಬರಿಗೆ ಇರಬಹುದು. ಸರ್ಕಾರಕ್ಕೆ ಅದು ಬೇಡವೆನಿಸುತ್ತದೆ. ಹಿಂದಿನದನ್ನು ಅರಿಸಿಕೊಳ್ಳುವುದಕ್ಕೆ ಮುಂದಿನದನ್ನು ಸಜ್ಜುಗೊಳಿಸುವುದಕ್ಕೆ ಬಾಧಕವಾಗುತ್ತದೆ. ಕಾರ್ಯನಿರ್ವಹಣೆಯಲ್ಲಿ ತೊಂದರೆಯಾಗುತ್ತದೆ. ಇವತ್ತು ಹೊಸ ಕೈಗಾರಿಕಾ ನೀತಿಯನ್ನು ರಾಜ್ಯದಲ್ಲಿ ಘೋಷಿಸಿದ್ದು ಅದರ ಬಗ್ಗೆ ನನಗೆ ಕಂಡ ದೃಷ್ಟಿಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದೆ. ಇವರು ಏನು ಹೇಳಿದ್ದಾರೆಂದರೆ ಒಂದು ತಿಂಗಳಿಗೆ ಒಂದು ಸಾವಿರ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುತ್ತೇವೆಂಬ ಘೋಷಣೆ ಮಾಡಿದ್ದರು. ಬಹುಶಃ ಇದು ನಿಮ್ಮ ಕೈಗಾರಿಕಾ ನೀತಿಯ ಧ್ಯೇಯವಾಗಿದೆ ಎಂದು ಅಂದುಕೊಂಡಿದ್ದೆ. ಈ ಒಂದು ಕೈಗಾರಿಕಾ ನೀತಿಯನ್ನು ಸಿದ್ಧಪಡಿಸುವುದಕ್ಕೆ ಮುಂಚಿತವಾಗಿ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಇಕನಾಮಿಕ್ ಅಂಡ್ ಪ್ಲಾನಿಂಗ್ ಕೌನ್ಸಿಲ್ ಆಫ್ ಕರ್ನಾಟಕ ಇವರ ಸಲಹೆಯನ್ನು ಪಡೆದಿದ್ದಾರೆಂದು ಅಂದುಕೊಂಡಿದ್ದೇವೆ. ಅವರು ರಾಜ್ಯದ ಕೈಗಾರಿಕೆಯ ಬಗ್ಗೆ ಸಾಕಷ್ಟು ಚಿಂತನೆ ಮಾಡಿದ್ದಾರೆ. ಅವರೇನು ಆ ಕಾಲದಲ್ಲಿ ಬ್ಯಾಕ್‌ಗ್ರೌಂಡ್ ಪೇಪರ್ಸ್ ಎಂದು ತಯಾರಿಸಿದ್ದನ್ನು ನಾನು ನೋಡಿದ್ದೇನೆ ಮತ್ತು ಅದನ್ನು ಸಿದ್ಧಪಡಿಸಿದವರನ್ನು ಮುಕ್ತಕಂಠದಿಂದ ಈ ಸಂದರ್ಭದಲ್ಲಿ ಪ್ರಶಂಸಿಸುತ್ತೇನೆ. ಕಾರಣವೇನೆಂದರೆ ಅವರು ಆ ಒಂದು ದಿಸೆಯಲ್ಲಿ ಚರ್ಚೆ ಮಾಡಿದ್ದಾರೆ, ಸಾಕಷ್ಟು ವ್ಯಾಪಕವಾಗಿ, ಆಳವಾಗಿ ಚಿಂತನೆಯನ್ನು ಅದರಲ್ಲಿ ನಡೆಸಿದ್ದಾರೆ ಇವತ್ತು ನಾನು ಏನು ಅಭಿಪ್ರಾಯಿಸುತ್ತೇನೆ. ಅದರಲ್ಲಿ ಯಾವುದೇ ಪ್ರಮುಖವಾದ ವಿಚಾರಗಳು ಕೇವಲ ನನ್ನ ಸ್ವಂತ ಅನಿಸಿಕೆಗಳು ಅಲ್ಲ. ಆ ದೃಷ್ಟಿಯಿಂದ ಯಾರೂ ಸ್ವಂತವಾಗಿ ಯೋಚಿಸುವುದಿಲ್ಲ. ಸಾಕಷ್ಟು ಓದಿಕೊಂಡು ವಿಷಯಗಳನ್ನು ತಿಳಿದುಕೊಂಡು ಮಾಡುತ್ತಾರೆ. ನಾನು ಇವತ್ತು ಏನು ಕೆಲವು ವಿಚಾರಗಳ ಕಡೆ ಸರ್ಕಾರದ ಗಮನ ಸೆಳೆಯಬಹುದೋ ಅಥವಾ ಯಾವೊಂದು ವಿಚಾರಗಳನ್ನು ವಿಶ್ಲೇಷಣೆಗೆ ಒಳಪಡಿಸಬಹುದೋ ಯಾವ ವಿಚಾರಗಳಲ್ಲಿ ಸಲಹೆ ಕೊಡಬಹುದೋ ಅದರಲ್ಲಿ ನನ್ನ ಒಂದು ಆಲೋಚನೆಯನ್ನು ಸಹ ಕೂಡಿಸಿ ಕೊಡಬಹುದು. ಕೈಗಾರಿಕಾ ನೀತಿಯನ್ನು ಯಾರು ಸಿದ್ಧಪಡಿಸಿದರೋ ಅದನ್ನು ಸಿದ್ಧಪಡಿಸುವುದಕ್ಕೆ ಮುಂಚಿತವಾಗಿ ಕರ್ನಾಟಕ ರಾಜ್ಯದ ಇಕನಾಮಿಕ್ ಅಂಡ್ ಪ್ಲಾನಿಂಗ್ ಕೌನ್ಸಿಲ್ಲಿನಲ್ಲಿ ಚಿಂತನೆ ಆಯಿತು ಆ ಚಿಂತನೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಅವಲಂಬಿಸಿಕೊಂಡು ನಾನು ಮಾತನಾಡುತ್ತಿದ್ದೇನೆ ಅದನ್ನು ಬಿಟ್ಟು ಯಾವುದೋ ವಿಷಯಗಳನ್ನು ನನ್ನ ಭಾಷಣದಲ್ಲಿ ಪ್ರಸ್ತಾಪ ಮಾಡುವುದಿಲ್ಲ ಅಂದುಕೊಂಡಿದ್ದೇನೆ. ಅಲ್ಲಿಂದ ಇಲ್ಲಿಂದ ವಿಚಾರ ಬರಬಹುದು. ಆದರೆ ಮೂಲಭೂತವಾದ ಚಿಂತನೆ ಅಲ್ಲಿ ಏನಿತ್ತು ಅದನ್ನೇ ಹೇಳುವುದಕ್ಕೆ ಬಯಸುತ್ತೇನೆ. ಅದಕ್ಕೆ ಮುಂಚಿತವಾಗಿ ಹೇಳುವುದು, ಯಾವುದೇ ಚಿಂತನೆ ಸಮಗ್ರವಾಗಿ ಆದಾಗ, ಸರ್ಕಾರ ಅದನ್ನು ಕೈಗೆತ್ತಿಕೊಂಡಾಗ ಅದಕ್ಕೆ ನಿಷ್ಠೆಯನ್ನು ತೋರಿಸಬೇಕಾದುದು ಅಗತ್ಯವಿದೆ. ಸಮಗ್ರ ಚಿಂತನೆಯಲ್ಲಿ ತಮಗೆ ಅನುಕೂಲ ಕಂಡಂತಹ ವಿಚಾರಗಳನ್ನು ಆರಿಸಿಕೊಂಡು ಜಾರಿಗೆ ಕೊಡಲಿಕ್ಕೆ ಹೋದರೆ ಅದು ಜಾರಿಗೆ ಬರುವುದಿಲ್ಲ. ಯಾವ ಉದ್ದೇಶದಿಂದ ಯೋಜನೆ ಸಿದ್ಧವಾಯಿತು ಅದು ಕಾರ್ಯಗತವಾಗುವುದಿಲ್ಲ, ಅಂಥ ಕಾಲದಲ್ಲಿ ಯೋಜನೆಗಳನ್ನು ಸಹಗಮನ ಮಾಡುವುದು ಸಾಧ್ಯ ಇದೆ. ಸಹಗಮನ ಎಂದರೆ ಆ ಕಾಲದಲ್ಲಿ ಇದ್ದ ಪದ್ಧತಿ ಅಂದರೆ ಗಂಡ ಸತ್ತಾಗ ಅವನ ಜೊತೆಯಲ್ಲಿ ಹೆಂಡತಿಯೂ ಸಾಯುತಕ್ಕದ್ದು ಇತ್ತು

ಅಂದಾಗ ಈಗ ನಾವು ಸಾಯುತಕ್ಕದ್ದು ಅಲ್ಲ. ಈ ರೀತಿ ಚಿಂತನೆಯನ್ನು ಈ ವಿಚಾರದಲ್ಲಿ ಮಾಡು ವುದಕ್ಕಾಗುವುದಿಲ್ಲ. ಒಂದು ಸಮಗ್ರ ಯೋಜನೆಯನ್ನು ಕೊಟ್ಟಾಗ ಅದನ್ನು ಅಷ್ಟೇ ನಿಷ್ಠೆಯಿಂದ ಕಾರ್ಯಗತ ಮಾಡಿದರೆ ಒಂದಕ್ಕೊಂದು ಪೂರಕವಾಗಿ ಹೊಂದಿಕೊಂಡು ಹಲವಾರು ವಿಷಯಗಳು ಇರುವಾಗ ಯಾವುದೋ ಒಂದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಕೈಗಾರಿಕೆಗಳ ಸ್ವಭಾವವನ್ನು ಆಲೋಚಿಸಬೇಕು. ಸಾರ್ವಜನಿಕ ವೇದಿಕೆಗಳಲ್ಲಿ ಹೇಳುವುದಕ್ಕೆ ಚೆನ್ನಾಗಿದೆ ರಾಜ್ಯಾದ್ಯಂತ ಮೇಲಿಂದ ಮೇಲೆ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುತ್ತೇವೆಂದರೆ ಸಾಧ್ಯವಿಲ್ಲ. ಕೈಗಾರಿಕೆ ಗಳಿಗೂ ಸ್ವಭಾವ ಇದೆ. ಒಂದೊಂದನ್ನು ಮಾಡಿದರೆ ಬದುಕುವುದಕ್ಕೆ ಕಷ್ಟವಾಗುತ್ತದೆ. ಎಲ್ಲಾ ಊರಿನಲ್ಲಿ ಕೈಗಾರಿಕೆ ಮಾಡುತ್ತೇವೆಂಬುದು ಅಷ್ಟು ಸುಲಭ ಸಾಧ್ಯವಲ್ಲ. ಎಲ್ಲೆಲ್ಲಿ ಕೈಗಾರಿಕೆಗಳ ಬೆಳವಣಿಗೆ ಒಂದು ವಾತಾವರಣ ನಿರ್ಮಾಣವಾಗುವ ಸಾಧ್ಯತೆಗಳು ಇವೆ, ಪೂರಕ ಅಂಶಗಳು ಕೂಡಿ ಬಂದಿವೆ ಅಂಥ ಜಾಗಗಳಲ್ಲಿ ಮಾಡಬೇಕು. ಕೈಗಾರಿಕೆಗಳ ಬೆಳವಣಿಗೆ ಸಾಧ್ಯತೆ ಇರುವ ಕೇಂದ್ರ ಗಳನ್ನು ಗ್ರೋತ್ ಸೆಂಟರ್ಸ್ ಎಂದು ಹೇಳುತ್ತೇವೆ. ಅಂಥ ಕಡೆ ಮಾತ್ರ ಮಾಡಬೇಕು. ಇದಕ್ಕೆ ಕೆಲವೊಂದು ಪರಿಮಿತಿಗಳು ಇವೆ. ವೇದಿಕೆ ಮೇಲೆ ಏನು ಬೇಕಾದರೂ ಹೇಳಬಹುದು ಆದರೆ ಇಲ್ಲಿ ಚಿಂತನೆ ಮಾಡಬೇಕಾದರೆ ಯಾವ ಪರಿಮಿತಿಗಳು ಇವೆ, ಇತಿಮಿತಿಗಳು ಇವೆ ಎಂಬುದನ್ನು ಕಲ್ಪನೆ ಮಾಡದೇ ಮಾತನಾಡುವುದು ಸರಿಯಲ್ಲ. ಮೂಲ ಹಂದರ ಸಿದ್ಧವಾದರೆ ಸಣ್ಣ ಕೈಗಾರಿಕೆಗಳ ಬಲವನ್ನು ಹೆಚ್ಚಿಸಬಹುದು, ಕೈಗಾರಿಕೆಗಳು ಬೆಳೆಯುತ್ತವೆ. ಸಣ್ಣ ಕೈಗಾರಿಕೆಗಳನ್ನು ಭಾರಿಯಾಗಿ ಬೆಳೆಸುತ್ತೇವೆಂದು ಹೇಳುವುದು ಸಾಧ್ಯವಿಲ್ಲ. ಕೆಲವೊಂದು ದೊಡ್ಡ ಕೈಗಾರಿಕೆಗಳನ್ನು ರಕ್ಷಣೆ ಮಾಡಿಕೊಳ್ಳಬೇಕಾಗುತ್ತದೆ ದೊಡ್ಡ ಕೈಗಾರಿಕೆಗಳನ್ನು ಕಾಂಗ್ರೆಸ್ಸಿನವರು ಮಾಡಿದರು, ನಾವು ಸಣ್ಣ ಕೈಗಾರಿಕೆಗಳನ್ನು ಮಾಡುತ್ತೇವೆಂದು ಹೇಳುವುದು ಸಲ್ಲದ ಮಾತು. ದೊಡ್ಡ ಕೈಗಾರಿಕೆಗಳು ಇದ್ದರೆ ಸಣ್ಣ ಕೈಗಾರಿಕೆಗಳು ಬೆಳೆಯುವುದಕ್ಕೆ ಆಗುತ್ತದೆ. ಸಿಮೆಂಟ್ ಸ್ಟೀಲ್ ಎಲ್ಲದಕ್ಕೂ ಸಣ್ಣ ಕೈಗಾರಿಕೆ ಮಾಡುತ್ತೇವೆ. ಸಣ್ಣ ಕೈಗಾರಿಕೆಗಳ ಬಳ್ಳಿ ಹಬ್ಬಿಸುತ್ತೇವೆಂದರೆ ಅನಾಹುತವಾಗುತ್ತದೆ. ಸಾವಿರ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕಿಂತ ಮುಖ್ಯವಾಗಿ ಹಾಳಿ ಇರತಕ್ಕ ಕೈಗಾರಿಕೆಗಳಿಗೆ ರಕ್ಷಣೆ ಕೊಡುವುದು ಅತಿ ಮುಖ್ಯ ಸರ್ಕಾರ ಈ ರೀತಿ ಘೋಷಣೆ ಮಾಡುವಾಗ ದೊಡ್ಡ ಅಪಾಯ ಇದೆ. ನಮ್ಮ ಬ್ಯೂರೋಕ್ರಸಿ ಏನಿದೆ, ಆಡಳಿತ ಯಂತ್ರ ಏನಿದೆ ಅದರಲ್ಲಿ ಎಲ್ಲಾ ಬುದ್ಧಿ ವಂತರು ಇದ್ದಾರೆ. ಆದರೆ ಅವರಿಗೆ ಒಂದು ಮಿತಿ ಇದೆ ಸರ್ಕಾರ ಸಾವಿರ ಕೈಗಾರಿಕೆಗಳನ್ನು ಮಾಡುವುದೇ ನಮ್ಮ ಕೆಲಸವೆಂದು ಹೊರಟರೆ ಹಾಳಿ ಇರತಕ್ಕ ಕೈಗಾರಿಕೆಗಳ ಕಡೆ ಯಾವ ರೀತಿ ಗಮನ ಕೊಡಬೇಕೆಂಬುದು ಮನವರಿಕೆಯಾಗುವುದಿಲ್ಲ. ಸರ್ಕಾರದ ಬಗ್ಗೆ ನಾವು ಏನು ತಿಳಿದುಕೊಂಡಿ ರುತ್ತೇವೆಂದರೆ ಅದನ್ನು ನಾವು ಹೇಳಿದ್ದೇವೆ, ಅದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಅಂದು ಕೊಂಡಿರುತ್ತೇವೆ. ಆದರೆ ನಾವು ಹೇಳಿದ್ದು ಅಷ್ಟೇ ತಲೆಯಲ್ಲಿ ಹೋಗಿರುವುದರಿಂದ ಅನಾಹುತಗಳು ಆಗುತ್ತವೆ. ೩ ೪ ವರ್ಷಗಳಾದ ಮೇಲೆ ಅದರ ಪರಿಣಾಮ ಗೊತ್ತಾಗುತ್ತದೆ. ಸಣ್ಣ ಕೈಗಾರಿಕೆ ಗಳನ್ನು ಸ್ಥಾಪಿಸಬೇಕೆಂದರೆ, ಯಾವುದೇ ಕೈಗಾರಿಕೆ ಹಾಕಬೇಕಾದರೆ ಅದರ ಉತ್ಪಾದನೆ, ಅದಕ್ಕೆ ಬೇಕಾದ ಸಾಲದ ವ್ಯವಸ್ಥೆ, ಅದಕ್ಕೆ ಬೇಕಾದ ಮಾರುಕಟ್ಟೆ ವ್ಯವಸ್ಥೆ ಈ ಮೂರರ ಕಡೆಗೆ ನಾವು ಪ್ರಪ್ರಥಮವಾಗಿ ಗಮನ ಹರಿಸಬೇಕು. ಒಂದು ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂಬ ಗುರಿಯನ್ನು ಏನು ಇಟ್ಟುಕೊಂಡಿದ್ದೀರಿ ಅದರಿಂದ ನನ್ನ ಚರ್ಚೆಯನ್ನು ಪ್ರಾರಂಭಿ ಸುವುದಕ್ಕೆ ಬಯಸುತ್ತೇನೆ. ಇದರ ಮೇಲೆ ಪ್ರಶ್ನೆ ಹಾಕಿ ಸಾವಿರದಲ್ಲಿ ೨೦೦ ಆಯಿತೆ ೫೦೦ ಆಯಿತೆ ಎಂದು ಕೇಳುವುದಕ್ಕೆ ಬಯಸುವುದಿಲ್ಲ. ಆ ಅಂಕಿಸಂಖ್ಯೆಗಳನ್ನು ನೀವು ಕೊಡಬಹುದು ಸಾವಿರ ಅಥವಾ ೨೦೦ ೫೦೦ ಆಗಿರಬಹುದು. ಅದರಲ್ಲಿ ಮಹತ್ವ ಇದೆ ಎಂದು ತಿಳಿದುಕೊಂಡಿಲ್ಲ. ಸಾವಿರ ಕೈಗಾರಿಕೆಗಳನ್ನು ಒಂದು ತಿಂಗಳಲ್ಲಿ ಸ್ಥಾಪಿಸುವ ದೊಡ್ಡ ಗುರಿಯನ್ನು ಇಟ್ಟುಕೊಂಡಿದ್ದೀರಿ, ಅದು ತಪ್ಪು ಎಂದು ಹೇಳುವುದಿಲ್ಲ. ಆದರೆ ಆ ಗುರಿಯನ್ನು ಘೋಷಣೆ ಮಾಡಿದರೆ ಸಾಲದು, ಆ ಗುರಿಯನ್ನು ತಲುಪಲು ಬೇಕಾಗತಕ್ಕ ವ್ಯವಸ್ಥೆ ಮಾಡಿದ್ದೀರಾ ಎಂಬುದು ಮುಖ್ಯ. ಆ ವ್ಯವಸ್ಥೆಗೆ ಮೊಟ್ಟ ಮೊದಲನೆಯದಾಗಿ ಏನಾಗಬೇಕೆಂದರೆ ಸಾಲದ ಪೂರೈಕೆ ಆಗಬೇಕು, ಇವತ್ತು ಸಣ್ಣ ಕೈಗಾರಿಕೆಗಳಿಗೆ ದೊಡ್ಡ ಪ್ರಮಾಣದಲ್ಲಿ ಸಾಲ ಕೊಡತಕ್ಕ ಸಂಸ್ಥೆ ಎಂದರೆ ಕೆ. ಎಸ್. ಎಫ್. ಸಿ. ಆ ಸಂಸ್ಥೆ ಈವರೆಗೆ ಮಾಡಿರುವ ಕೆಲಸವನ್ನು ನಾನು ಅವಲೋಕಿಸಿದ್ದೇನೆ. ಅದು ಸಾಕಷ್ಟು ಕೆಲಸ ಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದೆ ಎಂದು ಹೇಳಬಯಸುತ್ತೇನೆ. ೧೯೮೪–೮೫ರ ವಾರ್ಷಿಕ ವರದಿಯಲ್ಲಿ ಎಷ್ಟು ಸಾಲ ಕೊಟ್ಟಿದ್ದಾರೆಂಬುದನ್ನು ಹೇಳಿದ್ದಾರೆ. ಈ ವರ್ಷ ವಾರ್ಷಿಕ ವರದಿ ಇನ್ನೂ

ನನ್ನ ಕೈಸೇರಲಿಲ್ಲ. ಬರೀ ಇಲಾಖೆಯ ವರದಿ ಮಾತ್ರ ಬಂದಿದೆ. ಆದ್ದರಿಂದ ಈ ವರ್ಷ ಕೊಟ್ಟಿದೆ ಎಂದು ಹೇಳಿದ್ದಾರೆ. ನಾನು ಕೇಳುವುದು ಒಂದು ಸಾವಿರ ಕೈಗಾರಿಕೆಗಳನ್ನು ಒಂದು ತಿಂಗಳಿಗೆ ಸ್ಥಾಪನೆ ಮಾಡಿಕೊಂಡು ಹೋಗುವುದಕ್ಕೆ ಬೇಕಾದ ಸಾಲದ ಪೂರೈಕೆ ಬಗ್ಗೆ ಏನೆಲ್ಲ ಮಾಡಿದ್ದೀರಿ ? ಕೆ. ಎಸ್. ಎಫ್. ಸಿ. ಯೋಚನೆ ಮಾಡಿದೆಯೇ ಇನ್ನು ಇರತಕ್ಕ ಸರ್ಕಾರದ ಆ ವರ್ಷಗಳ ಅವಧಿಗೆ ಸಂಬಂಧಪಟ್ಟಂತೆ ಸಾವಿರ ಕೈಗಾರಿಕೆಗಳ ಸ್ಥಾಪನೆಗೆ ಸಂಬಂಧಪಟ್ಟ ಹಾಗೆ ಒಂದು ಕ್ರೆಡಿಟ್ ಪ್ಲಾನ್ ಅನ್ನು ಕೆ.ಎಸ್.ಎಫ್.ಸಿ.ಯವರು ಇಟ್ಟುಕೊಂಡಿದ್ದಾರೆಯೇ ? ಆ ವಿಚಾರದಲ್ಲಿ ಸರ್ಕಾರದ ಸ್ಪಷ್ಟೀಕರಣವನ್ನು ಬಯಸುತ್ತೇನೆ.

ಏಕೆಂದರೆ ಆ ರೀತಿ ಒಂದು ಕ್ರೆಡಿಟ್ ಪ್ಲಾನ್ ಇಲ್ಲದೇ ಹೋದರೆ ಅದಕ್ಕೆ ಬೇಕಾಗತಕ್ಕಂಥ ಹಣವನ್ನು ನಾವು ಸಿದ್ಧಮಾಡಿಟ್ಟುಕೊಳ್ಳದೇ ಹೋದರೆ ಸಾವಿರಾರು ಕೈಗಾರಿಕೆಗಳು ಇರಲಿ ಐದು ನೂರು ಕೈಗಾರಿಕೆಗಳೂ ಬರುವುದಿಲ್ಲ. ಕೇವಲ ಪೇಪರ್ ಮೇಲೆ ಉಳಿಯುತ್ತದೆ. ಕೈಗಾರಿಕೆಗಳು ಸ್ಥಾಪನೆಯಾಗುವುದಕ್ಕೆ ಆಗುವುದಿಲ್ಲ. ಮೂಲಭೂತವಾಗಿ ಬಂಡವಾಳ ಬೇಕಾಗುತ್ತದೆ. ಆ ಒಂದು ಕೈಗಾರಿಕೆ ಸಾವಿರಾರು ಕೈಗಾರಿಕೆಗಳನ್ನು ಅದರಲ್ಲೂ ಕೂಡ ಗ್ರಾಮೀಣ ಭಾಗಗಳಲ್ಲಿ ಅಲ್ಲಲ್ಲಿ ಬೆಳವಣಿಗೆಗೆ ಸಾಧ್ಯತೆ ಇರತಕ್ಕಂಥ ಗ್ರೋತ್ ಸೆಂಟರ್ಸ್‌ನ್ನು ಗುರುತಿಸಿ ಬೆಳೆಸಬೇಕು ಎಂದು ಹೇಳಿದರೆ ಆ ಒಂದು ಸ್ಟೇಟ್ ಎಕನಾಮಿಕ್ ಪ್ಲಾನಿಂಗ್ ಅಂಡ್ ಕೌನ್ಸಿಲ್ ಬಗ್ಗೆ ಅವರು ಹೇಳಿದ್ದಾರೆ. ಆ ಒಂದು ಕೆಲಸ ನಾವು ಮಾಡಬೇಕು ಎಂದು ಇದ್ದರೆ ಇವತ್ತು ಏನು ನಮ್ಮ ಕೈಗಾರಿಕೆ ಇಲಾಖೆ ಇದೆ, ಅದನ್ನು ಸಂಪೂರ್ಣವಾಗಿ ರೀ-ಸ್ಟ್ರಕ್ಚರ್ ಮಾಡಬೇಕಾಗುತ್ತದೆ. ಈಗಿರುವ ವ್ಯವಸ್ಥೆಯನ್ನು ಇಟ್ಟುಕೊಂಡು ದೊಡ್ಡ ಸಾಧನೆಯನ್ನು ಮಾಡುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಯಾರು ಈ ಒಂದು ಕೈಗಾರಿಕೆ ನೀತಿಯ ಚಿತ್ರವನ್ನು ನಮಗೆ ಒದಗಿಸುವುದಕ್ಕೆ ಚಿಂತನೆಯನ್ನು ಮಾಡಿದರೋ ? ಅದೇ ಜನಗಳು ಈ ಮಾತನ್ನು ಹೇಳಿದ್ದಾರೆ ಹೋದ ವರ್ಷ ಏನು ಕೆಲಸವನ್ನು ಮಾಡಿದ್ದಾರೆ ? ಅದನ್ನು ಈ ವರ್ಷದ ರಿಪೋರ್ಟ್‌ನಲ್ಲಿ ಹೇಳಿದ್ದೀರಿ. ತೀವ್ರವಾಗಿ ಸಣ್ಣ ಕೈಗಾರಿಕೆಗಳನ್ನು ಬೆಳೆಸುವುದಕ್ಕೋಸ್ಕರ ಸಿಂಗಲ್ ವಿಂಡೋ ಏಜೆನ್ಸಿಯನ್ನು ನಾವು ಜಿಲ್ಲಾ ಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ ಜಾರಿಗೆ ಕೊಟ್ಟಿದ್ದೀರಿ, ಒಳ್ಳೆಯ ಕೆಲಸ. ಸಿಂಗಲ್ ವಿಂಡೋ ಮಾಡಿರತಕ್ಕಂಥ ಹಿಂದಿನ ಸ್ಥಿತಿಯನ್ನು ಅರ್ಥ ಮಾಡಿಕೊಂಡರೆ ಸಿಂಗಲ್ ವಿಂಡೋ ಏಜೆನ್ಸಿ ಇನ್ನೊಂದು ರೀತಿಯ ಒಂದು ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದೀರಿ. ಅದು ಸರಿಯಾದಂಥ ಹೆಜ್ಜೆ. ಆದರೆ ಇವತ್ತಿನ ಅನುಭವದಲ್ಲಿ ಸಿಂಗಲ್ ವಿಂಡೋ ಸಿಸ್ಟಂ ಇದೆ. ಇನ್ನೂ ಕೂಡ ಸಮರ್ಪಕವಾಗಿಲ್ಲ. ಇವತ್ತು ಅವರು ಹೇಳುವಂಥ ಚಿಂತನೆಯಲ್ಲಿ ಸ್ಪಷ್ಟವಾಗಿರತಕ್ಕಂಥ ವಿಚಾರ ಏನು ಎಂದು ಹೇಳಿದರೆ ಗುಜರಾತಿನಲ್ಲಿ ಈ ಸಿಂಗಲ್ ವಿಂಡೋ ಸಿಸ್ಟಂ ಒಂದೇ ಮುಂದಿನ ಹೆಜ್ಜೆ. ಎಸ್ಕಾರ್ಟ್ ಸಿಸ್ಟಂ ಎನ್ನತಕ್ಕಂಥದ್ದು ಜಾರಿಯಲ್ಲಿದೆ. ಅಂದರೆ ಅಲ್ಲಿರತಕ್ಕಂಥ ಬ್ಯೂರೋ ಏನು ಇದೆ ಅದು ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟ ಇಂಡಸ್ಟ್ರಿಯಲ್ ಎಕ್ಸ್‌ಟೆನ್ಷನ್ ಬ್ಯೂರೋ. ಕೈಗಾರಿಕೆಯನ್ನು ಸ್ಥಾಪನೆ ಮಾಡತಕ್ಕಂಥ ವ್ಯಕ್ತಿ ಅಲ್ಲಿ ಹೋದರೆ ಅವನು ಕೈಗಾರಿಕೆಗಳಿಗೆ ಬೇಕಾಗತಕ್ಕಂಥ ಪ್ಲಾನ್ಸ್, ಡಿಸೈನ್‌ನಿಂದ ಹಿಡಿದು ಅದಕ್ಕೆ ಬೇಕಾಗತಕ್ಕಂಥ ಜಮೀನು, ನೀರು, ವಿದ್ಯುಚ್ಛಕ್ತಿ ಹಣದ ಪೂರೈಕೆ ಇತ್ಯಾದಿ ಎಲ್ಲವನ್ನು ಕೂಡ ಅವ ಬಿಟ್ಟರೂ ಇವ ಬಿಡದೆ ಬೆನ್ನು ಹತ್ತಿ ಮಾಡಿಸತಕ್ಕಂಥದ್ದು ಇದೆ. ಕಿಟಕಿ ಬಾಗಿಲು ತೆರೆಯುತ್ತೀರಿ. ಕಿಟಕಿಯಲ್ಲಿ ಬಂದು ವ್ಯವಹಾರ ಮಾಡಬೇಕು. ಬಾಗಿಲು ಒಳಗೆ ಹಾಕಿಕೊಂಡು ಬೆನ್ನು ಹತ್ತುವಂಥ ಪರಿಸ್ಥಿತಿ, ಕೆಲಸ ಮಾಡಿಸತಕ್ಕಂಥ ಸಾಧ್ಯತೆ ಇದೆ. ಕಲ್ಪನೆಯಲ್ಲಿ ಬೇರೆ ಯಾವುದೇ ಇಲ್ಲದಿದ್ದರೂ ಕೂಡ ಪರಿಣಾಮಕಾರಿಯಾಗಿ ಉತ್ತಮ ಎಂದು ಕಂಡುಬಂದಿರುವುದರಿಂದ ಸಿಂಗಲ್ ವಿಂಡೋ ಅಥವಾ ಎಸ್ಕಾರ್ಟ್ ಸಿಸ್ಟಂ ಎಂದು ಕರೆಯಿರಿ ? ಗುಜರಾತಿನಲ್ಲಿ ಅದರಲ್ಲೂ ಒಂದು ಅನುಭವ ಬಂದಿದೆ. ಬಹಳ ಉತ್ತಮವಾದಂಥ ಅನುಭವವನ್ನು ಪಡೆದಿದ್ದಾರೆ ಮತ್ತು ಅವರಿಗೆ ಗುಜರಾತ್ ಕೈಗಾರಿಕೆ ಸಣ್ಣ ಕೈಗಾರಿಕೆಗಳ ವಿಸ್ತರಣೆಗೆ ದೊಡ್ಡ ರೀತಿಯ ಒಂದು ಪಾತ್ರ ನಿರ್ವಹಣೆಯಾಗಿದೆ ಎಂದು ತಿಳಿದುಬಂದಿರುವುದರಿಂದ ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಅತಿ ಶೀಘ್ರವಾಗಿ ಈ ಸಿಂಗಲ್ ವಿಂಡೋ ಪದ್ಧತಿಯನ್ನು ಗುಜರಾತಿನ ಚಾಲ್ತಿಯಲ್ಲಿರತಕ್ಕಂಥ ಎಸ್ಕಾರ್ಟ್ ಸಿಸ್ಟಂಗೆ ಬದಲಾಯಿಸುವ ಅಥವಾ ಆ ರೀತಿಯಲ್ಲಿ ಅಭಿವೃದ್ಧಿಪಡಿಸುವ ಕಡೆಗೆ ಗಮನಹರಿಸಬೇಕು. ಆ ಪ್ರಯತ್ನವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಈ ರೀತಿಯ ಒಂದು ಸಿಸ್ಟಂನ್ನು ನಮ್ಮ ಜಿಲ್ಲೆಗಳು ಮತ್ತು ರಾಜ್ಯ ಮಟ್ಟದಲ್ಲಿ ಜಾರಿಗೆ ತರಬೇಕು ಇವತ್ತು ಆ ಸಣ್ಣ ಕೈಗಾರಿಕಾ ವಲಯದಲ್ಲಿ ನಮ್ಮ ರಾಜ್ಯದಲ್ಲಿ ಸಾಧ್ಯತೆಗಳು ಬಹಳ ಇದೆ. ಎಲೆಕ್ಟ್ರಾನಿಕ್ಸ್

ಇದಕ್ಕೆ ವಿದ್ಯುತ್ ಅಗತ್ಯ ಇಲ್ಲ. ಸಾಕಷ್ಟು ಉದ್ಯೋಗವನ್ನು ಕೊಡತಕ್ಕಂಥ ಒಂದು ಕೈಗಾರಿಕೆ. ವ್ಯಾಪಕವಾದಂಥ ರೀತಿಯಲ್ಲಿ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಎಲೆಕ್ಟ್ರಾನಿಕ್ಸ್ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯತೆ ಇದೆ. ಅದರ ಬಗ್ಗೆ ಕೆಲವೊಂದು ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರ ಈಗಾಗಲೇ ಕೈಗೊಂಡಿದೆ. ಆ ಕಾರ್ಯಕ್ರಮವನ್ನು ಇನ್ನಷ್ಟು ಬಲಪಡಿಸಬೇಕು ಮತ್ತು ಇನ್ನಷ್ಟು ಅರ್ಥ ಒತ್ತನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಲ್ಲಿ ಇವತ್ತು ಆಗಿದೆ. ಹಲವಾರು ರೀತಿಯ ಅದಿರುಗಳು ನಮ್ಮಲ್ಲಿ ಸಿಗುತ್ತಿವೆ. ಇವತ್ತು ಅದಿರನ್ನು ಭೂಮಿಯಿಂದ ಅಗೆದು ತೆಗೆದು ರಫ್ತು ಮಾಡತಕ್ಕಂಥದ್ದು ಒಂದು ಪರಾಕ್ರಮವಾಗಿದೆ. ಇದು ಒಂದು ರೀತಿಯ ಅವಿವೇಕದ ಕೆಲಸ. ಒಂದು ರಾಷ್ಟ್ರದಲ್ಲಿ, ರಾಜ್ಯದಲ್ಲಿ ಇರತಕ್ಕಂಥ ಅದಿರನ್ನು ತೆಗೆದು ತೆಗೆದು ರಫ್ತು ಮಾಡತಕ್ಕಂಥದ್ದು ಹಲವಾರು ದೃಷ್ಟಿಯಿಂದ ನೋಡಿದಾಗ ಅವಿವೇಕದ ಕೆಲಸ ಎಂಬುದು ಗೊತ್ತಾಗುತ್ತದೆ. ಒಂದು ದಿವಸ ಗೊತ್ತಾಗದೇ ಇರಬಹುದು. ಅಮೇರಿಕಾ ಚೈನಾ, ರಷ್ಯಾ ದೇಶಗಳು ತಮ್ಮ ಭೂಗರ್ಭದ ನಿಕ್ಷೇಪಗಳನ್ನು ಭದ್ರವಾಗಿ ಉಳಿಸಿಕೊಂಡು ಬೇರೆ ದೇಶಗಳಿಂದ ಲೂಟಿ ಮಾಡುತ್ತಿದ್ದಾರೆ. ಇದರಿಂದಾಗಿ ನಮ್ಮ ಅದಿರುಗಳಾಗಲೀ, ನಿಕ್ಷೇಪಗಳಾಗಲೀ. ನಮ್ಮಲ್ಲಿ ಕಡಿಮೆಯಾಗುತ್ತಾ ಬಂದಿದೆ. ಸ್ವಾತಂತ್ರ್ಯ ಬಂದು ೧೫–೨೦ ವರ್ಷಗಳಿಂದಲೂ ಭೂಮಿಯಲ್ಲಿ ಅಗೆದು ತೆಗೆದು ಬೇರೆ ದೇಶಕ್ಕೆ ಕಳುಹಿಸಿ ಬಿಟ್ಟರೆ ಭಾರಿ ಅನಾಹುತ ಆಗುತ್ತದೆ. ಬಹಳ ದೊಡ್ಡ ಅನ್ಯಾಯವಾಗುತ್ತದೆ. ಇವತ್ತು ನಮ್ಮಲ್ಲಿ ಕಬ್ಬಿಣ, ಮ್ಯಾಂಗನೀಸ್, ಕ್ರೋಮೈಟ್, ಬಾಕ್ಸೈಟ್ ಮುಂತಾದ ಅದಿರುಗಳಿವೆ. ಎಲ್ಲಾ ಅದಿರುಗಳನ್ನೂ ಕೂಡ ಇವತ್ತು ನಮ್ಮ ಸಣ್ಣ ಕೈಗಾರಿಕೆ ವಲಯದಲ್ಲಿ ಅದರ ಉಪಯೋಗ ಆಗುವ ರೀತಿಯಲ್ಲಿ ಪ್ರೊಸೆಸಿಂಗ್ ಆಗುವ ರೀತಿಯಲ್ಲಿ ಗಮನ ಹರಿಸಬೇಕು. ದೊಡ್ಡ ತೊಂದರೆ ಏನೆಂದರೆ ಕೆಲವೊಂದು ಅದಿರುಗಳನ್ನು ಸಂಸ್ಕರಣ ಮಾಡುವುದಕ್ಕೆ ಹೋದರೆ ಅದಕ್ಕೆ ವಿದ್ಯುಚ್ಛಕ್ತಿ ಹೆಚ್ಚು ಬೇಕಾಗತಕ್ಕಂಥ ಸಂದರ್ಭಗಳು ಬರಬಹುದು. ಆದರೆ ವಿದ್ಯುತ್ತನ್ನು ಉಪಯೋಗಿಸದೇ ಇರತಕ್ಕಂಥದ್ದನ್ನು ಪ್ರೋಸೆಸಿಂಗ್ ಇರುವಂಥದ್ದನ್ನು ಮಾಡಬಹುದು. ನಾವುಗಳು ಎಷ್ಟೋ ಕಡೆ ನೋಡಿದ್ದೇವೆ. ದೊಡ್ಡ ದೊಡ್ಡ ಗ್ರಾನೈಟ್ ಸ್ಟೋನ್ ಇದ್ದಂಥ ಸ್ಥಿತಿಯಲ್ಲಿ ಜಪಾನ್‌ಗೆ ರಫ್ತಾಗಿ ಅಲ್ಲಿ ಪಾಲಿಷ್ ಆಗಿಬರುತ್ತದೆ. ಒಂದು ದೃಷ್ಟಿಯಿಂದ ವಿಶೇಷವಾಗಿ ವಿದ್ಯುತ್ತನ್ನು ಉಪಯೋಗಿಸದೇ ಅದಿರನ್ನು ಕೊನೆಯ ಪಕ್ಷ ಒಂದು ಹಂತದ ಸಂಸ್ಕರಣಕ್ಕೆ ಒದಗಿಸುವಂಥ ಸಾಧ್ಯತೆಗಳು ಇದೆಯೋ ? ಅದರ ಕಡೆ ತಕ್ಷಣ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನೊಂದು ಪ್ರಾಮುಖ್ಯವಾದ ವಿಚಾರ. ವ್ಯವಸಾಯವು ಸಾಕಷ್ಟು ಪ್ರಮಾಣದಲ್ಲಿ ಬೆಳೆದಿದ್ದು ಉತ್ಪಾದನೆಯೂ ಬೆಳೆದಿದೆ. ಅವನು ಬೆಳೆದ ಬೆಳೆಗೆ ನ್ಯಾಯಬೆಲೆ ಸಿಗಬೇಕು ಎಂದು ಸಹಜವಾದ ಅವರ ಒಂದು ಬೇಡಿಕೆ ಇದೆ. ಅವರು ಉಗ್ರವಾದಂಥ ಹೋರಾಟಗಳಲ್ಲೂ ಈಗ ತೊಡಗಿದ್ದಾರೆ. ರೈತ ಹೇಳತಕ್ಕಂಥದ್ದು ಸತ್ಯ. ಅವನು ಬೆಳೆಯುವುದಕ್ಕೆ ಬೇಕಾದ ವಸ್ತುವನ್ನು ದುಬಾರಿ ಬೆಲೆ ಕೊಟ್ಟು ಕೊಳ್ಳಬೇಕು. ಅವನು ಮಾರಾಟ ಮಾಡುವುದಕ್ಕೆ ಹೋದರೆ ಕೊಂಡುಕೊಳ್ಳುವವನು ಕೇಳಿದಷ್ಟಕ್ಕೇ ಕೊಡಬೇಕು. He buys in Seller,s market and Sells in buyer's market. Our farmer is subject to double Jeopardy. ಈ ರೀತಿಯ ಇಬ್ಬಗೆಯ ಒಂದು ಅನ್ಯಾಯಕ್ಕೆ ರೈತರು ತುತ್ತಾಗಿದ್ದಾರೆ. ಒಂದು ಕಡೆ ಬೆಳೆಯುವುದಕ್ಕೆ ಬೇಕಾದಂಥ ಪದಾರ್ಥಗಳಿಗೆ ಹೆಚ್ಚು ಬೆಲೆಯನ್ನು ತೆರಬೇಕು. ಇನ್ನೊಂದು ಕಡೆ ಬೆಳೆದಿದ್ದನ್ನು ಮಾರುವುದಕ್ಕೆ ಹೋದರೆ ಕಂಡವರು ಕೇಳಿದಷ್ಟಕ್ಕೆ ಕೇಳಿದಹೊತ್ತಿಗೆ ಕೊಡಬೇಕಾದಂಥ ಪರಿಸ್ಥಿತಿ ಇದೆ. ಇದನ್ನು ಬದಲಾಯಿಸುವುದಕ್ಕೆ ಸಾಧ್ಯತೆ ಇದೆಯೋ ? ಸರ್ಕಾರಿ ಆಜ್ಞೆಯಲ್ಲಿ ಪದಾರ್ಥಗಳ ಬೆಲೆ ಅಂದರೆ ಅಕ್ಕಿಗೆ ಬೆಲೆ ಇಷ್ಟು, ಕಬ್ಬಿಗೆ ಇಷ್ಟು ಎಂದು ಘೋಷಣೆ ಮಾಡಿದ್ದರಿಂದ ಬದಲಾವಣೆ ಆಗುವುದಿಲ್ಲ.

ರೈತ ಬೆಳೆದಿದ್ದಕ್ಕೆ ಸರಿಯಾದ ಬೆಲೆ ಇಲ್ಲ ಎಂಬುದು ಸತ್ಯಕ್ಕೆ ದೂರವಾದ ವಿಚಾರ. ಬೆಲೆ ಇದೆ. ಆದರೆ ಆ ಬೆಲೆ ಅವನಿಗೆ ಸಿಗದೆ ಮಧ್ಯವರ್ತಿಗೆ ಸೇರುತ್ತಿದೆ. ಈ ಮಧ್ಯವರ್ತಿಗಳಿಗೆ ಸಿಂಹಪಾಲು ಹೋಗಿ ಬೆಳೆದವನಿಗೆ ಮತ್ತು ತಿಂದವನಿಗೆ ಅನುಕೂಲವಾಗುತ್ತಿಲ್ಲ. ಲಾಭ ಪಡೆಯತಕ್ಕವರು ಮಧ್ಯವರ್ತಿಗಳು. ಅದನ್ನು ಬದಲಾವಣೆ ಮಾಡಬೇಕೆಂದರೆ ಕೈಗಾರಿಕಾ ನೀತಿಯಲ್ಲಿ ಪ್ರಪ್ರಥಮವಾಗಿ ಆಗ್ರೋಬೇಸ್ಡ್ ಕಡೆ ಗಮನ ಹರಿಸಬೇಕು. ವ್ಯವಸಾಯದ ಉತ್ಪಾದನೆಯಲ್ಲಿ ಒಂದು ಕಾಳೂ ಕೂಡ ಹೊರಗಡೆ ಹೋಗದ ರೀತಿಯಲ್ಲಿ ಮಾಡಿ ಸಂಸ್ಕರಣಕ್ಕೆ ಸಂಬಂಧಪಟ್ಟ ಕೈಗಾರಿಕೆಗಳನ್ನು ತಾಲ್ಲೂಕು ಮಟ್ಟದಲ್ಲೂ ಸ್ಥಾಪನೆ ಮಾಡಿ ರೈತನಿಗೆ ಪ್ರಯೋಜನ ಸಿಗುವಂತೆ ಮಾಡುವುದು ಮುಖ್ಯವಾದ ವಿಚಾರ. ನಮ್ಮ ರಾಜ್ಯದಲ್ಲಿ

ಬೆಳೆಯುವ ಹತ್ತಿ ತಮಿಳುನಾಡಿಗೆ ಹೋಗುತ್ತಿದೆ. ಎಣ್ಣೆ ಕಾಳು ಕೂಡ ಬೇರೆ ಕಡೆಗೆ ಹೋಗಿ ಬೆಳೆದವನು ಎಣ್ಣೆ ಕೊಂಡುಕೊಳ್ಳಬೇಕಾದರೆ ಅವನೇ ಮಾರಿಕೊಂಡು ಬಂದಿದ್ದರೆ ಎಷ್ಟು ಆಗುತ್ತಿತ್ತೋ ಅದರ ಹತ್ತು ಪಟ್ಟು ಹೆಚ್ಚು ಕೊಡಬೇಕಾದ ಸ್ಥಿತಿ ಇದೆ. ಆ ದೃಷ್ಟಿಯಿಂದ ಎರಡು ಹಂತದಲ್ಲಿ ಅಥವಾ ಒಂದು ಹಂತದಲ್ಲಿ ಸಂಸ್ಕರಣಗೊಳಿಸುವಂಥ ಕೆಲಸವನ್ನು ಮಾಡುವುದಲ್ಲದೆ ವ್ಯವಸಾಯವನ್ನು ಉಪಯೋಗಿಸಿ ಮಾಡಬೇಕಾದ ಕೈಗಾರಿಕೆಗಳಿಗೆ ವಿಶೇಷವಾದ ಗಮನವನ್ನು ಹರಿಸಿದರೆ ಆಗ ಸಾವಿರ ಕೈಗಾರಿಕೆಗಳನ್ನು ಮಾಡಬೇಕೆಂದು ಏನು ಹೇಳುತ್ತೀರಿ ಅದಕ್ಕೆ ಅನುಕೂಲವಾಗಬಹುದು. ಅದೇರೀತಿ ತೋಟಗಾರಿಕೆ ಕೂಡ ತೋಟಗಾರಿಕೆಯಲ್ಲಿ ಕೂಡಸಂಸ್ಕರಣಕ್ಕೆ ಸಂಬಂಧಪಟ್ಟ ಬೇಕಾದಷ್ಟು ಕೈಗಾರಿಕೆಗಳನ್ನು ಮಾಡುವ ಸಾಧ್ಯತೆ ಇದೆ ಸೆರಿಕಲ್ಚರ್‌ನಲ್ಲಿ ಇದ್ದೇ ಇದೆ. ಅದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಈ ಕಡೆಯಲ್ಲಿ ಕೈಗಾರಿಕಾ ವಿಸ್ತರಣೆ ಆಗಬೇಕು ಮತ್ತು ಇದಕ್ಕೆ ಸಂಬಂಧಪಟ್ಟ ವ್ಯವಸ್ಥೆ ಬಲಗೊಳ್ಳಬೇಕು. ೧೯೭೭ರಲ್ಲಿ ಕೇಂದ್ರದಲ್ಲಿದ್ದಂಥ ಜನತಾ ಪಕ್ಷದ ಸರ್ಕಾರ ಒಂದು ನೀತಿಯನ್ನು ಏನು ಘೋಷಣೆ ಮಾಡಿತ್ತು ಅದನ್ನು ರಾಷ್ಟ್ರಾದ್ಯಂತ ಜಾರಿಗೆ ತರುವುದಕ್ಕೆ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್‌ಗಳು ಸ್ಥಾಪನೆಯಾಯಿತು. ಹಿಂದೆ ಇದ್ದಂತ ಕಾಂಗ್ರೆಸ್ ಸರ್ಕಾರ ಜನತಾ ಪಕ್ಷದ ಸರ್ಕಾರ ಮಾಡಿದ್ದಕ್ಕಿಂತ ಹೆಚ್ಚಿನ ಕೆಲಸವನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪನೆ ಮಾಡುವುದರಲ್ಲಿ ಮಾಡಿತ್ತು. ದಿವಂಗತ ದೇವರಾಜ ಅರಸರ ಚಿಂತನೆ ಕೂಡ ಗ್ರಾಮೀಣ ಭಾಗಕ್ಕೆ ಕೈಗಾರಿಕೆಗಳನ್ನು ಹಬ್ಬಿಸುವುದರ ಕಡೆ ಇದ್ದುದರಿಂದ ಈ ನೀತಿಯನ್ನು ಸ್ವಾಗತಿಸಿ ಶ್ರದ್ಧಾಪೂರ್ವಕವಾಗಿ ಕೈಗಾರಿಕಾ ಕೇಂದ್ರಗಳ ಸ್ಥಾಪನೆಗೆ ತೀರ್ಮಾನ ಮಾಡಿ ಜಾರಿಗೆ ಕೊಟ್ಟರು. ಅನೇಕ ಜನರು ಹೇಳಿದ್ದಾರೆ, ಬೇರೆ ರಾಜ್ಯಕ್ಕಿಂತ ಉತ್ತಮ ರೀತಿಯಲ್ಲಿ ಕಾರ್ಯಗತ ಮಾಡಿದೆಯೆಂದು. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಹೊಸ ಕೈಗಾರಿಕಾ ನೀತಿಯ ಕಿಂಗ್‌ಪಿನ್ ಎಂದು ಹೇಳುತ್ತಾರೆ. ಸರ್ಕಾರ ಕೂಡ ತನ್ನ ವರದಿಯಲ್ಲಿ ಹೇಳಿದೆ. ಅಲ್ಲದೆ ಇನ್ನಿತರ ಸಂದರ್ಭಗಳಲ್ಲೂ ಈ ಪದ ಪ್ರಯೋಗವಾಗಿದೆ. ಆದರೆ ಅದಾಗಿದೆಯೆ ? ಹೊಸ ಕೈಗಾರಿಕೆ ಸ್ಥಾಪನೆಗೆ ಸಲಹೆ, ಸಹಾಯ ಮತ್ತು ಮಾರ್ಗದರ್ಶನ ಕೊಡಬೇಕು. ಕೈಗಾರಿಕಾ ಸ್ಥಾಪನೆಗೆ ಪ್ರಚೋದನೆ ಕೊಡಬೇಕು. ಈ ಎಲ್ಲ ವಿಚಾರಗಳನ್ನೂ ಜಿಲ್ಲಾ ಕೈಗಾರಿಕಾ ಕೇಂದ್ರ ನಿರ್ವಹಿಸಲೇಬೇಕೆಂಬುದು ಸರ್ಕಾರದ ಬಯಕೆ. ಈ ನೀತಿಯ ಚೌಕಟ್ಟಿನಲ್ಲಿ ಅದು ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ. ಆದರೆ ಆ ಕೆಲಸ ಆಗಿದೆಯೆ ? ಜಿಲ್ಲಾ ಕೈಗಾರಿಕಾ ಕೇಂದ್ರಗಳು ಯಾವ ಸ್ಥಿತಿಯಲ್ಲಿದೆ ಎಂಬುದರ ಕಡೆ ಗಮನ ಹರಿಸಬೇಕು. ಏಕೆಂದರೆ ನಿಮ್ಮ ನೀತಿಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಅದೇ ಏಜೆನ್ಸಿ. ಅದು ಸರಿಯಿಲ್ಲದೇ ಹೋದರೆ ನಿಮ್ಮ ನೀತಿ ಕಾರ್ಯಗತವಾಗುವುದಿಲ್ಲ ಅದು ಕಿಂಗ್‌ಪಿನ್. ಅದು ಕಿಂಗ್‌ಪಿನ್ ಈಗ ಆಗಿದೆಯೋ ? ನಾನು ತಿಳಿದುಕೊಂಡ ಮಟ್ಟಿಗೆ ಅದು ಕಿಂಗ್ ಪಿನ್ ಆಗಿಲ್ಲ. ಅದು ಇನ್ನೂ ಕೂಡ ಕೈಗಾರಿಕಾ ಇಲಾಖೆಯ ಕೇಶಾಲಂಕಾರದ ಹೇರ್‌ಪಿನ್ ಸ್ಥಿತಿಯಲ್ಲಿದೆಯೇ ಹೊರತು ಕಿಂಗ್‌ಪಿನ್ ಸ್ಥಿತಿಯಲ್ಲಿಲ್ಲ. ಅದು ಕೈಗಾರಿಕಾ ಇಲಾಖೆಯ ವಿಸ್ತರಣಾ ವಿಭಾಗವಾಗಿ ಕೆಲಸ ಮಾಡುತ್ತಿದೆಯೇ ಹೊರತು ನಿಮ್ಮ ನೀತಿ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಸ್ವಯಂ ಆಡಳಿತವನ್ನು ಪಡೆದುಕೊಂಡು, ಸ್ವಯಂ ಚಾಲನೆಯನ್ನು ಪಡೆದುಕೊಂಡ ಸಂಸ್ಥೆಯಾಗಿ ತಾನೇತಾನಾಗಿ ಕೆಲಸ ಮಾಡತಕ್ಕಂಥ ದೃಷ್ಟಿ ಏನು ಇಟ್ಟುಕೊಂಡಿದ್ದೀರಿ ಆ ಸ್ಥಿತಿಗೆ ಬಂದಿಲ್ಲ. ಆದ್ದರಿಂದ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಅವರಿಂದ ನಿರೀಕ್ಷಣೆ ಮಾಡುತ್ತಾ ಇರುವ ಹೊಸ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಅಗತ್ಯವಾದ ರೀತಿಯಲ್ಲಿ ಸಜ್ಜುಗೊಳಿಸುವುದಕ್ಕೆ ತೀವ್ರವಾಗಿ ಗಮನ ಕೊಡಬೇಕು. ಡಿ.ಐ.ಸಿ. ಬೋರ್ಡ್ ಹಾಕಿ ಅದು ಇದೆ ಎಂದು ತಿಳಿದುಕೊಂಡರೆ ಕೈಗಾರಿಕೆಗಳು ಸ್ಥಾಪನೆಯಾಗುವುದಿಲ್ಲ. ಡಿ.ಐ.ಸಿ.ಗಳು ಯಾವರೀತಿ ನಡೆಯುತ್ತದೆ ಎಂಬ ಬಗ್ಗೆ ಅಲ್ಲಿ ಇಲ್ಲಿ ಹುಡುಕಿ ಕೆಲವು ವಿಚಾರಗಳನ್ನು ಸಂಗ್ರಹಿಸಿದ್ದೇನೆ. ೧೯೭೭ರಲ್ಲಿ ಅವು ಸ್ಥಾಪನೆಯಾದವು. ಈಗ ೧೯೮೬ನೇ ಇಸವಿಯಲ್ಲಿದ್ದೇವೆ. ಈಗಲೂ ೧೯ ಜಿಲ್ಲೆಗಳ ಪೈಕಿ ನಾಲ್ಕೈದು ಜಿಲ್ಲೆಗಳಲ್ಲಿ ಮಾತ್ರ ಸ್ವಂತ ಕಟ್ಟಡ ಇದ್ದು ಬೇರೆ ಕಡೆಗಳಲ್ಲಿ ಇಲ್ಲ. ಕಟ್ಟಡ ಕಟ್ಟಬೇಕೆಂದು ಪ್ಲಾನ್ ಮತ್ತು ಎಸ್ಟಿಮೇಟ್ ಸಿದ್ಧವಾಗಿದ್ದರೂ ಅದರ ಬಗ್ಗೆ ಫೈನಲೈಸ್ ಮಾಡದೆ ಆ ವಿಚಾರ ತೊಳಲಾಟದಲ್ಲಿದೆ. ಇದನ್ನೇ ಬಗೆಹರಿಸುವುದಕ್ಕೆ ಆಗದಿರುವಾಗ ಸಾವಿರ ಕೈಗಾರಿಕೆಗಳ ಪ್ಲಾನ್ ಡಿಸೈನ್ ಯಾವ ಕಾಲಕ್ಕೆ ಮಾಡುವುದು ? ಕೇಂದ್ರ ಸರ್ಕಾರ ೧೯೮೨-೮೩ರ ವರೆಗೂ ಈ ಕಟ್ಟಡಗಳನ್ನು ಕಟ್ಟುವುದಕೋಸ್ಕರ ಮುಂಗಡ ಹಣ ಕೊಟ್ಟಿದ್ದರೂ ಕೂಡ ಅದನ್ನು ಹಾಗೇ ಇಟ್ಟು ಪೂಜೆ ಮಾಡುತ್ತಿದ್ದಾರೆ. ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ಏನೇನು ಜವಾಬ್ದಾರಿ ವಹಿಸಿದ್ದೀರಿ ? ಜಿಲ್ಲಾ ಸ್ಥಳದಲ್ಲಿ ಕಟ್ಟಡದ ಅಗತ್ಯ ಇದೆ. ಕಟ್ಟಡ ಕಟ್ಟುವುದರಿಂದ ಪ್ರಗತಿಯಾಗುತ್ತದೆ ಎಂಬ ನಂಬಿಕೆ ಇಲ್ಲದೇಹೋದರೂ ಹಲವಾರು

ಜವಾಬ್ದಾರಿಗಳನ್ನು ಗಮನಿಸಿದಾಗ ಪ್ರಪ್ರಥಮವಾಗಿ ಸರಿಯಾದ ಕಟ್ಟಡ ಕಟ್ಟಿ ಕೂರಿಸಬೇಕಾದ ಅಗತ್ಯ ಇದೆ. ಅದೇರೀತಿ ಅಲ್ಲಿ ಸ್ಯಾಂಕ್ಷನ್ ಮಾಡಿರತಕ್ಕ ಹುದ್ದೆಗಳು ಮುಖ್ಯವಾಗಿ ಫಂಕ್ಷನಲ್ ಮ್ಯಾನೇಜರ್, ಎಕ್ಸ್‌ಟೆನ್‌ಷನ್ ಆಫೀಸರ್ಸ್. ಈ ಹುದ್ದೆಗಳಲ್ಲಿ ಶೇಕಡ ೫೦ ರಷ್ಟು ಖಾಲಿ ಇದೆ. ಯಾವುದು ಕೈಗಾರಿಕಾ ವಿಸ್ತರಣೆಗೆ ಕಿಂಗ್‌ಪಿನ್ ಆಗಿ ಕೆಲಸ ಮಾಡಬೇಕೋ ಆ ಕೇಂದ್ರದಲ್ಲಿರುವ ಜವಾಬ್ದಾರಿ ಹುದ್ದೆಗಳಾದ ಫಂಕ್ಷನಲ್ ಮ್ಯಾನೇಜರ್, ಎಕ್ಸ್‌ಟೆನ್‌ಷನ್ ಆಫೀಸರ್ ಹುದ್ದೆಗಳು ೫೦ ಪರ್ಸೆಂಟ್ ಖಾಲಿ ಇದೆ. ಹೀಗಿದ್ದರೆ ಹೇಗೆ ಸಮರ್ಪಕವಾಗಿ ಕೆಲಸ ಮಾಡುವುದಕ್ಕಾಗುತ್ತದೆ ? ಶೇಕಡ ೧೦ ರಷ್ಟೂ ಕೂಡ ಕೆಲಸ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಸಣ್ಣ ಪುಟ್ಟ ತಕರಾರುಗಳಿವೆ. ಒಂದು ಸಾರಿ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಮಾಡಲಿ ಎಂದು ಹೇಳುವುದು, ಇನ್ನೊಂದು ಸಾರಿ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ ನಾವೇ ಮಾಡುತ್ತೇವೆ ಎಂದು ಹೇಳುವುದು ಈ ತಕರಾರಿನಲ್ಲಿ ದಿನ ಕಳೆಯುತ್ತಾ ಇರತಕ್ಕ ಅಂಶವನ್ನು ಗಮನಿಸಬಹುದಾಗಿದೆ. ಈಗಲಾದರೂ ತಕ್ಷಣ ಹುದ್ದೆಗಳನ್ನು ಸಮರ್ಪಕವಾದ ವ್ಯಕ್ತಿಗಳನ್ನು ನೇಮಿಸಿ ತುಂಬಬೇಕು. ಕೈಗಾರಿಕಾ ಇಲಾಖೆಯಿಂದ ಡೆಪ್ಯುಟೇಷನ್ ಕೊಟ್ಟು ಅವರು ಅಲ್ಲಿ ಹೋಗಿ ನಾಲ್ಕೈದು ದಿವಸ ಇದ್ದು ಮತ್ತೊಂದು ಊರಿಗೆ ಹೋದರೆ ಜಿಲ್ಲಾ ಕೇಂದ್ರಕ್ಕೆ ಬಲ ಬರುವುದಿಲ್ಲ. ಸಮರ್ಪಕವಾಗಿ ನೀವು ಕೊಟ್ಟಿರತಕ್ಕ ಗುರಿಗೆ ಅನ್ವಯವಾಗಿ ಕೆಲಸ ಮಾಡುವುದಕ್ಕೆ ಬೇಕಾಗತಕ್ಕ ರೀತಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸಜ್ಜುಗೊಳಿಸುವ ಕಡೆ ಸರ್ಕಾರ ತನ್ನ ತೀವ್ರ ಲಕ್ಷ್ಯವನ್ನು ಹರಿಸಬೇಕೆಂದು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಜಿಲ್ಲೆಗಳಲ್ಲಿ ಟೆಕ್ನೋ ಎಕನಾಮಿಕ್ ಸರ್ವೆಯನ್ನು ಸರ್ಕಾರದವರು ಮಾಡಬೇಕು. ಹಿಂದೆ ಇಲಾಖೆಯಲ್ಲಿ ಮಾಡಿದ ಸರ್ವೆ ಇದೆ. ಅದು ಈಗ ಕೆಲಸಕ್ಕೆ ಬರುವುದಿಲ್ಲ. ಯಾವುದೋ ಕಾಲದಲ್ಲಿ ಮಾಡಿದ ಸರ್ವೆ ಅದು. ಈ ರೀತಿಯ ನೀತಿ ಇಲ್ಲದೇ ಇರತಕ್ಕ ಸಂದರ್ಭದಲ್ಲಿ ಮಾಡಿದ ಸರ್ವೆ ಅದಾಗಿರುವುದರಿಂದ ಅದು ಸಮರ್ಪಕವಾಗಿಲ್ಲ. ಯಾವ ಯಾವ ಕೈಗಾರಿಕೆಗಳನ್ನು ಮಾಡಲು ಸಾಧ್ಯವಿದೆ, ಅದರ ಕಡೆ ಗಮನ ಕೊಟ್ಟಿದ್ದಾರೋ ಇಲ್ಲವೋ ಎಂಬ ಬಗ್ಗೆ ಟೆಕ್ನೋ ಎಕನಾಮಿಕ್ ಸರ್ವೇ ಸಮರ್ಪಕವಾದ ರೀತಿಯಲ್ಲಿ ಆಗಲೇಬೇಕು.

೩-೩೦ ಪಿ ಎಂ.

ಮತ್ತು ಇತ್ತೀಚಿನ ಒಂದು ಅಂಕಿಸಂಖ್ಯೆಗಳನ್ನು ಇಟ್ಟುಕೊಂಡು ಆ ಒಂದು ಸಮೀಕ್ಷೆ ಮಾಡಬೇಕು. ಯಾವುದೋ ಹಳೆಯ ಕಾಲದ್ದನ್ನು ಇಟ್ಟುಕೊಂಡು ಅದನ್ನು ಸ್ಟೆನ್‌ಸಿಲ್ ಮಾಡಿ ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ಆ ಒಂದು ದೃಷ್ಟಿಯಿಂದ ಈ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಿ ಅವು ಈಗ ಹೊಸದಾಗಿ ಟೆಕ್ನೋ ಎಕನಾಮಿಕ್ ಸರ್ವೆಯನ್ನು ಪ್ರತಿ ಜಿಲ್ಲೆಯಲ್ಲಿ ಮಾಡಿದರೆ ಒಂದು ಸಾವಿರ ಕೈಗಾರಿಕಾ ಸ್ಥಾಪನಾ ಕಾರ್ಯಕ್ರಮಕ್ಕೆ ಒಂದು ನಾಂದಿ ಹಾಕಿದಹಾಗೆ ಆಗುತ್ತದೆ. ಅಲ್ಲಿಯವರೆಗೆ ಹಿಂದೆ ಯಾವುದೋ ಅಪ್ಲೈ ಮಾಡಿದ್ದಕ್ಕೆ ಲೈಸೆನ್ಸ್ ಸಿಕ್ಕಿ, ಅವರ ಶಕ್ತಿ ಸಾಮರ್ಥ್ಯದ ಮೇಲೆ ಕೈಗಾರಿಕಾ ಸ್ಥಾಪನೆಗಳು ಆಗುತ್ತವೆ. ಆದರೆ ಸರ್ಕಾರ ಕೊಟ್ಟದ್ದು ಚಾಲನೆ ಆಗಬೇಕಾದರೆ ಈ ಕೆಲಸ ಕೂಡಾ ಖಂಡಿತವಾಗಿ ಆಗಬೇಕು. ಇವತ್ತು ಡಚ್ ಸಹಾಯದ ಯೋಜನೆಯಲ್ಲಿ ಮಾಡಿರತಕ್ಕ ಕೆಲಸವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಮೂಲಕ ವರ್ಕ್‌ಷೆಡ್‌ಗಳ ನಿರ್ಮಾಣ, ಕಾಮನ್ ಫೆಸಿಲಿಟೀಸ್ ಸೆಂಟರ್ಸ್ ನಿರ್ಮಾಣದಲ್ಲಿ ಸಾಕಷ್ಟು ವಿಳಂಬವಾಗಿದೆಯೆಂದು ನನ್ನ ತಿಳುವಳಿಕೆಗೆ ಬಂದಿದೆ. ತಾವು ತಮ್ಮ ವರದಿಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆಂದು ಹೇಳುತ್ತಿದ್ದೀರಿ. ಈಬಗ್ಗೆ ತಾವು ಇನ್ನೊಮ್ಮೆ ಪರಿಶೀಲನೆ ಮಾಡಿ. ಎಷ್ಟೋ ಸಾರಿ ಕಾಗದದ ಮೇಲೆ ಬಹಳ ಪ್ರಗತಿಗಳು ಆಗುತ್ತವೆ. ಆದರೆ ವಸ್ತುಶಃ ಆಗುವುದಿಲ್ಲ. ಇನ್ನೊಂದೆಂದರೆ ಸುಮಾರು ೨೩೫೧ ಷೆಡ್‌ಗಳು ಮುಗಿದಿದ್ದರೂ ಕೂಡ್ ೧೨೬೬ ಷೆಡ್‌ಗಳು ಮಾತ್ರ ಬಳಕೆಯಾಗಿವೆಯೆಂದು ನನಗೆ ತಿಳಿದು ಬಂದಿದೆ. ನಿಮ್ಮ ವರದಿಯಲ್ಲಿ ಫೇಸ್ಡ್ ಮ್ಯಾನರ್‌ನಲ್ಲಿ ಬಳಕೆಗೆ ತರುತ್ತೇವೆಂದು ಹೇಳಿದ್ದೀರಿ. ಒಂದು ಸಾರಿ ನಿರ್ಮಾಣ ಆದಮೇಲೆ ಅವುಗಳನ್ನು ಉಪಯೋಗಿಸುವುದರಲ್ಲಿ ಫೇಸ್ಡ್ ಪ್ರಶ್ನೆ ಬರುವುದಿಲ್ಲ ಎನ್ನುವ ಭಾವನೆಯಿಂದ ಅದರ ಬಗ್ಗೆ ಅಗತ್ಯ ಸ್ಪಷ್ಟೀಕರಣವನ್ನು ಬಯಸುತ್ತೇನೆ. ಇಷ್ಟು ವಿಚಾರ ಹೇಳಿ, ಇದಕ್ಕೆಲ್ಲಾ ಮೂಲಭೂತವಾದುದು ಯಾವುದು ? ತಮ್ಮ ಕೈಗಾರಿಕಾ ವರದಿಯಲ್ಲಿ ಹೇಳಿದ್ದೀರಿ. ಮುಖ್ಯವಾಗಿ ನಮ್ಮ ಕೈಗಾರಿಕಾ ನೀತಿ ಗುರಿ ಏನು ? ನಮ್ಮ ರಾಜ್ಯದಲ್ಲಿ ಇರತಕ್ಕ ಮಾನವ ಶಕ್ತಿ ಬಳಕೆ ಮಾಡತಕ್ಕದ್ದು. ಮಾನವ ಶಕ್ತಿ ಎಂದರೆ, ಹುಟ್ಟಿದ ಮಾನವರಿಗೆ ಏನೋಒಂದು ಶಕ್ತಿ ಇದೆ. ಆ ಒಂದು ಶಕ್ತಿ ಕೈಗಾರಿಕೆಯಲ್ಲಿ ಉಪಯೋಗವಾಗುವುದಿಲ್ಲ. ಮಾನವ ಶಕ್ತಿ ಕೈಗಾರಿಕೆಯಲ್ಲಿ ಬಳಕೆಯಾಗಬೇಕೆಂದರೆ ಆ

ಕೈಗಾರಿಕೆಯಲ್ಲಿ ಶಕ್ತಿಯನ್ನು ತೊಡಗಿಸುವುದರಲ್ಲಿ ಒಂದು ಪ್ರವೃತ್ತಿಯನ್ನು, ಅದಕ್ಕೆ ಬೇಕಾಗುವ ಸಾಮರ್ಥ್ಯವನ್ನು ಕೂಡಾ ಹೊಸದಾಗಿ ಅವನಲ್ಲಿ ಸ್ಥಾಪನೆ ಮಾಡಬೇಕು. ಅವನ ಮನಸ್ಸಿನಲ್ಲಿ, ಬುದ್ಧಿಯಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಆ ನಂತರ ಅವನನ್ನು ಕೈಗಾರಿಕೆಯಲ್ಲಿ ಬಿಡಬೇಕಾಗುತ್ತದೆ. ಮಾನವಶಕ್ತಿ Human Resources development encompasses a number of activities such as aptitude, identification, skill formation and upgradation of enterprenuership promotion. ಇವತ್ತು ನಮ್ಮ ಕೈಗಾರಿಕಾ ತರಬೇತಿ ಕೇಂದ್ರಗಳು ಏನಿವೆ ಅವುಗಳು ಇವತ್ತು ಬೇರೆಬೇರೆ ಹೆಸರಿನಲ್ಲಿ ಇವೆ. ಆರ್ಟಿಸಾನ್ ಟ್ರೈನಿಂಗ್ ಸೆಂಟರ್, ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್ ಎಂದು ಇವೆ. ಕೈಗಾರಿಕೆಗಳ ಕಡೆಗೆ ನಮ್ಮ ಜನರ ಮುಖ ತಿರುಗಿಸತಕ್ಕ ಆ ಕಡೆ ಪ್ರವೃತ್ತಿ ಉಂಟುಮಾಡತಕ್ಕ, ಕೆಲವೊಂದು ಪೂರ್ವಬಾವಿ ಜ್ಞಾನವನ್ನು ಕೊಡತಕ್ಕ ಕೇಂದ್ರಗಳು ಇವು. ಈ ಕೇಂದ್ರಗಳು ದೊಡ್ಡ ಪಾತ್ರವನ್ನು ನಿರ್ವಹಿಸುತ್ತಿವೆ. ಆ ಒಂದು ಗುರಿ ಸಾಧನೆ ಆಗಬೇಕೆಂದರೆ. ಮಾನವ ಶಕ್ತಿ ಬಳಕೆ ಆಗಬೇಕಾದರೆ, ಆ ಮಾನವ ಶಕ್ತಿಯನ್ನು ಕೈಗಾರಿಕಾ ಕ್ಷೇತ್ರದಲ್ಲಿ ತೊಡಗಿಸುವುದಕ್ಕೆ ಇರುವ ಈ ಕೇಂದ್ರಗಳು ಏನಿವೆ ಇವುಗಳ ತರಬೇತಿ ವ್ಯವಸ್ಥೆ ಬಹಳ ವ್ಯಾಪಕವಾದ ರೀತಿಯಲ್ಲಿ ಆಗಬೇಕು. ಇವತ್ತು ಇರುವುದು ಒಂದು ಅಲಂಕಾರಕ್ಕೆ ಇರುವ ಸಂಸ್ಥೆಗಳು ಇವು. ಇವತ್ತು ಒಂದೊಂದು ಜಿಲ್ಲೆಗೆ ಒಂದೊಂದು ಇವೆ. ಇದರಲ್ಲಿ ಏನಾಗಿದೆ ಎಂದರೆ, ಇಲ್ಲಿ ಇರುವ ತರಬೇತಿ ಬಹಳ ಹಳೆಯ ಕಾಲದ ತರಬೇತಿ. ಅಲ್ಲಿರತಕ್ಕ ತರಬೇತಿ ಸಾಧನೆಗಳು ಕೂಡಾ ಔಟ್ ಡೇಟೆಡ್ ಆದವು. ಯಾವುದೋ ಹಳೇ ಕಾಲದ ಯಂತ್ರಗಳಲ್ಲಿ ತರಬೇತಿ ಕೊಟ್ಟರೆ, ಅವನಿಗೆ ಜಮಾನಾ ರೀತಿಯ ತರಬೇತಿ ಕೊಟ್ಟರೆ ಮಾರ್ಕೆಟ್ಟಿನಲ್ಲಿ ಆತನಿಗೆ ಬೆಲೆ ಸಿಕ್ಕುವುದಿಲ್ಲ. ಇವತ್ತು ತರಬೇತಿ ಕೇಂದ್ರಗಳನ್ನು ಸರಿಪಡಿಸಬೇಕಾಗುತ್ತದೆ. ಇವತ್ತು ತರಬೇತಿ ವಿಚಾರದಲ್ಲಾಗಲೀ, ಬೋಧಕ ವಿಷಯ ಏನು ಇದೆಯೋ ಅದನ್ನು ಅಪ್‌ಟುಡೇಟ್ ಮಾಡಬೇಕು. ಅದಕ್ಕೆ ತರಬೇತಿ ಕೊಡುವುದಕ್ಕೆ ಬೇಕಾದ ಸಾಧನಗಳು, ಎಕ್ವಿಪ್‌ಮೆಂಟ್ಸ್ ಯಂತ್ರಗಳು ಏನು ಇದೆಯೋ ಅವುಗಳನ್ನು ಕೂಡಾ ಆಧುನೀಕರಣ ಮಾಡಬೇಕು. ಆ ಬಗ್ಗೆ ತರಬೇತಿ ಕೊಡುವ ಜನರು ಯಾರಿದ್ದಾರೋ ಆ ಜನರೂ ಬದಲಾವಣೆಯಾಗಬೇಕು. ಈ ಬಗ್ಗೆ ಹೊಸ ಪ್ರಾಜ್ಞತೆ ಇರತಕ್ಕ ಜನರನ್ನು ಅಲ್ಲಿಗೆ ಹಾಕಬೇಕು. ಹಳೇ ಕಾಲದ ಮಾಸ್ಟರ್ಸ್ ಇದ್ದರೆ ಅದನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು ತಮ್ಮ ಮುಂದೆ ಇರುವ ಸವಾಲನ್ನು ಅರ್ಥಮಾಡಿಕೊಳ್ಳಬೇಕು, ಇವತ್ತು, ಈ ಸೆಂಟರ್‌ಗಳಲ್ಲಿ ಯಾವುದೋ ಒಂದು ಮಾಡೆಲ್ ಮೇಲೆ ತರಬೇತಿಯನ್ನು ಕೊಡುವುದರ ಬದಲು ಅಲ್ಲಿ ತರಬೇತಿ ಜೊತೆಗೆ ಅದನ್ನು ಪ್ರೊಡಕ್ಷನ್ ಓರಿಯೆಂಟ್ ಯೂನಿಟ್ ಆಗಿ ಮಾಡಿ ನಮಗೆ ಬೇಕಾಗತಕ್ಕ ಒಂದು ವಸ್ತುಗಳನ್ನು ತಯಾರು ಮಾಡತಕ್ಕ ಸಂಸ್ಥೆಗಳನ್ನಾಗಿ ಅವನ್ನು ಮಾಡಿ, ಆತಯಾರಿಕಾ ಕ್ರಮದಲ್ಲಿ ತರಬೇತಿ ಉಂಟಾಗುವ ಹಾಗೆ ಮಾಡಬೇಕು. ಈ ಬಗ್ಗೆ ಈ ಕೇಂದ್ರಗಳನ್ನು ಹೊಸದಾಗಿ ಸಜ್ಜು ಮಾಡಬೇಕಾದುದು ಅತ್ಯಗತ್ಯ ಇದೆ. ಮಾನ್ಯ ಉಪಾಧ್ಯಕ್ಷರೇ, ಒಮ್ಮೆ ನಾನು ಕೊಯಮತ್ತೂರಿನ ಜಿ.ಡಿ. ನಾಯ್ಡು ಇನ್‌ಸ್ಟಿಟ್ಯೂಟ್‌ಗೆ ಹೋಗಿದ್ದೆ. ಈಗ ಅವರು ಅಲ್ಲಿ ಇಲ್ಲ. ಈಗ ಅವರ ಮಗ ಇದ್ದಾರೆ. ಅಲ್ಲಿ ತರಬೇತಿ ಸಂಸ್ಥೆಗಳು ಇವೆ. ಮಾನ್ಯ ಜೆ. ಎಚ್. ಪಟೇಲ್ ಅಲ್ಲಿಗೆ ಹೋಗಿಲ್ಲದಿದ್ದರೆ ಮೊದಲು ಹೋಗಿ ನೋಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ನಾನು ಆ ಬಗ್ಗೆ ಕೇಳಿದ್ದೇನೆ.

ಶ್ರೀ ಕೆ ಹೆಚ್. ಶ್ರೀನಿವಾಸ್.—ಆ ಬಗ್ಗೆ ಕೇಳುವುದು ಅಲ್ಲ. ತಾವು ಅಲ್ಲಿ ಹೋಗಿ ನೋಡಬೇಕು. ಅಲ್ಲಿ ಅವರದ್ದೇ ಆದ ತರಬೇತಿ ಕೇಂದ್ರ ಇದೆ. ಲೋಯರ್ ಸೆಕೆಂಡರಿ ಫೇಲ್ ಆದಂತಹ ಹುಡುಗರನ್ನು ಇಲ್ಲಿ ತೆಗೆದುಕೊಳ್ಳುತ್ತಾರೆ. ಈ ಹುಡುಗರಿಗೆ ಕೇವಲ ೬ ತಿಂಗಳು ತರಬೇತಿಯನ್ನು ಕೊಟ್ಟು ಅವರನ್ನು ಮಾರ್ಕೆಟ್‌ನಲ್ಲಿ ಪರ್ಮನೆಂಟ್ ಕೆಲಸದಲ್ಲಿ ಹಾಕಿ ಕೈಬಿಡುತ್ತಾರೆ. ಕೇವಲ ೬ ತಿಂಗಳು ಅಷ್ಟೇ. ಮಾನ್ಯ ಜಿ ಡಿ. ನಾಯ್ಡು ಅವರ ಒಂದು ವ್ಯಕ್ತಿತ್ವದ ಮುದ್ರೆ ಈ ಪರಿಸರದ ಮೇಲೆ ಇದೆ. ಯಾರು ಲೋಯರ್ ಸೆಕೆಂಡರಿ ಫೇಲ್ ಆಗಿರುತ್ತಾನೆ ಆತನಿಗೆ ಮಾತ್ರ ೬ ತಿಂಗಳು ಟ್ರೈನಿಂಗ್ ಕೊಡಲಾಗುತ್ತದೆ. ಆ ಟ್ರೈನಿಂಗ್‌ನ್ನು ಕೊಟ್ಟು ಮಾರ್ಕೆಟ್‌ನಲ್ಲಿ ಅವನಿಗೆ ಖಾಯಂ ಕೆಲಸವನ್ನು ಕೊಡಿಸಿ ಕೈಬಿಡುತ್ತಾರೆ. ಆ ರೀತಿಯಾದ ಟ್ರೈನಿಂಗ್ ಪ್ರೋಗ್ರಾಮ್ ಬೇಕು. ನಮ್ಮ ಟ್ರೈನಿಂಗ್ ಪ್ರೋಗ್ರಾಮ್ ಅನ್ನು ಅಪ್ ಟು-ಡೇಟ್ ಮಾಡುವುದಕ್ಕೆ ಅಲ್ಲಿಯ ಉದಾಹರಣೆಯನ್ನು ಬಳಸಿಕೊಳ್ಳಲಿ. ಅಲ್ಲಿಗೆ ಅಧಿಕಾರಿಗಳು ಹೋಗಿ ಬರುವುದಲ್ಲ. ತಾವೂ ಕೂಡಾ ಅಲ್ಲಿಗೆ ಭೇಟಿ ಕೊಟ್ಟು ಉಪಯೋಗವಾಗತಕ್ಕ ಅಂಶಗಳು ಇದ್ದರೆ ಅವುಗಳನ್ನು ಪಡೆದುಕೊಳ್ಳಬೇಕೆಂದು ವಿನಯಪೂರ್ವಕವಾಗಿ ಸೂಚನೆ ಮಾಡುತ್ತೇನೆ. ತರ

ಬೆಶೀ ಎಂದರೆ ಆ ಸ್ವರೂಪದಲ್ಲಿ ಮಾಡಬೇಕು. ಇವತ್ತು ೫-೬ ವರ್ಷಗಳ ತರಬೇತಿಯನ್ನು ಕೊಡುವುದಕ್ಕೆ ಈ ದೇಶದಲ್ಲಿ ಸಾಧ್ಯವಿಲ್ಲ. ಇವತ್ತಿನ ಕೈಗಾರಿಕೆಯ ಅವಶ್ಯಕತೆಗಳಲ್ಲಿ ಇವತ್ತಿನ ದಿವಸದ ಮಾರ್ಕೆಟ್ಟಿನಲ್ಲಿ ರತಕ್ಕ ಬೇಡಿಕೆಗಳನ್ನು ನೋಡಿಕೊಂಡು ಆ ಬಗ್ಗೆ ತರಬೇತಿಯನ್ನು ಕೊಡತಕ್ಕದ್ದು ಅವಶ್ಯಕ ಇರುವುದರಿಂದ ಮೊದಲು ಆ ಬಗ್ಗೆ ಸ್ಟಡಿ ಮಾಡಬೇಕಾಗುತ್ತದೆ. ಯಾವ ಯಾವ ಕೈಗಾರಿಕೆಗಳಲ್ಲಿ ಯಾವ ಯಾವ ರೀತಿಯ ಮ್ಯಾನ್ ಪವರ್ ರಿಕ್ವೈರ್‌ಮೆಂಟ್ ಇದೆ ಎಂಬುದನ್ನು ನೋಡಿಕೊಂಡು ಅದರ ಆಧಾರದ ಮೇಲೆ ತರಬೇತಿ ಕೊಡತಕ್ಕ ಹೆಜ್ಜೆಯಲ್ಲಿ ಹೋಗಬೇಕು. ಈ ರೀತಿಯಲ್ಲಿ ಹೋಗತಕ್ಕ ವ್ಯವಸ್ಥೆಯಾಗಬೇಕೇ ಹೊರತು ಯಾವುದೋ ಒಂದು ಕಾಲದಲ್ಲಿ ನಿಂತ ನೀರಾದರೆ ಅಂತಹ ತರಬೇತಿಯಿಂದ ಏನೂ ಪ್ರಯೋಜನವಿಲ್ಲ. ಆದುದರಿಂದ ಮಾನವ ಶಕ್ತಿಯ ಬಳಕೆಯನ್ನು ಬಹಳ ಉತ್ತಮವಾಗಿ ಬಳಸಿಕೊಳ್ಳಬೇಕಾದರೆ, ಮಾನವ ಶಕ್ತಿಯ ಬಳಕೆ ಕೈಗಾರಿಕೆಗಳಲ್ಲಿ ಆಗಬೇಕಾದರೆ ತರಬೇತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಆಮೂಲಾಗ್ರವಾಗಿ ಆಧುನೀಕರಣಗೊಳಿಸಬೇಕೆಂದು ಹೇಳಿ ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ. ಹಾಗೇ ಇನ್ನೊಂದು ಉತ್ತಮವಾದ ಸಂಪ್ರದಾಯ ಬೇಕು. ಇವತ್ತು ಎಂಟರ್ ಪ್ರೂನರ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಎಂದು ತಾವು ಮಾಡುತ್ತಿದ್ದೀರಿ. ಎಲ್ಲಾದರೂ ಒಂದು ಕಡೆ ಹೋಗಿ ಸೆಮಿನಾರ್ ಮಾಡಿ ಜನರನ್ನು ಕರೆದು ಕೂರಿಸಿ ಈ ರೀತಿ ಕೈಗಾರಿಕೆ ಮಾಡಬೇಕು. ಮತ್ತೊಂದು ಮಾಡಬೇಕೆಂದು ಹೇಳತಕ್ಕದ್ದು ಇದೆ. ಇದೂ ಕೂಡಾ ನಮ್ಮ ರಾಜ್ಯದಲ್ಲಿ ಕೆಲವು ಮಟ್ಟಿಗೆ ನಡೆದಿದೆ. ಇದು ನಿರೀಕ್ಷೆ ಮಾಡಿದ ಪ್ರಯೋಜನವನ್ನು ಕೊಟ್ಟಿಲ್ಲ ಎನ್ನುವುದು ಇದೆ. ತಮ್ಮ ಈ ಒಂದು ಚಿಂತನೆ ಏನು ಇದೆಯೋ ಅದನ್ನು ಅಲ್ಲಿ ವಿಶ್ಲೇಷಣೆ ಮಾಡಿದ್ದೀರಿ. ಅಲ್ಲಿ ಹೇಳಿದ್ದೀರಿ. ಯಾರಿಗಾಗಿ ನೀವು ಈ ರೀತಿಯ ಒಂದು ಕಾರ್ಯಕ್ರಮ ಇಟ್ಟುಕೊಂಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಇವತ್ತು ಯಾರಿಗೂ ಗೊತ್ತಿಲ್ಲದ ಕಡೆ ಒಂದು ಪ್ರೋಗ್ರಾಮ್ ಇಟ್ಟುಕೊಳ್ಳುತ್ತೀರಿ. ಇವತ್ತು ಯಾವುದೋ ಒಂದು ಊರಿನಲ್ಲಿ ಪ್ರೋಗ್ರಾಮ್ ಇಟ್ಟು ಕೊಳ್ಳುತೀರಿ. ಒಬ್ಬ ಮಂತ್ರಿಯವರಿಗೆ ಯಾವತ್ತು ಪುರುಸೊತ್ತು ಇರುತ್ತದೆ ಎಂಬುದನ್ನು ನೋಡಿ ಆ ದಿವಸ ತಾವು ಒಂದು ಪ್ರೋಗ್ರಾಮ್ ಆಯಿತು ಎಂದು ಲೆಕ್ಕದಲ್ಲಿ ಸೇರಿಸುತ್ತೀರಿ. ಅಲ್ಲಿನ ಜನರಿಗೆ ಆಗ ಪುರುಸೊತ್ತು ಇರುತ್ತದೋ ಇರುವುದಿಲ್ಲವೋ ಎಂಬುದನ್ನು ನೋಡುವುದಿಲ್ಲ, ಅಲ್ಲಿಯ ಜನರಿಗೆ ಸುಗ್ಗಿ ಆಗಿದ್ದರಂತೂ ಅಲ್ಲಿಯ ಜನ ಬರುವುದೇ ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ನೀವು ಮಂತ್ರಿಗಳಾಗಿದ್ದಾಗ ಹೇಗೆ ಮಾಡುತ್ತಿದ್ದಿರಿ ?

ಶ್ರೀ ಕೆ ಎಚ್. ಶ್ರೀನಿವಾಸ್.—ನಾನು ಮಂತ್ರಿಯಾಗಿದ್ದಾಗ ಏನು ಮಾಡಿದೆ ಎನ್ನುವುದು ಈಗ ಬೇಡ. ಅದು ಏಕೆ ಈಗ ?

ನಾನು ಮಂತ್ರಿಯಾಗಿ ಮಾಡಿದ ಪ್ರೋಗ್ರಾಮ್‌ಗಳನ್ನು ನೋಡಲು ನಿಮಗೆ ಪುರಸೊತ್ತು ಇಲ್ಲ ಎಂಬುದು ನನಗೆ ಗೊತ್ತು. ಈಗ ಗುಜರಾತ್ ರಾಜ್ಯದಲ್ಲಿ ಬಹಳ ಉತ್ತಮವಾದ ರೀತಿಯಲಿ ಇದನ್ನು ನಿರ್ವಹಿಸುತ್ತಿದ್ದಾರೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಅಂದರೆ ಈ ಪ್ರೋಗ್ರಾಂ ಮಾಡುವುದಕ್ಕೆ ೨ ತಿಂಗಳ ಮುಂಚೆ ಈ ಜನರು ಅಲ್ಲಿಗೆ ಹೋಗಿ ಇದ್ದು, ಅಲ್ಲಿನ ಜನರ ಸಂಪರ್ಕ ಬೆಳೆಸಿ, ಅದರ ಕಡೆ ಲಕ್ಷ್ಯ ಕೊಟ್ಟು ಇದಕ್ಕೆ ಸಾಕಷ್ಟು ವ್ಯಾಪಕವಾದ ಪ್ರಚಾರ ಕೊಟ್ಟು ಮಾಡಬೇಕು. ಇದರಲ್ಲಿ ೧೦೦ ಜನರನ್ನುದ್ದೇಶಿಸಿ ಮಾಡಿದಾಗ, ೧೦ ಜನ ಕೈಗಾರಿಕೆಯನ್ನು ಸ್ಥಾಪಿಸಲು ಇಚ್ಛಿಸಿದರೆ, ಇದನ್ನು ಸಿಂಗಲ್ ವಿಂಡೋ ಸಿಸ್ಟಂ ಅಥವಾ ಎಸ್ಕಾರ್ಟ್ ಸಿಸ್ಟಂ ಏನಿದೆ, ಅಲ್ಲಿ ಬರತಕ್ಕಂಥಾದ್ದು. ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದಮೇಲೆ ಅಲ್ಲಿಂದ ಅವರು ನೋಡಿ ಬರತಕ್ಕಂಥಾದ್ದು ಒಂದು ಕಾರ್ಯಕ್ರಮ. ಇದನ್ನು ಇಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಟರ್‌ಪ್ರೆನ್ಯೂರ್ ಷಿಪ್ ಡೆವಲಪ್‌ಮೆಂಟ್, ನ್ಯೂ ಡೆಲ್ಲಿ ಇದೆ. ಮತ್ತು ಇದೆ ರೀತಿಯಲ್ಲಿ ಸೆಂಟರ್ ಫಾರ್ ಎಂಟರ್‌ಪ್ರೆನ್ಯೂರ್ಸ್ ಎಂದು ಗುಜರಾತ್‌ನಲ್ಲಿ ಒಂದು ಇದೆ. ನಾನು ಅಂಥದೇ ಒಂದು ಸಂಸ್ಥೆಯನ್ನು ತಾವು ಇಲ್ಲಿಯೂ ಕೂಡ ನಿರ್ಮಾಣ ಮಾಡಬೇಕೆಂದು ಈ ಸರ್ಕಾರವನ್ನು ಒತ್ತಾಯ ಮಾಡಬಯಸುತ್ತೇನೆ. ಇವತ್ತು ಒಂದು ಟೆಕ್ನಿಕ್ ಅಂಗವಾಗಿ ರೂರಲ್ ಇಂಡಸ್ಟ್ರಿಯಲ್ ಸೆಲ್ ಏನು ಮಾಡಿದ್ದೀರಿ, ಆದರೆ, ಅಂಥ ಸಣ್ಣ ಸೆಲ್‌ನಿಂದ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಪ್ರಾಯಶಃ ಒಂದು ಸಂಸ್ಥೆಯನ್ನು ನಿರ್ಮಾಣ ಮಾಡಿದರೆ, ಅದರಿಂದ ಕಾರ್ಯ ಮಾಡುವುದಕ್ಕೆ ದೊಡ್ಡ ರೀತಿಯ ಸಹಾಯವಾಗಬೇಕೆಂಬುದೇ ಆಶಯ. ಆದ್ದರಿಂದ ಇಲ್ಲಿಯೂ ಕೂಡ ಗುಜರಾತ್‌ನ ಅನುಭವವನ್ನು ನೀವು ತೆಗೆದುಕೊಳ್ಳಬೇಕು. ಇದನ್ನು ನಡೆಸುವುದಕ್ಕೆ ಪ್ರಯತ್ನಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಮಾನ್ಯ ಉಪಾಧ್ಯಕ್ಷರೇ ನಾನು ಮೊದಲೇ

ಹೇಳಿದೆ. ನೀವು ಸ್ಥಾಪಿಸಿದಂತಹ ಕೈಗಾರಿಕೆಗಳ ಅಂಕಿ ಸಂಖ್ಯೆಗಳನ್ನು ಜಗ್ಗಾಟ ಮಾಡುವುದಕ್ಕೆ ನಾನು ಸಿದ್ಧನಿಲ್ಲ. ಬರೀ ಕೈಗಾರಿಕೆಗಳು ಸ್ಥಾಪನೆಯಾಗಿಬಿಟ್ಟರೆ ಸಾಲದು. ಅವು ಬದುಕಿ ಉಳಿದು, ಬೆಳೆಯುವುದಕ್ಕೆ ಸಹ ಸರ್ಕಾರ ಲಕ್ಷ್ಯ ಕೊಡಬೇಕು. ನೀವು ಒಂದು ಕಡೆಯಿಂದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದಂತೆ, ಇನ್ನೊಂದು ಕಡೆಯಿಂದ ಅವು ಮುಚ್ಚುತ್ತಾ ಹೋದರೆ ಏನೂ ಪರಾಕ್ರಮ ಸಾಧಿಸಿದಂತಾಗುವುದಿಲ್ಲ. ಮನುಷ್ಯರಿಗೆ ಖಾಯಿಲೆಗಳು ಹೇಗೋ ಕೈಗಾರಿಕೆಗಳಿಗೂ ಕೂಡ ಹಲವಾರು ರೀತಿಯ ರೋಗರುಜಿನಗಳಿವೆ. ಒಂದು ಕೈಗಾರಿಕೆಯ ಔಷಧಿ ಇನ್ನೊಂದು ಕೈಗಾರಿಕೆಗೆ ಆಗುವುದಿಲ್ಲ. ರೋಗಗ್ರಸ್ಥ ಮನುಷ್ಯನನ್ನು ಆರೋಗ್ಯಕ್ಕೆ ತರುವುದು ಎಷ್ಟು ಕಷ್ಟವೋ ಇಲ್ಲಿಯೂ ಅಷ್ಟೇ ಕಷ್ಟ ಇದೆ. ಆದರೆ ಈ ಸರ್ಕಾರವು ಕೈಗಾರಿಕೆಗಳ ಪುನರ್ವಸತಿಗೆ ಹೆಚ್ಚಿನ ಲಕ್ಷ್ಯ ನೀಡಬೇಕು. ನಮ್ಮ ರಾಜ್ಯದಲ್ಲಿ ರೋಗಗ್ರಸ್ತ ಕೈಗಾರಿಕೆಗಳನ್ನು ಪುನರ್ವಸತಿ ಮಾಡಬೇಕೆಂಬುದರ ಬಗ್ಗೆ ಮುಖ್ಯವಾಗಿ ೩ ಸಂಸ್ಥೆಗಳಿವೆ. ಅವು ಒಂದನೆಯದು ಕೆಎಸ್‌ಎಸ್‌ಐಡಿಸಿ, ನಂತರ ಕೆಎಸ್‌ಎಫ್‌ಸಿ, ಮತ್ತು ಎಸ್‌ಎಲ್‌ಐಐಸಿ. ಇವುಗಳು ರೋಗಗ್ರಸ್ತ ಕೈಗಾರಿಕೆಗಳನ್ನು ಪುನರ್ವಸತಿ ಮಾಡಲಿಕ್ಕಾಗಿ ಏನು ಚಿಕಿತ್ಸೆ ಕೈಗೊಳ್ಳಬೇಕೆಂಬುದರ ಸಲುವಾಗಿ ಇರುವಂತಹವು. ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿದಮೇಲೆ ಪುನರ್ವಸತಿಗೊಳಿಸುವ ಫ್ರೇಮ್ ವರ್ಕ್ ಈ ಮೂರು ಸಂಸ್ಥೆಗಳಿಗೆ ಸಂಬಂಧಪಟ್ಟ ಕೆಲಸವಾಗಿದೆ. ಆದರೆ ಇವತ್ತು ಏನಾಗಿದೆಯೆಂದರೆ, ಈ ವರದಿಯಲ್ಲಿ ಏನೂ ವಿವರಗಳಿಲ್ಲ. ನಾನು ಕೆಲವು ವಿಚಾರಗಳನ್ನು ಓದಿ ಅಧ್ಯಯನ ಮಾಡಿದಾಗ ಈ ೩ ಸಂಸ್ಥೆಗಳು ಸೇರಿ ಈ ರಾಜ್ಯದಲ್ಲಿ ರೋಗಗ್ರಸ್ತ ಕೈಗಾರಿಕೆಗಳೆಂದು ಈವರೆಗೆ ಗುರುತಿಸಿರುವುದು ೧೭೦೦ ಕೈಗಾರಿಕೆಗಳಾಗಿದ್ದರೆ, ಅವುಗಳನ್ನು ಪುನರ್ವಸತಿಗೊಳಿಸುವ ಕಾರ್ಯಕ್ರಮ ಆಗಿರುವಂಥಾದ್ದು ಕೇವಲ ೬೫ ಅಥವಾ ೭೦ ಕೈಗಾರಿಕೆಗಳಿಗೆ ಮಾತ್ರ ಇರಬಹುದು ಎಂಬುದು ತಿಳಿದುಬಂದಿತು. ಇಷ್ಟು ಕೈಗಾರಿಕೆಗಳು ಮಾತ್ರ ಪುನರ್ವಸತಿಯಾಗಿವೆ. ಕೈಗಾರಿಕೆ ಇಲಾಖೆಗಳ ಅಭಿಪ್ರಾಯದಲ್ಲಿ ಕೂಡ ರೋಗಗ್ರಸ್ತ ಕೈಗಾರಿಕೆಗಳನ್ನು ಪತ್ತೆ ಹಚ್ಚುವ ಒಂದು ವ್ಯವಸ್ಥೆಯೂ ಸುಗಮವಾಗಿಲ್ಲ. ಈ ೩ ಸಂಸ್ಥೆಗಳೂ ಸ್ವಲ್ಪ ರೋಗಗ್ರಸ್ತವಾಗಿವೆ. ಆದ್ದರಿಂದ ಇದನ್ನು ಮೊದಲು ಬಲಪಡಿಸಬೇಕು. ಡಾಕ್ಟರಿಗೇ ಹುಷಾರಿಲ್ಲದಿದ್ದರೆ ರೋಗಿಗಳ ರೋಗಗಳನ್ನು ಹೇಗೆ ಪತ್ತೆ ಮಾಡುತ್ತಾರೆ ? ಹಾಗೆಯೇ, ರೋಗಗ್ರಸ್ತ ಕೈಗಾರಿಕೆಗಳನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ತೊಡಗುವಾಗ, ಚಟುವಟಿಕೆಯಿಂದ ನೋಡಬೇಕಾಗುತ್ತದೆ. ಆಗತ್ಯವಾಗಿ ರೋಗ ಪರಿಹಾರ ಮಾಡುವ ವ್ಯವಸ್ಥೆ ಮಾಡಬೇಕು. ಸಣ್ಣ ಕೈಗಾರಿಕೆಗಳಿಗಿರುವ ಮುಖ್ಯವಾದ ರೋಗವೆಂದರೆ, ಮಾರ್ಕೆಟಿಂಗ್ ದೌರ್ಬಲ್ಯ. ಒಬ್ಬ ಕೈಗಾರಿಕೆಯನ್ನು ಸ್ಥಾಪಿಸಿ, ಉತ್ಪಾದನೆಯನ್ನೂ ಮಾಡಿ ನಂತರ ಅದನ್ನು ಮಾರ್ಕೆಟ್ಟಿಗೆ ತೆಗೆದುಕೊಂಡು ಹೋದರೆತಾನೇ ದುಡ್ಡು ಬರುವುದು ? ಆದರೆ ಅದೇ ಬಹಳ ಕಷ್ಟವಾಗಿದೆ. ನಾವು ಇವತ್ತು ಗುಡಿ ಕೈಗಾರಿಕೆ, ಗೃಹ ಕೈಗಾರಿಕೆ, ಖಾದಿ ಗ್ರಾಮೋದ್ಯೋಗ ಎಂದು ಏನು ಹೇಳುತ್ತೇವೆ. ಅವು ಸಣ್ಣ ಕೈಗಾರಿಕೆಗಳೆಂದು ಬರುತ್ತವೆ. ಇಲ್ಲಿ ನನ್ನ ಸಲಹೆ ಏನೆಂದರೆ ಈ ಸಣ್ಣ ಕೈಗಾರಿಕಾ ವಲಯದಲ್ಲಿ ಖಾದಿ ಗ್ರಾಮೋದ್ಯೋಗ ಇನ್ನಿತರ ಗೃಹ ಕೈಗಾರಿಕೆಗಳು ನಿಜವಾಗಿಯೂ ಬದುಕಬೇಕಾದರೆ, ಕಾಮನ್ ಮಾರ್ಕೆಟಿಂಗ್ ಪಾಲಿಸಿಯನ್ನು ಮಾಡಬೇಕು. ಒಂದೇ ಬ್ರ್ಯಾಂಡ್ ಹೆಸರಿನಲ್ಲಿ ಬೇರೆ ಬೇರೆ ಕೈಗಾರಿಕೆಗಳ ವಸ್ತುಗಳನ್ನು ಪಡೆದು, ಮಾರ್ಕೆಟಿಂಗ್ ಮಾಡತಕ್ಕಂಥಹ ಸಣ್ಣ ವಲಯಕ್ಕೆ ಸೀಮಿತವಾದಂತಹ ಒಂದು ಸಂಸ್ಥೆಯನ್ನು ನಿರ್ಮಾಣ ಮಾಡಬೇಕು. ಇದು ಬಹಳ ಆಗತ್ಯವೆಂದು ನಾನು ಸಲಹೆ ಮಾಡಬಯಸುತ್ತೇನೆ. ಬೇರೆಡೆ ತಯಾರಾದ ಸಣ್ಣಪುಟ್ಟ ವಸ್ತುಗಳನ್ನು ಕಾಮನ್ ನೇಮ್‌ನಲ್ಲಿ ಇಟ್ಟುಕೊಂಡು ಮಾರಾಟ ಮಾಡಿ, ಅದರ ಪೂರ್ಣ ಲಾಭಾಂಶವನ್ನು ಕೈಗಾರಿಕೆಗೆ ಕೊಡುವ ವ್ಯವಸ್ಥೆಯಾದರೆ ಆಗ ಸಣ್ಣ ಕೈಗಾರಿಕೆಗಳು, ಗೃಹ ಕೈಗಾರಿಕೆಗಳು, ಇನ್ನಿತರ ಕೈಗಾರಿಕೆಗಳು ಬದುಕಲು ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಇನ್ನು ಕೈಗಾರಿಕೆಗಳ ಸಹಕಾರ ಸಂಸ್ಥೆಗಳೇನಿವೆ. ಇವುಗಳಲ್ಲಿ ಬಹುಪಾಲು ರೋಗಗ್ರಸ್ತವಾಗಿವೆ. ನನಗೆ ತಿಳಿದಂತೆ, ಸುಮಾರು ೯೦೦ಕ್ಕಿಂತಲೂ ಹೆಚ್ಚು ಸಹಕಾರ ಸಂಘಗಳು ರದ್ದುಪಡಿಸಲು ಲಿಕ್ವಿಡೇಶನ್ ಮಾಡಲು ಯೋಗ್ಯವಾಗಿವೆ. ಇನ್ನುಳಿದ ೨೦೦–೨೫೦ ಕೈಗಾರಿಕಾ ಸಂಘಗಳನ್ನು ಇನ್ನೊಂದರ ಜೊತೆ ಸೇರಿಸಿ, ಅಮಾಲ್ಗಮೇಟ್ ಮಾಡಿದರೆ ಒಂದು ಮಾರ್ಗ ದೊರಕಬಹುದು. ಈ ರೋಗಗ್ರಸ್ತ ಕೈಗಾರಿಕಾ ಸಹಕಾರ ಸಂಘಗಳ ಪುನರುಜ್ಜೀವನಕ್ಕೆ ಯಾವು ಯಾವುದನ್ನು ಲಿಕ್ವಿಡೇಟ್ ಮಾಡಬೇಕೋ ಅದನ್ನು ಮಾಡುವುದು ಬಹಳ ಅತ್ಯಗತ್ಯ. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಲಕ್ಷ್ಯ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತಿದ್ದೇನೆ. ಇನ್ನು ಇವತ್ತು ಈ ಸಣ್ಣ ಕೈಗಾರಿಕೆಗಳ ಬಗ್ಗೆ ನಮ್ಮ ರಾಜ್ಯದಲ್ಲೇ ಅಲ್ಲ, ರಾಷ್ಟ್ರಮಟ್ಟದಲ್ಲೂ ಕೂಡ ಸಾಕಷ್ಟು ಚಿಂತನೆಯಾಗಿದೆ. ಕೇಂದ್ರ ಸರ್ಕಾರ ಕೇವಲ ದೊಡ್ಡವುಗಳಿಗೆ ಪ್ರಾಶಸ್ತ್ಯ ನೀಡುತ್ತಾರೆ

ಎಂಬ ವಾದ ಸರಿಯಲ್ಲ. ರಾಷ್ಟ್ರದ ದೃಷ್ಟಿಯಿಂದ ಕೆಲವು ವಿಚಾರಗಳು ಮೇಲಕ್ಕೆ ಹೋಗಬಹುದು. ಕೆಲವು ಕೆಳಕ್ಕೆ ಬರಬಹುದು. ಸಣ್ಣ ಕೈಗಾರಿಕೆ ವಲಯವನ್ನು ಈ ರಾಷ್ಟ್ರದಲ್ಲಿ ತಾತ್ಸಾರ ಮಾಡುವುದು ಸಾಧ್ಯವಿಲ್ಲ. ಹಾಗೆ ಮಾಡಿದರೆ ದೇಶದ ಉದ್ಧಾರ ಸಾಧ್ಯವಾಗುವುದಿಲ್ಲ. ಇವತ್ತು ಕೇಂದ್ರ ಸರ್ಕಾರದ ಹೊಸ ಬಜೆಟ್ ಬಂದಿದೆ, ಅದರಲ್ಲಿ ಸಣ್ಣ ಕೈಗಾರಿಕೆಗಳ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀ ವಿ. ಪಿ. ಸಿಂಗ್ ತಮ್ಮ ಭಾಷಣದಲ್ಲಿ ಹೀಗೆ ಹೇಳಿದ್ದಾರೆ.

"Small scale industry has played a vital role in increasing exports, generating employment opportunities and reducing the concentration of economic power. It has been truly said that great engines turn on small pivots. These are the words used by Sri V. P. Sing Union Finance Minister in his budget speech. In order to provide co-ordination to this sector at Apex level, it is proposed to set up a separate special fund. It is called small industries development fund in the IDBI. This fund will also be charged with the responsibility of providing re-financing assistance for development, expansion and modernisation of small cale industries. I also propose to announce a new scheme for excise exemption for small scale industries which should considerably facilitate their growth"

ಕಳೆದ ೨ ವರ್ಷಗಳಲ್ಲಿ ತೆಗೆದುಕೊಂಡಂಥ ತೀರ್ಮಾನಗಳಿಂದಾಗಿ ನಮ್ಮ ರಾಷ್ಟ್ರದ ಕೈಗಾರಿಕಾ ನೀತಿಯಲ್ಲಿ ಕೆಲವೊಂದು ಬದಲಾವಣೆಗಳಾಗಿವೆ. ಅವುಗಳ ಪ್ರಯೋಜನ ನಮ್ಮ ರಾಜ್ಯಕ್ಕೆ ಆಗಬೇಕಾಗುತ್ತದೆ. ಆ ಬದಲಾವಣೆಗಳು ಏನು ಎಂಬುದನ್ನು ನಮ್ಮ ರಾಜ್ಯ ಸರ್ಕಾರದವರು ಗುರ್ತಿಸಿಕೊಂಡು ಅದರ ಕೆಳಗೆ ಯಾವ ಯಾವ ಅನುಕೂಲಗಳನ್ನು ರಾಜ್ಯಕ್ಕೆ ಮಾಡಿ ಕೊಡಬೇಕೆಂದು ತಾವು ಚಿಂತನೆ ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಕೆಲವೊಂದು ಕೈಗಾರಿಕೆಗಳ ವಿಚಾರದಲ್ಲಿ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ನೀವು ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಎಷ್ಟು ಮುಖ್ಯವಾದುದೋ ಆ ಕೈಗಾರಿಕೆಗಳು ರೋಗಗ್ರಸ್ಥವಾದಾಗ ಅದಕ್ಕೆ ಸೂಕ್ತ ಔಷಧೋಪಚಾರ ಮಾಡಿ ಗುಣಪಡಿಸಿ ಉತ್ಪಾದನಾ ದಿಸೆಯಲ್ಲಿ ತೊಡಗುವಂತೆ ಮಾಡತಕ್ಕದು ಅಷ್ಟೇ ಮುಖ್ಯವಾದುದು. ಅದು ಖಾಸಗೀ ಕ್ಷೇತ್ರದಲ್ಲಿರಬಹುದು ಅಥವಾ ಸರ್ಕಾರೀ ಕ್ಷೇತ್ರದಲ್ಲಿರಬಹುದು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸರ್ಕಾರೀ ಆಸ್ಪತ್ರೆಯಲ್ಲಿ ಒಬ್ಬನೇ ವೈದ್ಯನಿದ್ದರೆ ಎಲ್ಲ ಜನರೂ ಅವನ ಹತ್ತಿರವೇ ಹೋಗಬೇಕು. ಏಕೆಂದರೆ ಅಲ್ಲಿ ಖಾಸಗೀ ವೈದ್ಯ ಇಲ್ಲ. ಅದೇ ರೀತಿ ಖಾಸಗೀ ಕೈಗಾರಿಕೆಗಳು ರೋಗಗ್ರಸ್ಥವಾಗಿದ್ದರೂ ಕೂಡ ಸರ್ಕಾರದವರೇ ಅವುಗಳ ನೆರವಿಗೆ ಹೋಗಬೇಕು. ಬೇರೆಯವರು ಅವುಗಳನ್ನು ತೆಗೆದುಕೊಳ್ಳುವುದಕ್ಕೆ, ಅಥವಾ ನೆರವನ್ನು ನೀಡುವುದಕ್ಕೆ ಸಾಧ್ಯವಿಲ್ಲ. ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಸರ್ಕಾರೀ ಸ್ವಾಮ್ಯದಲ್ಲಿರತಕ್ಕ ವಿ.ಐ.ಎಸ್.ಎಲ್. ಆಗಲಿ ಅಥವಾ ಸೋಪ್ಸ್ ಅಂಡ್ ಡಿಟರ್ಜೆಂಟ್ ಕಾರ್ಖಾನೆಯಾಗಲಿ ರೋಗಗ್ರಸ್ಥವಾದಾಗ ಯಾವರೀತಿ ನೀವು ನೆರವನ್ನು ನೀಡಿದ್ದೀರಿ. ಅದೇರೀತಿ ಬೇರೆ ಕೈಗಾರಿಕೆಗಳು ರೋಗಗ್ರಸ್ಥವಾಗಿರುವುವು ಏನಿವೆ ಅವುಗಳಿಗೂ ನೆರವನ್ನು ನೀಡಬೇಕು. ೮೩-೮೪ನೇ ಸಾಲಿನಲ್ಲಿ ನಮಗೆ ಸಿಕ್ಕಿರುವ ಲೆಕ್ಕದ ಪ್ರಕಾರ ೭೫೩ ಲಕ್ಷ ರೂಪಾಯಿ ಲಾಭ ಬಂದಿದ್ದರೆ, ೩,೨೮೨ ಲಕ್ಷ ರೂಪಾಯಿ ಲುಕ್ಸಾನಾಗಿದೆ ಈ ವರ್ಷ ಇನ್ನೂ ಹೇಗೆ ಪ್ರಗತಿಯಾಗಿದೆಯೆಂದರೆ ೬೫೩ ಲಕ್ಷ ರೂ. ಲಾಭ ಬಂದಿದ್ದರೆ, ೩೫೭ ಲಕ್ಷ ರೂಪಾಯಿ ಲುಕ್ಸಾನಾಗಿದೆ. ಈ ಜಾಡ್ಯ ಇವತ್ತು ಬಾದಿರಬಹುದು. ಇವತ್ತು ಇರತಕ್ಕ ಈ ಕಾಯಿಲೆಗೆ ವೈದ್ಯರು ಔಷಧಿಯನ್ನು ಕೊಡಬೇಕು ಅದುಬಿಟ್ಟು ಈ ರೋಗ ಹಿಂದೆ ಯಾವತ್ತೋ ಬಂದಿದ್ದು ಇವತ್ತು ಜಾಸ್ತಿಯಾಗಿ ಆರೋಗ್ಯ ಕೆಟ್ಟು ಹೋಗಿದೆ ಎಂದು ವೈದ್ಯರು ಹೇಳಬಾರದು. ಅದೇ ರೀತಿ ಈ ರೋಗಗ್ರಸ್ಥ ಕೈಗಾರಿಕೆಗಳೂ ಕೂಡ ಇವತ್ತು ಟೆಕ್ಸ್‌ಟೈಲ್ ಮಿಲ್‌ಗಳಲ್ಲಿ ಕೆಲವು ರೋಗಗ್ರಸ್ಥವಾಗಿರುವುವುಗಳ ಪೈಕಿ ಕೆಲವನ್ನು ನೀವು ವಹಿಸಿ ಕೊಂಡಿದ್ದೀರಿ, ಇನ್ನು ಕೆಲವನ್ನು ವಹಿಸಿಕೊಂಡಿಲ್ಲ.

ಮಾನ್ಯ ಅಧ್ಯಕ್ಷರೆ, ಟೆಕ್ಸ್‌ಟೈಲ್ ಮಿಲ್‌ಗಳ ಬಗ್ಗೆ ಒಂದು ವಿಚಾರವನ್ನು ಮಾನ್ಯ ಕೈಗಾರಿಕಾ ಸಚಿವರ ಗಮನಕ್ಕೆ ತರಬಯಸುತ್ತೇನೆ. ಈಗ್ಗೆ ೧೫-೨೦ ದಿವಸದ ಹಿಂದೆ ಗುಲ್ಬರ್ಗಾದಲ್ಲಿ ಐ.ಎನ್.ಟಿ.ಯು.ಸಿ ಯ ಅಧ್ಯಕ್ಷರಾದ ಪದ್ಮಭೂಷಣ ರಾಮಾನುಜಂರವರು ಒಂದು ಭಾಷಣವನ್ನು ಮಾಡಿದರು. ಅವರು ರೋಗಗ್ರಸ್ಥ ಗಿರಣಿಗಳ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ಒಂದು ಮನವಿಯನ್ನು ಏನು ಮಾಡಿದ ರೆಂದರೆ ಗುಜರಾತ್‌ನಲ್ಲಿ ಸ್ಟೇಟ್ ಟೆಕ್ಸ್‌ಟೈಲ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ಆದಕ್ಕೆ ಕೇಂದ್ರ ಸರ್ಕಾರದವರು ೬೫ ಕೋಟಿ ರೂಪಾಯಿಗಳ ಆರ್ಥಿಕ ಸಹಾಯವನ್ನು ಮಾಡಿದ್ದಾರೆ. ನಿಮ್ಮ ಕರ್ನಾಟಕ ದಲ್ಲಿ ನೀವು ಏನು ಮಾಡಿದರೂ ಕೆಲವು ಗಿರಣಿಗಳು ಸರಿಯಾಗುವುದಿಲ್ಲ. ಹಳೆಯ ಯಂತ್ರೋಪಕರಣ ಗಳಿರುತ್ತವೆ. ಅವುಗಳನ್ನು ಆಧುನೀಕರಣ ಮಾಡುವುದಕ್ಕೆ ಹಣ ಬೇಕಾಗುತ್ತದೆ. ನಿಮ್ಮಲ್ಲಿ ಹಣವಿಲ್ಲ. ಆದ್ದರಿಂದ ಗುಜರಾತ್‌ನಲ್ಲಿ ಮಾಡಿರುವಂತೆ ಸ್ಟೇಟ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ನ್ನು ಮಾಡಿದರೆ ಅದಕ್ಕೆ ಕೇಂದ್ರ ಸರ್ಕಾರದಿಂದ ಸಹಾಯ ದೊರೆಯುತ್ತದೆಂದು ಬಹಳ ಜವಾಬ್ದಾರಿಯಿಂದ ಅವರು ಹೇಳಿದ್ದಾರೆ. ಇದನ್ನು ಗಮನಿಸಿ ಇದರ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕು. ಈ ರೀತಿ ಕಾರ್ಪೊರೇಷನ್‌ನ್ನು ತಾವು ಸ್ಥಾಪನೆ ಮಾಡಿದರೆ.. ......

ಶ್ರೀ ಜೆ. ಹೆಚ್. ಪಟೇಲ್.—ನಾವು ಈಗಾಗಲೇ ಒಂದು ಸ್ಟೇಟ್ ಕಾರ್ಪೊರೇಷನ್‌ನ್ನು ಇನ್-ಕಾರ್ಪೊರೇಟ್ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾಡಿದ್ದರೆ ಸಂತೋಷ ರೋಗಗ್ರಸ್ಥ ಕೈಗಾರಿಕೆಗಳಿಗೆ Karnataka Relief Undertaking Special Provision Act 1977, ಇದರ ಪ್ರಕಾರ ರಿಲೀಫ್ ಕೊಡಲು ೫-೬ ಕೈಗಾರಿಕೆಗಳನ್ನು ತಾವು ತೆಗೆದುಕೊಂಡಿದ್ದೀರಿ. ಆದರೆ ಇದುವರೆಗೂ ಏತಕ್ಕೆ ಅದನ್ನು ಏನೂ ಮಾಡಲಿಲ್ಲ ? ಸುಮ್ಮನೆ ಕುಳಿತಿದ್ದೀರಿ. ಎಂ.ಇ.ಐ ಕೈಗಾರಿಕೆಯನ್ನು ನೀವು ತೆಗೆದುಕೊಂಡಿದ್ದೀರಿ. ಆದರೆ ಇದುವರೆಗೂ ಕೂಡ ನಿಜವಾಗಿ ಏನು ರೋಗ ಇದೆ ಆ ಬಗ್ಗೆ ಯಾವುದೇ ರೀತಿಯ ಕ್ರಮವನ್ನೂ ನೀವು ತೆಗೆದುಕೊಂಡಿಲ್ಲ. ಇದರ ಬಗ್ಗೆ ಸುದೀರ್ಘವಾದ ಒಂದು ಟಿಪ್ಪಣಿ ನನ್ನ ಹತ್ತಿರ ಇದೆ. ಅದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ.

ಇನ್ನೊಂದು ಪ್ರಶ್ನೆ ಏನೆಂದರೆ, ಈ ಕೈಗಾರಿಕೆಗೂ ಮತ್ತು ಬಿ.ಇ.ಎಲ್. ಬಿ.ಹೆಚ್.ಇ.ಎಲ್. ಗೂ ಒಂದು ಪೈಪೋಟಿ ಇದೆ. ಈ ಎರಡು ಕಾರ್ಖಾನೆಯವರೂ ಒಂದೇ ರೀತಿಯ ವಸ್ತುಗಳನ್ನು ಉತ್ಪಾದನೆ ಮಾಡುವುದರಿಂದ ಎಂ.ಇ.ಐ ನವರು ಬಿ ಹೆಚ್.ಇ.ಎಲ್.ನವರ ಜೊತೆ ಪೈಪೋಟಿ ಮಾಡುವುದಕ್ಕೆ ಆಗದಿರುವುದರಿಂದ ಈ ಕಾರ್ಖಾನೆಯನ್ನು ಬಿ.ಹೆಚ್.ಇ.ಎಲ್.ನೊಂದಿಗೆ ಮರ್ಜ್ ಮಾಡಬೇಕೆಂಬ ಒಂದು ವಾದ ಇದೆ. ಸರ್ಕಾರ ಇದನ್ನು ತೀವ್ರವಾಗಿ ಪರಿಶೀಲಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇದೇ ರೀತಿ ಗೌರಿಬಿದನೂರು ಸಹಕಾರಿ ಸಕ್ಕರೆ ಕಾರ್ಖಾನೆ, ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ, ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಗಳೂ ಕೂಡ ಇದೇರೀತಿ ಪರಿಸ್ಥಿತಿಗೆ ಬಂದು ನಿಂತುಹೋಗಿವೆ. ಇಲ್ಲಿ ೩ ಸಾವಿರಕ್ಕಿಂತ ಹೆಚ್ಚಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಸೀಸನಲ್ ಕಾರ್ಮಿಕರೂ ಸೇರಿದರೆ ಇನ್ನೂ ಜಾಸ್ತಿಯಾಗುತ್ತಾರೆ. ಸಹಕಾರಿ ರಂಗದಲ್ಲಿರತಕ್ಕ ಕಾರ್ಖಾನೆಗಳಲ್ಲಿ ಸರ್ಕಾರದ ಅಧಿಕಾರಿಗಳು ಮ್ಯಾನೇಜ್‌ಮೆಂಟ್‌ನಲ್ಲಿ ಇದ್ದರೂ ಕೂಡ ಲುಕ್ಸಾನಾಗಿದೆ. ಈಗ ಇದರ ಬಗ್ಗೆ ಏನು ಮಾಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದೀರೆಂದು ಕೇಳಿದ್ದೇವೆ. ಆದರೆ ಇದುವರೆಗೂ ಏನೂ ಆಗಿಲ್ಲ. ಸಮರ್ಥ ರೀತಿಯಲ್ಲಿ ಇದು ಉತ್ಪಾದನೆ ಮಾಡುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಬಯಸುತ್ತೇನೆ.

೪-೦೦ ಪಿ. ಎಂ.

ಮಾನ್ಯ ಉಪಾಧ್ಯಕ್ಷರೇ ರಾಜ್ಯದ ಕೈಗಾರಿಕಾ ಬೆಳವಣಿಗೆಯನ್ನು ನಾವು ನೋಡಿದಾಗ ಇದರಲ್ಲಿ ಯೋಜನಾ ವೆಚ್ಚದಲ್ಲಿ ಹೋದ ವರ್ಷಕ್ಕಿಂತ ಈ ವರ್ಷ ಕಡಿಮೆ ಮಾಡಿರತಕ್ಕಂಥದ್ದನ್ನು ನೋಡಿದ್ದೇವೆ. ೧೯೭೭-೭೮ರಲ್ಲಿ ೪,೬೦೨ ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದು ಒಟ್ಟು ೫೬೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ೧೯೭೮-೭೯ ರಲ್ಲಿ ಕೇವಲ ೪,೯೩೨ ಲಕ್ಷ ಇಷ್ಟು ಮಾತ್ರ ಖರ್ಚು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ, ಈ ರೀತಿಯಾಗಿ ಈ ಒಂದು ವಲಯಕ್ಕೆ ತಾವು ಯೋಜನಾ ವೆಚ್ಚವನ್ನು ಕಡಿತಗೊಳಿಸಿರುವುದಕ್ಕೆ ಕಾರಣ ಏನು ಎನ್ನುವುದನ್ನು ತಮ್ಮಿಂದ ತಿಳಿದುಕೊಳ್ಳ

ಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೇ ಕಳೆದ ೧೯೮೪-೮೫ ರಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಏನು ಹೊಸ ಹೊಸ ಕೈಗಾರಿಕೆಗಳು ರಿಜಿಸ್ಟರ್ ಆಗಿರುತ್ತವೆಯೋ ಇಂಥ ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿರತಕ್ಕಂಥ ಕೆಮಿಕಲ್ಸ್ ಕೈಗಾರಿಕೆಗಳೂ ಸೇರಿವೆ. ನನಗೆ ತಿಳಿದಮಟ್ಟಿಗೆ ಕೆಲವೊಂದು ಕೆಮಿಕಲ್ಸ್ ಕೈಗಾರಿಕೆಗಳ ಬಗ್ಗೆ ನನ್ನ ಭಾವನೆಯೇ ಬೇರೆ ಇದೆ. ತಪ್ಪಿದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಕೆಮಿಕಲ್ಸ್ ಇಂಡಸ್ಟ್ರೀಸ್‌ಗೆ ಏನು ಮಾಡಿದ್ದೀರಿ ಎಂದರೆ ನನ್ನ ಗಮನಕ್ಕೆ ಬಂದ ಹಾಗೆ ಇದರಲ್ಲಿ ಬಹುಪಾಲು ರೆಕ್ಟಿಫೈಡ್ ಸ್ಪಿರಿಟ್ ಉಪಯೋಗಿಸಿ ಹಲವಾರು ಬೇರೆ ಬೇರೆ ಕೆಮಿಕಲ್ಸ್‌ಗಳನ್ನು ತಯಾರು ಮಾಡತಕ್ಕಂಥ ಕೈಗಾರಿಕೆಗಳು ಸ್ಥಾಪನೆಯಾಗಿರುತ್ತದೆ. ಇಂಥ ಕೆಲವು ಕೈಗಾರಿಕೆಗಳು ಉತ್ಪಾದನೆ ಮಾಡುತ್ತಿರತಕ್ಕಂಥದ್ದರ ಬಗ್ಗೆ ಹೇಳಬೇಕಾದರೆ ಅದರಲ್ಲಿ ಹಲವಾರು ಮಂದಿ ಹಣವನ್ನು ಮಾಡುತ್ತಿದ್ದಾರೆ ಎನ್ನತಕ್ಕಂಥ ಅಂಶವನ್ನು ಬಹಳ ಗಂಭೀರವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಕೈಗಾರಿಕೆಗಳಲ್ಲಿ ಕೆಲವು ಮಾನ್ಯ ಮಂತ್ರಿಗಳು, ಇನ್ನಿಬ್ಬರು ಮಂತ್ರಿಗಳಿಗೆ ಸಂಬಂಧಪಟ್ಟಂತೆ ಅವರ ಸಂಬಂಧಿಗಳಿಗೆ ಕೈಗಾರಿಕಾ ಲೈಸೆನ್ಸ್ ಕೊಟ್ಟಿದ್ದಾರೆ. ಒಬ್ಬ ಮಂತ್ರಿ ಕೈಗಾರಿಕೆಯನ್ನು ಮಾಡಿದರೆ ತಪ್ಪೇನು ಇಲ್ಲ, ಆದರೆ ಮಂತ್ರಿ ಎನ್ನುವುದನ್ನೇ ಕೈಗಾರಿಕೆ ಮಾಡಿಕೊಂಡರೆ ತಪ್ಪಾಗುತ್ತದೆ. ಅವರೇ ಸ್ವತಃ ಕೈಗಾರಿಕೆಯನ್ನು ಮಾಡಿದರೆ ತಪ್ಪು ಎನ್ನುವುದು ಆಪಾದನೆಯ ದೃಷ್ಟಿಯಿಂದ ಸತ್ಯ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಸಾರ್ವಜನಿಕ ವಾತಾವರಣದಲ್ಲಿ ಲೈಸೆನ್ಸ್‌ಗಳನ್ನು ಒಂದು ರೀತಿ ಸಿಕ್ಕಾಪಟ್ಟೆ ಕೊಟ್ಟು ಇಕ್ಕಟ್ಟಿನ ಪರಿಸ್ಥಿತಿಯಲ್ಲಿರುವಂಥ ಕಾಲದಲ್ಲಿ ಇಂಥ ನಿರ್ಬಂಧಗಳು ನಡದೇ ಇದೆ. ಇದಕ್ಕೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ಕೊಡಬೇಕು. ಇದಕ್ಕೆ ಕಾರಣಗಳನ್ನು ಕೊಟ್ಟು ಗಮನಕ್ಕೆ ತಂದಾಗ ಸರ್ಕಾರದವರು ಸ್ಪಷ್ಟವಾದ ಚಿತ್ರವನ್ನು ಕೊಡಬೇಕು. ತಾವು ಬಂದ ಮೇಲೆ ಎಷ್ಟು ಕೈಗಾರಿಕೆಗಳಿಗೆ ಲೈಸೆನ್ಸ್‌ಗಳನ್ನು ಕೊಟ್ಟಿದ್ದೀರಿ ? ಅದರ ಕೆಪಾಸಿಟಿ ಏನು ? ಪವರ್ ಯುಟಿಲೈಸೇಷನ್ ಏನು ? ಎಷ್ಟು ಜನಸಂಪರ್ಕ ಉದ್ದೇಶದಿಂದ ಇಂಥ ಘಟಕಗಳನ್ನು ಬೆಳೆಸಿದ್ದೀರಿ ಇದನ್ನು ತಿಳಿಸಬೇಕು? ಮತ್ತೆ ಕೆಲವರು ಬಳಸದೆ ಸಿಕ್ಕಿಬಿದ್ದಿದ್ದಾರೆಂದು ವರದಿಯಾಗಿದೆ. ಇಂಥ ಕೆಲಸಗಳ ಬಗ್ಗೆಯೂ ಸ್ಪಷ್ಟವಾದ ಚಿತ್ರವನ್ನು ತಾವು ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ.

(ಶ್ರೀ ಬಿ. ಜಿ. ಬಣಕಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾನ್ಯ ಅಧ್ಯಕ್ಷರೇ ಇವತ್ತು ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕೈಗಾರಿಕೆಯ ಕತೆ ಏನಾಗಿದೆ ಮೈಸೂರು ಶುಗರ್ ಕಂಪನಿಯ ಕತೆ ಏನಾಗಿದೆ, ಹಾಗೆಯೇ ಮೈಸೂರು ಪೇಪರ್ ಮಿಲ್ಸ್ ಕತೆ ಏನಾಗಿವೆ ಎಂಬುದರ ಬಗ್ಗೆ ಇದೇ ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ, ಮತ್ತೆ ಅದೇ ಅಂಕಿ ಅಂಶಗಳನ್ನು ಕೊಟ್ಟು ಅದನ್ನು ಹೆಚ್ಚಿಗೆ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಸದ್ಯ ತಾವು ಬಂದಿದ್ದೀರಿ ಆದ್ದರಿಂದ ಸ್ವಲ್ಪ ಮೊಟಕು ಮಾಡುತ್ತೇನೆ. ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕಂಪನಿಯಲ್ಲಿ ಲಾಸ್ ಆಗಿರತಕ್ಕಂಥದು ಬಹುಶಃ ಸುಮಾರು ೮೧ ಕೋಟಿ ರೂಪಾಯಿಗಳು ಅಕ್ಯುಮಲೇಟೆಡ್ ಲಾಸ್ ಇದೆ. ತಾವು ಏನು ಒಂದು ಮಾತನ್ನು ಹೇಳಿದ್ದೀರಿ ಎಂದರೆ ಹೊಸ ಟೆಕ್ನಾಲಜಿಯನ್ನು ಪರಿಶೀಲನೆ ಮಾಡುತ್ತಿದ್ದೇವೆ. ಈಗ ಈ ವಿಧಾನ ಬಳಕೆಯಲ್ಲಿದೆ. ಶೇಕಡಾ ೬೫ ರಷ್ಟು ಟೆಕ್ನಾಲಜಿಗಳಿಗೆ ಇದನ್ನು ಅನ್ವಯಿಸಿದರೆ ಹೆಚ್ಚು ಕಡಿಮೆ ಬಹಳವಾಗಿ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿದ್ದೀರಿ, ಇದು ಕಾರ್ಯಗತವಾದರೆ ಕರ್ನಾಟಕದ ಒಂದು ಕೀರ್ತಿ ನಿಮಗೆ ಬರುತ್ತದೆ. ಕೈಗಾರಿಕೆಗಳು ಸ್ವಾಯತ್ತತೆಯಿಂದ ನಡೆಯುತ್ತಿದೆ ಎಂದು ತಮಗೆ ಆ ಕೀರ್ತಿ ಬರಲಿ ಎಂದು ಹಾರೈಸುತ್ತೇನೆ. ಮೈಸೂರು ಶುಗರ್ ಕಂಪನಿಯನ್ನು ಮಾಡ್ರನೈಸ್ ಮಾಡಲಿಕ್ಕೆ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ, ಇದನ್ನು ಮಾಡಿ ಎಂದರೆ ಸುಪ್ರೀಂ ಕೋರ್ಟ್ ಎಂದು ಹೇಳುತ್ತೀರೋ ಏನೋ ಗೊತ್ತಿಲ್ಲ. ಮೊನ್ನೆ ಒಂದು ಅವಕಾಶ ಸಿಕ್ಕಿತ್ತು, ಅದೇ ಕೆಲಸವನ್ನು ಮೈಸೂರು ಶುಗರ್ ಕಂಪನಿಗೆ ಕೊಟ್ಟಿದ್ದರೆ ಬಹುಶಃ ಆ ಕಂಪನಿ ಬದುಕುತ್ತಿತ್ತು, ಇಷ್ಟೆಲ್ಲಾ ರಾದ್ಧಾಂತಕ್ಕೆ ಅವಕಾಶ ಇರುತ್ತಿರಲಿಲ್ಲ, ಅದಕ್ಕೆ ಕೈ ಕೊಟ್ಟಿರಿ ಈಗಲೂ ಕೂಡ ಆ ಕಂಪನಿಯನ್ನು ಹೇಗಾದರೂ ಸರಿಪಡಿಸುವುದಕ್ಕೆ ತೀವ್ರ ಲಕ್ಷ್ಯವನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಮೈಸೂರು ಪೇಪರ್ ಮಿಲ್ಸ್ ಲಾಭ ಮಾಡುತ್ತಿದೆ ಎಂದು ಹೇಳಿರುತ್ತೀರಿ, ಈಗಾಗಲೇ ಸ್ವಲ್ಪ ಲಾಭವನ್ನು ತೋರಿಸಿದ್ದೀರಿ, ನನಗೆ ತಿಳಿದಮಟ್ಟಿಗೆ ಅದು ಲಾಸ್ಸಿನಲ್ಲಿ ನಡೆಯುತ್ತಿದೆ ಎಂದು ತಿಳಿದಿದ್ದೇನೆ. ಹೋದ ವರ್ಷವೇ ಈ ಕೈಗಾರಿಕೆಯನ್ನು ಉತ್ತಮ ಪಡಿಸುತ್ತೇವೆಂದು ಹೇಳಿದ್ದೀರಿ.

ಮಾನ್ಯ ಅಧ್ಯಕ್ಷರೇ ಈ ಸರ್ಕಾರಿ ಕ್ಷೇತ್ರದ ಕೈಗಾರಿಕೆಗಳು ಎಲ್ಲಿ ಹಳಿ ತಪ್ಪುತ್ತವೆ ಎಂದರೆ ವಿಸ್ತರಣೆಗೆ ಪ್ರಾರಂಭ ಯಾವಾಗ ಮಾಡುವುದಕ್ಕೆ ಕೈಹಾಕುತ್ತಾರೋ ಆಗ ಅಲ್ಲಿ ಹಳಿ ತಪ್ಪುತ್ತದೆ. ಒಂದು ಕೈಗಾರಿಕೆಯಿಂದ ಸ್ವಲ್ಪ ಲಾಭ ಬರುತ್ತದೆ ಎಂದರೆ ದೇಶದಲ್ಲೆಲ್ಲಾ ತನ್ನ ಸಾಮ್ರಾಜ್ಯವನ್ನು ಬೆಳೆಸಲು ಹೋಗಿ ಏನೆಲ್ಲಾ ಆಗುತ್ತದೆಂಬುದನ್ನೆಲ್ಲ ಆ ಸಂದರ್ಭದಲ್ಲಿ ಹೇಳಿ, ಕೊನೆಕೊನೆಗೆ ಏನಾಗುತ್ತದೆ ಎಂಬುದನ್ನು ಹೇಳಬೇಕಾದ್ದಿಲ್ಲ. ಮೈಸೂರು ಪೇಪರ್ ಮತ್ತು ಶುಗರ್ ಫ್ಯಾಕ್ಟರಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಬಗಾಸ್ ಬಾಯಿಲರ್ ಐಡಲ್ ಕೆಪಾಸಿಟಿ ಉಪಯೋಗಿಸಿಕೊಳ್ಳಬಹುದೆಂಬುದು ಒಂದು ತತ್ವ. ಇನ್ನೊಂದು ಬಗಾಸೆಯನ್ನು ಪೇಪರ್ ಪಲ್ಪಿಗೆ ಉಪಯೋಗಿಸಬಹುದೆನ್ನುವುದಕ್ಕೋಸ್ಕರ ಆ ಕಬ್ಬಿನ ಕಾರ್ಖಾನೆಯನ್ನು ಮಾಡಿದರು. ಇದು ಸನ್ಯಾಸಿ ಸಂಸಾರ ಅಂತ ಹೇಳುತ್ತಾರಲ್ಲ ಆ ತರಹ. ಈಗ ಏನಾಗಿದೆ ಶುಗರ್ ಫ್ಯಾಕ್ಟರಿಯ ಎಕಾನಮಿ ದೃಷ್ಟಿಯಿಂದ If the baggasse is used as a captive fual it is more economical to a sugar factory. ಈ ರೀತಿ ಶುಗರ್ ಫ್ಯಾಕ್ಟರಿಯನ್ನು ರನ್ ಮಾಡುವುದಕ್ಕೆ ಮತ್ತೇನಾದರೂ ಹಾಕಬೇಕು. ಈ ರೀತಿ ಚಿಂತನ ಚಿಲುಮೆ ಕೆಲವು ಸಾರಿ ಬೇಕಾದಕ್ಕಿಂತ ಹೆಚ್ಚಿನ ಎತ್ತರಕ್ಕೆ ಹಾರಿ ಅನಂತರ ಕೆಳಗಡೆ ಬೀಳತಕ್ಕಂಥ ಪರಿಸ್ಥಿತಿ ಬಂದು ನಮ್ಮ ಕೈಗಾರಿಕೆಗಳು ದಾರಿ ತಪ್ಪಿರತಕ್ಕಂಥ ಹಲವಾರು ಸಂದರ್ಭಗಳು ಇರುತ್ತವೆ.

ಮಾನ್ಯ ಅಧ್ಯಕ್ಷರೇ ಈಗ ನಾನು ಒಂದು ವಿಚಾರವನ್ನು ಮಾನ್ಯ ಶ್ರೀ ಜೆ. ಹೆಚ್. ಪಟೇಲ್‌ರವರಲ್ಲಿ ಅಂದರೆ ಕೈಗಾರಿಕಾ ಮಂತ್ರಿಗಳವರಲ್ಲಿ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಅವರು ಹೋದ ವರ್ಷ ತಮ್ಮ ಉತ್ತರದಲ್ಲಿ ದೊಡ್ಡ ಸೈದ್ಧಾಂತಿಕ ವ್ಯಾಖ್ಯಾನವನ್ನು ಕೊಟ್ಟರು. ಸಮಾಜವಾದ ಎಂದರೆ ಏನು ? ಸಮಾಜವಾದದಲ್ಲಿ ಇಂಡಸ್ಟ್ರಿಯಲ್ಸ್ ಪಾತ್ರ ಹೇಗೆ ಇರಬೇಕು ಮತ್ತು ಕಮ್ಯಾಂಡಿಂಗ್ ಹೈಟ್ಸ್‌ನ್ನು ಉಳಿಸಿಕೊಂಡರೆ ಸಾಕು ಎನ್ನುವ ಬಗ್ಗೆ ಗಮನವನ್ನು ಸೆಳೆದಿದ್ದಾರೆ. ಆಮೇಲೆ ಸಿಕ್ ಇಂಡಸ್ಟ್ರೀಸ್ ಬಗ್ಗೆ ಹೇಳುತ್ತಾ ಇಂಥ ಇಂಡಸ್ಟ್ರೀಸ್‌ಗಳನ್ನು ಯಾರಾದರೂ ನಡೆಸಲು ಮುಂದೆ ಬಂದಾಗ ಅವರಿಗೆ ಕೊಟ್ಟರೆ ತಪ್ಪೇನು ಇಲ್ಲ ಎನ್ನುವ ವಿಚಾರವನ್ನೂ ಕೂಡ ಹೇಳಿದರು. ನಾನು ಅವರಿಗೆ ಹೇಳುವುದಕ್ಕೆ ಇಚ್ಛೆ ಪಡುವುದಾದರೂ ಏನೆಂದರೆ ಈ ರೀತಿಯಾದ ವಿಚಾರಗಳು ಸರಿಯಾದುದಲ್ಲ.

ಆದ್ದರಿಂದ ಮಂತ್ರಿಯಾಗಿ ನೀವು ಯಾವುದೇ ತರಹ ದುರ್ಬಲ ಸ್ಥಿತಿ ಒದಗಿದರೂ ಕೂಡ ಸ್ಥಿಯನ್ನು ಉಳಿಸಿಕೊಂಡು ಸರ್ಕಾರದ ಕಮಿಟ್‌ಮೆಂಟ್ ಏನಿದೆ, ಈ ಪಬ್ಲಿಕ್ ಸೆಕ್ಟರ್ ಏನಿದೆ, ಇದನ್ನು ದೃಢಪಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನೀವು ಈ ತರಹ ಚಿಂತನೆಯಲ್ಲಿ ಇದ್ದೀರಿ ಎಂದು ಗೊತ್ತಾದಕೂಡಲೇ ಕೈಗಾರಿಕೆಗಳನ್ನು ಸಂಪೂರ್ಣವಾಗಿ ಕುಲಗೆಡಿಸತಕ್ಕಂಥ ಸ್ವಾರ್ಥಶಕ್ತಿಗಳು ಇವೆ. ನಮ್ಮ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಏನು ದುರಂತವನ್ನು ಅನುಭವಿಸುತ್ತಿವೆ. ಇದು ತನ್ನಷ್ಟಕ್ಕೆ ತಾನೆ ಆಗುತ್ತಿದೆ ಎಂದಲ್ಲ. ಈ ತರಹ ಹಾಳುಮಾಡುವುದಕ್ಕೆ ಕಾದಿರತಕ್ಕಂಥ ಬೇರೆ ಶಕ್ತಿಗಳೂ ಕೂಡ ಇವೆ. ಟ್ರೋಜನ್ ಹಾರ್ಸ್ ತರಹ ಯಾವುದೋ ಒಬ್ಬ ಟೆಕ್ನಿಕಲ್ ಕನ್ಸಲ್ಟೆಂಟ್‌ನನ್ನು ಹಿಡಿದುಕೊಂಡು ಬಂದು ಇದರೊಳಗೆ ತೂರಿಸಿ ಬಿಡುತ್ತಾರೆ. ಈ ಕೈಗಾರಿಕೆಗಳನ್ನು ಹಾಳು ಮಾಡುವುದಕ್ಕೆ ಎಲ್ಲಾ ಕನ್ಸಲ್ಟೆನ್ಸಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತಾರೆ, ಇವು ಬಿಳಿ ಆನೆಗಳು. ನಿಜ. ಆದರೆ ಇವು ಒಂದೇ ದಿವಸಕ್ಕೆ ಸಾಯುವುದಿಲ್ಲ. ಊರಿನಲ್ಲಿ ಯಾರೋ ಒಬ್ಬರ ಕಣ್ಣು ದೊಡ್ಡ ಮರದ ಮೇಲೆ ಬಿದ್ದರೆ ಒಂದೇ ಸಲಕ್ಕೆ ಮರ ಕಡಿಯಲು ಹೋಗುವುದಿಲ್ಲ. ಹಾಗೇನಾದರೂ ಮಾಡಿದರೆ ಜನರ ಕೈಗೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ. ಎಲ್ಲೋ ಸ್ವಲ್ಪ ವಿಷಹಾಕಿಬಿಟ್ಟರೆ ಆಯಿತು. ಅದು ಸ್ವಲ್ಪಸ್ವಲ್ಪವಾಗಿ ನಶಿಸಿ ಬಿದ್ದುಹೋಗುತ್ತದೆ. ಆಗ ಮರದ ಕೊಂಬೆ, ರೆಂಬೆಗಳನ್ನು ಕತ್ತರಿಸಿಕೊಂಡು ಹೋಗುತ್ತಾರೆ. ಆನೆಯನ್ನು ತೆಗೆದುಕೊಂಡು ಹೋಗಿ, ನಮಗೆ ಸಾಕುವುದಕ್ಕೆ ಆಗುವುದಿಲ್ಲವೆನ್ನುವುದಾದರೆ ಬೇರೆ ರೀತಿಯಲ್ಲಿ ಅದನ್ನು ಸಾಯಿಸುತ್ತಾರೆ. ಇವರೇನು ಮಾಡುತ್ತಾರೆ ಎಂದರೆ ಒಂದೇ ಸಲಕ್ಕೆ ಸಾಯಿಸುವುದಿಲ್ಲ. ವಿಷ ಕೊಟ್ಟು ಸಾಯಿಸಿ ನಂತರ ಅದರ ಚರ್ಮ, ದಂತ ತೆಗೆದುಕೊಂಡು ಹೋಗುವ ಹಾಗೆ ಮಾಡುತ್ತಾರೆಯೇ ಹೊರತು, ರೋಗಗ್ರಸ್ಥ ಕಾರ್ಖಾನೆಗಳನ್ನು ಖಾಸಗೀ ವಲಯದವರು ಸಮರ್ಥವಾಗಿ ನಡೆಸುತ್ತಾರೆ ಎನ್ನುವುದಾದರೆ, ಖಂಡಿತವಾಗಿಯೂ ನಾನು ತಮ್ಮ ಜೊತೆಯಲ್ಲಿ ಸೇರುವುದಕ್ಕೆ ತಯಾರಿದ್ದೇನೆ. ಹೋದಸಲ ಕೂಡ ನಾನು ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದೆ. ಮಾನ್ಯ ಶ್ರೀ ವಿ. ಕೆ. ಕೃಷ್ಣಮೆನನ್ ಅವರು ಒಂದು ಮಾತನ್ನು ಹೇಳಿದ್ದಾರೆ. ಇದು ಶ್ರೀಮಾನ್ ಪಾಟೀಲರಿಗೆ ಗೊತ್ತಿದೆ. ಮೂಲಭೂತವಾದ ಪ್ರಶ್ನೆ ಇದು. ಅವರು ಏನು ಹೇಳುತ್ತಾರೆಂದರೆ,

"How public is our Public Sector and how Private is our Private Sector?

The Public Sector is dependent almost intirely on private contractors and invariably they establish line and organic links with officials who hail from the Middle Classes wedded to the concept of private property and profit.

The product mix of the public sector is determined so as not to affect the private sector. The Consuming Industries provide the market for public sector and the consequential depression of prices take place.

In other words, the public sectors is designed to operate in favour of the private sector. The private sector on the other hand is funded by the Public Sector Institutions and operate for consideration of private profit.

To put it bluntly, the public sector squanders public money for private profit and the private sector loots public money straight."

This is what Mr. V. K. Krishna Menon observed some time back.

ಅಧ್ಯಕ್ಷರು.—ಮುಕ್ತಾಯ ಮಾಡಿರಿ. ಇವತ್ತೇ ಇದನ್ನು ಮುಗಿಸಬೇಕು ಇಲ್ಲದಿದ್ದರೆ ಕೊನೆಗೆ ಓಟಿಗೆ ಹಾಕುತ್ತೇನೆ.

ಶ್ರೀ ಕೆ. ಎಚ್ ಶ್ರೀನಿವಾಸ್.—ಅದೇನಿದ್ದರೂ ಕೊನೆಗೆ ಮಾಡುವಂಥಾದ್ದು. ಸ್ವಲ್ಪ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು.—ಒಂದೂವರೆ ತಾಸು ಆಯಿತು. ಬೇಗ ಮುಗಿಸಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ವಿ. ಐ. ಎಸ್. ಎಲ್. ಕಾರ್ಖಾನೆಯನ್ನು ಒಂದು ಸಲ ಸುತ್ತಾಡಿಕೊಂಡು ಬರಬೇಕಾದರೆ ಎರಡು ತಾಸು ಬೇಕಾಗುತ್ತದೆ.

ಅಧ್ಯಕ್ಷರು.—ಒಂದೊಂದು ಇಂಡಸ್ಟ್ರಿ ಬಗ್ಗೆ ಮಾತನಾಡಬೇಕಾದರೆ ನಾಲ್ಕು-ನಾಲ್ಕು ತಾಸು ಬೇಕಾಗುತ್ತದೆ. ನೀವು ಅಡ್ಜಸ್ಟ್ ಮಾಡಬೇಕಾಗುತ್ತದೆ

ಶ್ರೀ ಕೆ. ಎಚ್. ಶ್ರೀನಿವಾಸ್.—ಆದ್ದರಿಂದ ಇವತ್ತು ಏನು ನೀವು ಖಾಸಗಿಯವರಿಗೆ ಕೊಡುತ್ತೇವೆ ಎನ್ನುವ ಮಾತು ಇದೆ ಈ ಮಾತನ್ನು ತಪ್ಪಿಯೂ ಕೂಡ ತಾವು ಆಡಬಾರದು. ತಾವು ಯಾವುದೋ ದೃಷ್ಟಿಯಿಂದ ಯಾವುದೋ ಮುಜಲಿನ ಚಿಂತನೆಯಲ್ಲಿ ಮಾತನಾಡಿದರೂ ಕೂಡ ಅದರಿಂದ ಉಂಟಾಗುವ ಪರಿಣಾಮ ಬೇರೆಯಾಗುವುದರಿಂದ, ಕೈಗಾರಿಕೆ ಇಲಾಖೆಯ ಮಂತ್ರಿಯಾಗಿ ಅಪ್ಪಿ ತಪ್ಪಿಯೂ ಯಾವುದೇ ಕೈಗಾರಿಕೆಯನ್ನು ಖಾಸಗಿಯವರಿಗೆ ಕೊಡುವ ಒಂದು ಮಾತನ್ನು ತಾವು ಹೇಳಕೂಡದು ಎಂದು ನಾನು ಒತ್ತಾಯ ಮಾಡುತ್ತೇನೆ.

ಇವತ್ತು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ಸ್ ವಿಷಯ ತೆಗೆದುಕೊಂಡರೆ, ಹಲವಾರು ಸಲ ಇಲ್ಲಿ ಚರ್ಚೆಯಾಗಿದೆ. ನ್ಯಾಯಾಂಗ ತನಿಖೆ ಮಾಡಿಸುತ್ತೇನೆ ಎಂದು ಹೇಳಿದ್ದರೂ, ವಿಸ್ತರಣೆ ಕಾರ್ಯ ಆಗಿಹೋಗಿದೆ. ಇವತ್ತು ಏನು ಸ್ಥಿತಿ ಇದೆ ಎಂಬುದನು ನೋಡಬೇಕು. ಇವತ್ತು ಆರು ಸಾವಿರ ಟನ್ ಕ್ಯಾಪಾಸಿಟಿ ಇದ್ದದ್ದು ೨೬ ಸಾವಿರಕ್ಕೆ ಹೋಗಿದೆ. ಎಂ. ಐ ಎಸ್. ಎಲ್. ಎರಡನ್ನೂ ಸೇರಿಸಿ ಸರಿಪಡಿಸುವುದಾಗಿ ಹೇಳಿದ್ದೀರಿ. ಇದು ಸುಲಭವಾದುದಲ್ಲ. ಇದರೊಳಗೆ

ಬೇರೆ ಬೇರೆ ಶಕ್ತಿಗಳು ಸೇರಿಕೊಂಡಿದ್ದಾರೆ. ನಾನು ಯಾರದ್ದೇ ವಕಾಲತ್ತು ಮಾಡುವುದಕ್ಕೆ ಈ ವೇದಿಕೆಯನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಆದರೆ ಇಲ್ಲಿ ತೀವ್ರ ರೀತಿಯ ಸರ್ಕಾರದ ತನಿಖೆ ನಡೆಯಬೇಕಾಗಿರುವುದು ಅಗತ್ಯವಿರುವುದರಿಂದ, ತಾವು ಈ ವರ್ಷವಾದರೂ ಒಂದು ಸಮಗ್ರ ತನಿಖೆಯನ್ನು ಮಾಡಬೇಕೆಂದು ಹೇಳುತ್ತೇನೆ. ಆಮೇಲೆ ಯಾವುದೇ ಇಂಪೋರ್ಟೆಡ್ ಅಲಾಟೆಡ್ ಮೆಟೀರಿಯಲ್ ಅನ್ನು ಅಲ್ಲಿಂದ ತರಿಸಿದಂತೆ ತೋರಿಸಿ ಮುಂಬೈನಲ್ಲೇ ವಿತರಣೆ ಮಾಡಿ, ಟ್ರಾನ್ಸಪೋರ್ಟೇಷನ್ ದುಡ್ಡನ್ನು ನಡುವೆ ಹೊಡೆಯುತಕ್ಕದ್ದು, ಅಲ್ಲಿ ಹಲವಾರು ಯೂನಿಟ್‌ಗಳು ಕೆಲಸ ಮಾಡದೇ ಇರತಕ್ಕದು, ಅಲ್ಲಿ ಆಡಿಟ್ ಮಾಡಲಿಕ್ಕೆ ಹೋದರೆ ಅವರನ್ನು ಹೆದರಿಸಿ ಮನೆಗೆ ಕಳಿಸಿರತಕ್ಕದ್ದು, ಇವೆಲ್ಲವೂ ಗಂಭೀರವಾಗಿ ಪರಿಗಣನೆ ಮಾಡಬೇಕಾದ ವಿಷಯಗಳು. ಅಲ್ಲಿ ಯಾರೋ ಟೆಕ್ನಿಕಲ್ ಕನ್ಸಲ್ಟೆಂಟ್–I understand that the Technical Consultant has got links with the Hindustan Lever. ಒಂದು ವರ್ಷಕ್ಕೆ ಅವರ ಟಿ. ಎ. ಮತ್ತು ಡಿ. ಎ. ಒಂಬತ್ತು ಲಕ್ಷ ರೂಪಾಯಿ ಆಗಿದೆ, ಹೀಗಾದರೆ ಯಾವ ಕೈಗಾರಿಕೆ ಉಳಿಯುತ್ತದೆ ? ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ ಉಳಿಯುತ್ತದೆಯೆ ? There is a scheme, a design to see that this industry goes sick and it is ultimately bought by the Hindusthan Lever.

ಮಾನ್ಯ ಅಧ್ಯಕ್ಷರೇ, ನಾನು ಇನ್ನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಇನ್ನು ಹತ್ತು–ಹದಿನೈದು ನಿಮಿಷಗಳಲ್ಲಿ ಮುಗಿಸುತ್ತೇನೆ. ಏಕೆಂದರೆ ಇದಕ್ಕೊಂದು ಮುಕ್ತಾಯ ಕೊಡಬೇಕಾಗಿದೆ.

ಅಧ್ಯಕ್ಷರು.—ನಾಲ್ಕೂವರೆ ಗಂಟೆಗೆ ಮುಗಿಸಿ ಬಿಡಿರಿ. ಮುಗಿಸಲಿಲ್ಲ ಎಂದರೆ ರೆಕಾರ್ಡ್ ಮಾಡಬೇಡಿ ಎಂದು ನಾನು ಹೇಳಬೇಕಾಗುತ್ತದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಆಗಲಿ ಇವತ್ತು ಏನಾಗಿದೆ ಎಂದರೆ, ಮಾನ್ಯ ಅಧ್ಯಕ್ಷರೇ, ಎಲ್ಲಾ ಖಿಲ ಕಂಪನಿಗಳನ್ನು ಮಾಡಿಬಿಟ್ಟಿದ್ದೇವೆ. ಅವರೆಲ್ಲರೂ ತಮ್ಮದೇ ಆದ ಸಾಮ್ರಾಜ್ಯಶಾಹಿಯನ್ನು ಬೆಳೆಸಿಕೊಂಡುಬಿಟ್ಟಿವೆ. ಈಗ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಬಂದಮೇಲೆ ಮಂತ್ರಿಗಳು, ಕಾರ್ಯದರ್ಶಿ, ಅಧ್ಯಕ್ಷರು ಆಗಬಾರದು ಎಂದು ತೀರ್ಮಾನ ತೆಗೆದುಕೊಂಡು ಬಿಟ್ಟಿದ್ದಾರೆ. ಯಾರ್ಯಾರೋ ಅಧ್ಯಕ್ಷರು ಮನಸ್ವೇಚ್ಛೆಯಾಗಿ ತಮ್ಮ ಸಾಮ್ರಾಜ್ಯವನ್ನು ಬೆಳೆಸಿಕೊಳ್ಳಬಹುದಾಗಿದೆ. ಅದಕ್ಕೇ ನಾನು ನಿಮ್ಮದು ಉಡುಪಿ ಪಾರುಪತ್ಯ ಎಂದು ಹೇಳಿದ್ದು. ಅದಕ್ಕೆ ಉತ್ತರ ಕೊಡುತ್ತೇನೆ ಎಂದು ಹೇಳಿದಿರಿ, ಆದರೆ ಉತ್ತರ ಮಾತ್ರ ಬರಲಿಲ್ಲ. ಈ ಸಲವಾದರೂ ಇವನ್ನು ಪರಿಗಣನೆ ಮಾಡುತ್ತೀರಾ ? ನಾನು ಏನು ಹೇಳುತ್ತೇನೆ ಎಂದರೆ ಸರ್ಕಾರದ ಮಟ್ಟದಲ್ಲಿ ನಿಗದಿಯಾದಂಥ ಒಂದು ಪರಿವೀಕ್ಷಣೆ, ನಿಯಂತ್ರಣ ಈ ಕಂಪನಿಗಳ ಬಗ್ಗೆ ಬೇಕು. ಈ ಕಂಪನಿಗಳನ್ನು ಏಕೆ ಮಾಡಿದ್ದೇವೆ ? ಕಂಪನಿಗಳನ್ನು ಮಾಡಿರತಕ್ಕಂಥ ಉದ್ದೇಶ ಬಹಳ ಸಾದುವಾದದ್ದು. ರೂಸ್‌ವೆಲ್ಟ್ ಟೆನ್ನಿಸಿವ್ಯಾಲಿ ಅಥಾರಿಟಿಯನ್ನು ಮಾಡಿದಾಗ ಒಂದು ಮಾತನ್ನು ಹೇಳಿದ "ಒಂದು ಖಾಸಗಿ ಉದ್ಯಮದಲ್ಲಿನ ಉಪಕ್ರಮ ಹಾಗೂ ಹೊಂದಾಣಿಕೆಯ ಶಕ್ತಿಯನ್ನು ಹೊಂದಿರುವ ಸರ್ಕಾರಿ ಅಧಿಕಾರದ ಕವಚವನ್ನು ಧರಿಸಿರುವ ನಿಗಮವಾಗಿ ಟೆನ್ನಿಸಿ ಕಣಿವೆ ಅಧಿಕಾರಸ್ಥ ಮಂಡಲಿಯನ್ನು ನಿರ್ಮಿಸಬೇಕೆಂದು ಕಾಂಗ್ರೆಸ್‌ಗೆ ನಾನು ಸಲಹೆ ಮಾಡುತ್ತೇನೆ" ಅಂತ ಹೇಳಿದ. ಅಂದರೆ ಸಾರ್ವಜನಿಕ ಹೊಣೆಗಾರಿಕೆ ಹಾಗೂ ನಿಯಂತ್ರಣ ಖಾಸಗಿ ಉದ್ಯಮದಲ್ಲಿನ ಆರ್ಥಿಕ ಸ್ವಾತಂತ್ರ್ಯ ಹಾಗೂ ಸ್ವಯಂ ಆಡಳಿತಗಳೇ ಇವು ಎರಡೂ,ಸೇರಿರಬೇಕು ಅಂತ ಹೇಳಿ ಈ ಕಂಪನಿಗಳನ್ನು ಮಾಡಿದರು, ಆದರೆ ಇವತ್ತು ಏನಾಗಿದೆ ಎಂದರೆ, ಎಲ್ಲವೂ ತದ್ವಿರುದ್ಧವಾಗಿದೆ. ನನಗೆ ಬರ್ನಾರ್ಡ್‌ಶಾ ಅವರ ಕತೆ ನೆನಪಾಗುತ್ತದೆ. ಒಬ್ಬ ಸಿನಿಮಾ ಸುಂದರಿ ಹೋಗಿ ಅವರನ್ನು ಕೇಳಿದಳಂತೆ "ಶಾ, ನಾನೂ ನೀನು ಮದುವೆಯಾಗೋಣ ಎಂದು. ಆಗ ಆತ ಏಕೆ ಎಂದು ಕೇಳಿದ್ದಕ್ಕೆ ಆಕೆ ಹೇಳಿದಳಂತೆ "ನಿನ್ನಂತ ಬುದ್ಧಿವಂತರು ಜಗತ್ತಿನಲ್ಲಿ ಅತಿ ವಿರಳರು. ನಾನು ಎಷ್ಟು ಸುಂದರಿ ಎಂದು ನಿನಗೆ ಗೊತ್ತಿರಬಹುದು. ಗೊತ್ತಿಲ್ಲದಿದ್ದರೆ ಈಗಲಾದರೂ ನೀನು ನೋಡಿದರೆ ಗೊತ್ತಾಗುತ್ತದೆ. ನಾವು ಮದುವೆಯಾದರೆ ನಿನ್ನ ಬುದ್ಧಿಶಾಲಿತನ ಮತ್ತು ನನ್ನ ಸೌಂದರ್ಯ ಎರಡನ್ನೂ ಹೊಂದಿರುವ ಮಗು ಹುಟ್ಟುತ್ತದೆ ಎಂದು.

ಆವಾಗ ಬರ್ನಾರ್ಡ್ ಷಾ ಹೇಳುತ್ತಾನೆ, ಅದಕ್ಕೆ ಯಾಕೋ ನಾನು ಬೇಡವೆಂದು ಹೇಳುವುದು ನನ್ನಂತಹ ಸೌಂದರ್ಯ, ನಿನ್ನಂತಹ ಬುದ್ಧಿ ಆ ಮಗುವಿಗೆ ಬಂದರೆ ಏನು ಮಾಡುವುದು ? ಅಲ್ಲಿ ಉದ್ದೇಶವೂ ಈಡೇರಬಹುದು, ಮಗುವೂ ಹುಟ್ಟಬಹುದು ಆದರೆ ಇದು ಹೇಗೆ ಆಗುತ್ತದೆ ? ಖಾಸಗಿ ಕ್ಷೇತ್ರದಲ್ಲಿರತಕ್ಕ ಸ್ವಯಂ ಆಡಳಿತ ಅಥವಾ ಒಂದು ಆರ್ಥಿಕ ಸ್ವತಂತ್ರ್ಯ ಸಹ ಸರ್ಕಾರಕ್ಕಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಹೊಣೆಗಾರಿಕೆ ಇಲ್ಲದಿರತಕ್ಕ ಕಂಪನಿಗಳನ್ನು ನಾವು ತಯಾರು ಮಾಡಿ ಅವುಗಳನ್ನು ಬಿಳಿಯ ಆನೆಗಳನ್ನಾಗಿ ಅವುಗಳ ಸಾಮ್ರಾಜ್ಯ ಒಂದೊಂದಾಗಿ ವಿಸ್ತಾರವಾಗುವಂತೆ ಮಾಡಿದ್ದೀರಿ. ಇದನ್ನು ನಿಯಂತ್ರಿಸುವುದಕ್ಕೆ Bureau of Public Enterprises ಬಂತು. ಅದು ನಿರೀಕ್ಷಿಸಿದಂತೆ ಯಾವುದೇ ಕೆಲಸವನ್ನು ಮಾಡಿಲ್ಲ. ಸಾರ್ವಜನಿಕ ಉದ್ಯಮಗಳ ಸಮಿತಿ ತಾನು ಮಾಡಿರುವ ಅಬ್ಸರ್‌ವೇಷನ್ಸನ್ನು ಕೊಟ್ಟಿದೆ. Bureau of Public Enterprises ಏಕೆ ಮಾಡಲಾಯಿತು ಎಂಬುದನ್ನು ಒಂದು ಪ್ಯಾರಾಗ್ರಾಫ್ ಮಾತ್ರ ಓದುತ್ತೇನೆ. One of their main tasks is to get all the Annual Reports and submit them to the Legislature. ವಾರ್ಷಿಕ ವರದಿಯನ್ನು ಕರ್ನಾಟಕ ವಿಧಾನ ಮಂಡಲಕ್ಕೆ ಕೊಡಬೇಕು. ತಾವು ಹೇಳಿದ ಹಾಗೆ ಇನ್ನೂ ೧೩ ಕೈಗಾರಿಕೆಗಳ ವಾರ್ಷಿಕ ವರದಿ ೮೩-೮೪ನೇ ಇಸವಿಯಾಗಿ ದಾಟಿಲ್ಲ. ಇನ್ನೂ ೮೩-೮೪ನೇ ಗಡಿಯೊಳಗೇ ಇದ್ದಾರೆ. ಈ ವರ್ಷದ ವಾರ್ಷಿಕ ವರದಿ ಯಾವ ಕಂಪನಿಯಿಂದಲೂ ಇನ್ನೂ ಬಂದಿಲ್ಲ. 'The Committee was given to understand that the Bureau of Public Sector Enterprises at the centre with 200 odd Corporations/Companies and invested Capital outlay running to nearly Rs.30,000 crores submits the Annual Report very promptly. In that case there is no reason why our State Government with Government investment outlay on Public Sector Undertakings of Rs,1000 crores only should not also cause a report to be submitted to Legislature on time.' ಈ ವರದಿಗಳೇ ಬರದೆಹೋದರೆ ಮೂರು-ನಾಲ್ಕು ವರ್ಷಗಳ ಹಿಂದಿನ ವರದಿಗಳಲ್ಲಿ ಯಾವುದೋ ಒಂದು ಕೈಗಾರಿಕೆಯನ್ನು ತೆಗೆದುಕೊಂಡು ಏನೋ ವಿಶ್ಲೇಷಣೆ ಮಾಡುವುದಕ್ಕೆ ಆಗುತ್ತದೆಯೆ ? ಸರ್ಕಾರದವರಲ್ಲಿ ಮತ್ತು ಮಂತ್ರಿಗಳ ಮಟ್ಟದಲ್ಲಿ ಇದರ ಬಗ್ಗೆ ನಿಕಟವಾದಂತಹ ನಿಯಂತ್ರಣ ಮತ್ತು ಪರಿವೀಕ್ಷಣೆ ಬೇಕಾಗುತ್ತದೆ. ಹಾಗೆ ಮಾಡದೇ ಹೋದರೆ ಸಾರ್ವಜನಿಕ ಉದ್ಯಮಗಳ ಸಮಿತಿಯಲ್ಲಿ ಕಂಪನಿಗಳು ಏನು ಮಾಡುತ್ತವೆ ? ಏನು ಹೋಗುತ್ತವೆ ಎನ್ನುವುದು ಅವುಗಳು ಪೂರ್ಣ ಸತ್ತು ಹೋದ ಮೇಲೆ ಮಂತ್ರಿಗಳಿಗೆ ಗೊತ್ತಾಗುತ್ತದೆ. ಕೈಗಾರಿಕೆಗಳು ಸತ್ತ ಮೇಲೆ ನಿಮಗೆ ಗೊತ್ತಾದರೆ ಅವುಗಳಿಗೆ ಔಷಧಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ಮೊದಲು ರೋಗ ಬಾರದೆ ಇರುವಹಾಗೆ ನೋಡಿಕೊಳ್ಳಬೇಕಾದರೆ ಒಂದು health checking ಇರಬೇಕಾಗುತ್ತದೆ. ಕೊನೆಯ ಪಕ್ಷ ವಾರ್ಷಿಕ ವರದಿ ಬರದೆ ಹೋದರೆ ಖಂಡಿತವಾಗಿ ನೀವು ಉದ್ಧಾರವಾಗುವುದಿಲ್ಲ. ಸರ್ಕಾರದ ಜವಾಬ್ದಾರಿ ಇವುಗಳ ಮೇಲೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನನ್ನ ಮಾತಿನಲ್ಲಿ ಹೇಳುವುದಕ್ಕೆ ತಯಾರಿಲ್ಲ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಆ ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ ಬಹಳ ಚಂದವಾದ ಮಾತನ್ನು ಹೇಳಿದ್ದಾರೆ. ಇಷ್ಟನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತೇನೆ. ಅವರು ಈ ರೀತಿ ಹೇಳಿದ್ದಾರೆ, ಕೆಲವೊಂದು ಸರ್ಕಾರಿ ಕಾರ್ಖಾನೆಗಳು ಇವತ್ತು ಏನು ನಡೆದಿವೆ ಅದರ ಬಗ್ಗೆ ನಮ್ಮ ಅರ್ಥ ಸಚಿವರು ಸ್ವಲ್ಪ ಮಟ್ಟಿಗೆ ಆಸ್ಥೆ ವಹಿಸಿ ಅದರ ಬ್ಯಾಲೆನ್ಸ್ ಶೀಟ್ ನೋಡಬೇಕು. ಯಾರು ಅರ್ಥ ಮಂತ್ರಿಗಳಾಗಿರುತ್ತಾರೆ ಅವರ ಜವಾಬ್ದಾರಿ ಇದರಲ್ಲೂ ಇದೆ ಎಂದು ನನ್ನ ಅಭಿಪ್ರಾಯ. ಕೇವಲ ಕೈಗಾರಿಕಾ ಮಂತ್ರಿಗಳ ಅಥವಾ ಸಂಬಂಧಪಟ್ಟಂಥ ಇನ್ನಿತರ ಮಂತ್ರಿಗಳ ಮೇಲೆ ಸಂಪೂರ್ಣವಾಗಿ ಇದನ್ನು ಬಿಟ್ಟು ಬಿಟ್ಟು ಸುಮ್ಮನೇ ಕುಳಿತರೆ ಅದರ ಭಾರವನ್ನು ಹೊರತಕ್ಕಂಥ ಪರಿಸ್ಥಿತಿ, ಒಂದು ಜವಾಬ್ದಾರಿ ಅರ್ಥಮಂತ್ರಿಗಳ ಮೇಲೆ ಬರುತ್ತದೆ. ಇವತ್ತು ರೇಕೋ ಕಾರ್ಖಾನೆ ವಿಚಾರದಲ್ಲಾಗಲೀ, ಮೈಸೂರು ಅಸಿಟೇಟ್ ಕಾರ್ಖಾನೆಯ ವಿಚಾರದಲ್ಲಿಯಾಗಲಿ, ಹಾಸನ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ವಿಚಾರದಲ್ಲಿಯಾಗಲೀ, ಅಥವಾ ಇನ್ನು ಯಾವುದೇ ಕಾರ್ಖಾನೆಯ ವಿಚಾರದಲ್ಲಿಯಾಗಲಿ ಅರ್ಥಮಂತ್ರಿಗಳು ಪ್ರತಿ ತಿಂಗಳು ಅದರ ಬ್ಯಾಲೆನ್ಸ್ ಶೀಟ್ ತರಿಸಿಕೊಂಡು ನೋಡತಕ್ಕದು ಅಗತ್ಯ. ಅದು ಇಲ್ಲದಿದ್ದರೆ

ಏನು ಪ್ರಯೋಜನ ? ನಾನು ಬ್ಯಾಲೆನ್ಸ್ ಶೀಟ್ ಬಗ್ಗೆ ಯಾವ ಅರ್ಥದಲ್ಲಿ ಹೇಳಿದೆ ಎಂದರೆ ಬರೀ ರಶೀಟ್ ಮತ್ತು ಎಕ್ಸ್‌ಪೆಂಡೀಚರ್ ಅಷ್ಟೇ ಅಲ್ಲ, It is a sort of continuous balance sheet. ಬಿರ್ಲಾ ಅಥವಾ ಜೆ.ಆರ್.ಡಿ. ಅವರು ಅಥವಾ ಟಾಟಾ ಅವರು ಎಲ್ಲೇ ಇರಲಿ ಪ್ರತಿ ದಿವಸದ ಬ್ಯಾಲೆನ್ಸ್ ಶೀಟ್ ಅವರಿಗೆ ರಾತ್ರಿ ೧೦ ಗಂಟೆಗೆ ಸರಿಯಾಗಿ ಬರುತ್ತದೆ, ಆ ಬ್ಯಾಲೆನ್ಸ್ ಶೀಟ್‌ನಲ್ಲಿ ಸ್ಟಾಕ್ ಎಷ್ಟು ಇದೆ, ಪ್ರೊಡಕ್ಷನ್ ಎಷ್ಟು ಇದೆ, ಎಂಬ ಬಗ್ಗೆ ರೇಶಿಯೋ ಏನು ಕರೆಕ್ಟಾಗಿ ಇದೆಯೆಂದರೆ, ರೂಪಾಯಿ ಕೂಡ ವ್ಯತ್ಯಾಸವಾಗುವುದಿಲ್ಲ. ಆದರಿಂದ ಒಂದು ರಫ್ ಐಡಿಯಾ ಸಿಗುತ್ತದೆ ಆದ್ದರಿಂದ ತಾವು ಪ್ರತಿ ತಿಂಗಳು ಅವರ ಒಂದೊಂದು ಬ್ಯಾಲೆನ್ಸ್ ಶೀಟ್ ತರಿಸಿಕೊಂಡರೆ ಒಳ್ಳೆಯದು ಇದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿರತಕ್ಕ ಮಾತು, ಬಹಳ ಸಾಧುವಾದದ್ದು. ಅವರೇ ಹಣಕಾಸಿನ ಮಂತ್ರಿಯಾಗಿದ್ದಾಗ ಎಷ್ಟು ಬ್ಯಾಲೆನ್ಸ್ ಶೀಟ್ ನೋಡಿದ್ದರೋ ಗೊತ್ತಿಲ್ಲ. ಕೆಲವು ಕಂಪನಿಯವರು ಮೂರು ವರ್ಷವಾದರೂ ಬ್ಯಾಲೆನ್ಸ್ ಶೀಟ್ ಕೊಟ್ಟಿಲ್ಲ. ಇನ್ನು ಉಳಿದ ೧ ಕೈಗಾರಿಕೆಗಳ ಸುದ್ದಿಯನ್ನು ಎತ್ತಲಿಲ್ಲ ಕೆಲವರು ೮೦ನೇ ಇಸವಿಯ ಪಟ್ಟಿಯನ್ನು ಕೊಟ್ಟಿದ್ದಾರೆ, ಕೆಲವರು ೮೩-೮೪ಕ್ಕೆ ತಲುಪಿದ್ದಾರೆ. ಇನ್ನೂ ಯಾರೂ ಮುಂದಕ್ಕೆ ಬಂದಿಲ್ಲ. ಅದು ಸತ್ತ ಮೇಲೆಯೇ ನಮಗೆ ವರ್ತಮಾನ ಸಿಕ್ಕುವುದು. ಕೆಲವು ಸಾರಿ ಸಂಸ್ಕಾರವೆಲ್ಲಾ ಮುಗಿದು ವೈಕುಂಠ ಸಮಾರಾಧನೆಗೆ ವರ್ತಮಾನ ಬರುತ್ತದೆ. ಆ ಅರ್ಥದಲ್ಲಿ ನಾನು ಹೇಳಿದೆ. ಕೇವಲ ಉಡುಪಿ ಪಾರುಪತ್ಯ ಮಾಡಿದರೆ ಪ್ರಯೋಜನ ಇಲ್ಲ Bureau of Public Enterprises ಚೇರ್‌ಮೇನ್ ಕೈಗಾರಿಕಾ ಮಂತ್ರಿಗಳಾಗಿದ್ದರು ಅದು ಪರವಾಗಿಲ್ಲ, ಕೈಗಾರಿಕಾ ಚೇರ್‌ಮೇನ್ ಅಲ್ಲದೇ ಇದ್ದರೂ ಪರವಾಗಿಲ್ಲ, ಸರ್ಕಾರದ ಪತಿಯಿಂದ ಸರ್ಕಾರದ ಕಣ್ಣು ಅದರ ಮೇಲೆ ಇದೆ ಎನ್ನುವುದು ಗೊತ್ತಾಗದೆ ಹೋದರೆ ಖಂಡಿತವಾಗಿ ಈ ಕೈಗಾರಿಕೆಗಳು ಹಾಳಾಗಿ ಹೋಗುತ್ತವೆ. ಈ ರೀತಿಯ ಅವಕಾಶಕ್ಕೆ ಎಡೆಮಾಡಿ ಕೊಡದೆ, ಕೈಗಾರಿಕೆಗಳು ಸತ್ತು ಹೋದರೆ ಹೋಗುತ್ತದೆಂದು ಕೈಕಟ್ಟಿ ಕುಳಿತುಕೊಳ್ಳತಕ್ಕ ಸ್ಥಿತಿಗೆ ನಾವು ಖಂಡಿತವಾಗಿ ಹೋಗಬಾರದು ಎನ್ನುವ ಮಾತನ್ನು ಹೇಳುತ್ತೇನೆ ಕೈಗಾರಿಕೆಗಳ ಬೆಳವಣಿಗೆ ನೇರವಾಗಿ ಮಂತ್ರಿಗಳಿಗೆ ಸಂಬಂಧಪಡದೇ ಇರಬಹುದು, ಆದರೆ ಒಂದು ಮಾತನ್ನು ಅವರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಖಾಸಗಿ ಕೈಗಾರಿಕೆಗಳಲ್ಲಿ ಬರುವ ದೊಡ್ಡ ತೊಂದರೆ ಎಂದರೆ ನಮ್ಮ ದೇಶದಲ್ಲಿ ಬೇಕಾದಂತಹ ಟ್ಯಾಲೆಂಟ್ಸ್ ಇದ್ದಾರೆ. ಆ ಟ್ಯಾಲೆಂಟ್ಸ್‌ಗೆ ಮುಖ್ಯವಾಗಿ ಬೇಕಾಗಿರುವುದು ಕ್ರೆಡಿಟ್. ಇವತ್ತು ಬ್ಯಾಂಕುಗಳು ಇವೆ. ಅವು ಒಂದು ಹಂತದವರೆಗೆ ಮಾತ್ರ ಕ್ರೆಡಿಟ್ ಕೊಡುತ್ತಾರೆ. ಆದರೆ marketingಗೆ ಕ್ರೆಡಿಟ್ ಕೊಡುವುದಿಲ್ಲ. ಇದರಿಂದ ಅನೇಕ ಕೈಗಾರಿಕೆಗಳು ಹಾಳಾಗಿ ಹೋಗಿವೆ ನಮ್ಮಲ್ಲಿ ಬೇಕಾದಷ್ಟು ಟ್ಯಾಲೆಂಟ್ಸ್ ಇದ್ದಾರೆ. ನಮ್ಮ ಊರಿನ ಮನೆಯಲ್ಲಿ ಅನೇಕ ಜನ ಟ್ಯಾಲೆಂಟ್ಸ್ ಇದ್ದಾರೆ. ಅವರನ್ನು ನೋಡಿದರೆ ನಾನು ಅಭಿಮಾನ ಪಟ್ಟುಕೊಳ್ಳಬಹುದು. ನನ್ನದೊಂದು ರೆಕಾರ್ಡ್ ಪ್ಲೇಯರ್‌ನ ಹ್ಯಾಂಡಲ್ ಮುರಿದುಹೋಗಿತ್ತು. ಇಲ್ಲಿ ಯಾರೂ ರಿಪೇರಿ ಮಾಡಲಿಲ್ಲ. ಯಾರೋ ಸ್ನೇಹಿತರು ಅಮೇರಿಕಕ್ಕೆ ಹೋಗುತ್ತಿದ್ದರು, ಅವರ ಜೊತೆಯಲ್ಲಿ ಅದನ್ನು ಕಳುಹಿಸಿಕೊಟ್ಟೆ. ಅಲ್ಲಿಯೂ ರಿಪೇರಿಯಾಗಲಿಲ್ಲ ಜರ್ಮನಿಗೆ ಕಳುಹಿಸಿದೆ, ಅಲ್ಲೂ ಆಗಲಿಲ್ಲ. ಲಂಡನ್‌ಗೆ ಕಳುಹಿಸಿಕೊಟ್ಟೆ, ಅಲ್ಲೂ ಆಗಲಿಲ್ಲ. ಕೊನೆಗೆ ನಮ್ಮ ಶಿವಮೊಗ್ಗದ ಒಬ್ಬ ಹುಡುಗ ಬಂದು ಅದನ್ನು ನಾನು ಮಾಡಿಕೊಡುತ್ತೇನೆಂದು ಹೇಳಿದ, ಅದಕ್ಕೆ ನಾನು ಏನಯ್ಯಾ ಈ ಪ್ರಪಂಚವನ್ನೆಲ್ಲಾ ಇದು ಸುತ್ತಿ ಬಂದಿದೆ, ಈ ಹ್ಯಾಂಡಲ್‌ನ್ನು ರಿಪೇರಿ ಮಾಡುವುದಕ್ಕೆ ಆಗಲಿಲ್ಲ. ನೀನು ಇದನ್ನು ಮಾಡುತ್ತೀಯಾ ? ಎಂದೆ. ಅವನು ಅದನ್ನು ತೆಗೆದುಕೊಂಡು ಹೋಗಿ ಮುಂದಿನ ವಾರವೇ ಅದನ್ನು ಜೋಡಿಸಿ ಕೊಟ್ಟುಬಿಟ್ಟನು. ಇದುವರೆವಿಗೂ ಅದು ಸಮರ್ಪಕವಾಗಿ ಕೆಲಸ ಮಾಡುತ್ತಾ ಇದೆ. ಇವತ್ತು ನಮಗೆ ತಿಳಿದ ಹಾಗೆ ಅನಂತಕೃಷ್ಣಗಾಯರ ಮಗ ಬ್ಯಾಟರಿಯಿಂದ ನಡೆಯತಕ್ಕ ಒಂದು ಮೊಪೆಡ್ ಮಾಡಿದ್ದಾರೆ. ಇನ್ನೊಂದು ಎಲೆಕ್ಟ್ರೋ ಮೊಪೆಡ್ ಸಿಕ್ ಆಗಿದೆ. ಅದನ್ನು ತಾವು ಈ ಸಿಕ್ ಇಂಡಸ್ಟ್ರಿಯೊಳಗೆ ತೆಗೆದುಕೊಂಡಿದ್ದೀರಿ. ಈ ರೀತಿ ಬ್ಯಾಂಕುಗಳು ೩೮ ಲಕ್ಷ ರೂಪಾಯಿಗಳನ್ನು ಬೇರೆ ಉತ್ಪಾದನೆಗೆ ಕೊಟ್ಟುಬಿಟ್ಟು ೫ ಲಕ್ಷ ಬೇಕಾಗತಕ್ಕ ಪಬ್ಲಿಸಿಟಿ ಮಾರ್ಕೆಟಿಂಗ್‌ಗೆ ಕೊಡದೆ ಹೋಗಿರುವುದರಿಂದ ಅವನು ನೆಗೆದು ಬಿದ್ದಿದ್ದಾನೆ. ಫ್ರಾನ್ಸ್‌ನಿಂದ ಜರ್ಮನಿಯಿಂದ ಸಹಭಾಗಿತ್ವ ಮಾಡಿ ನಿಮ್ಮ ತಾಂತ್ರಿಕತೆ ನಮಗೆ ಕೊಡಿಯೆಂದು ಅವನು ಕೇಳಿಕೊಂಡು ಬಂದಿದ್ದಾನೆ. ಆದರೂ ಅವನು ಇಲ್ಲಿ ಪರದೇಶಿಯಂತೆ ಬಿದ್ದುಕೊಂಡಿದ್ದಾನೆ ತಮ್ಮನ್ನು ಒಂದು ಸಾರಿ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಅವನು ತನ್ನ ಮನೆಯ ಹಿತ್ತಲಿನಲ್ಲಿ ಮಾಡಿರತಕ್ಕ ಕೆಲಸವನ್ನು ನೋಡಿದರೆ ಖಂಡಿತವಾಗಿ ನಮ್ಮಗೆ ಹೊಟ್ಟೆ ಉರಿಯುತ್ತದೆ. ಜೆ.ಹೆಚ್. ಪಟೇಲ್‌ರು

ಮಂತ್ರಿಗಳಾಗಿದ್ದಾರೆ, ಹೆಚ್ಚು ಚಿಂತಕರಾಗಿದ್ದಾರೆ. ವಿಲ್‌ಡ್ಯೂರಾಂಟ್‌ರವರ ಒಂದು ಪ್ಯಾರಾಗ್ರಾಫ್‌ನ್ನು ಜೆ.ಪಿ. ಪಟೇಲರಿಗೆ ಸಮರ್ಪಿಸಲಿಕ್ಕೆ ಬಯಸುತ್ತೇನೆ. ಅವರು ೧೨-೧೩ ವಾಲ್ಯೂಮ್ಸ್ ಬರೆದರು. ಆ ವಾಲ್ಯೂಮ್‌ನ ಒಂದು ಸಮ್ಮರಿಯನ್ನು ಲೆಸೆನ್ಸ್ ಆಫ್ ಹಿಸ್ಟರಿ ಅಂತ ಇಷ್ಟೇ ಸಣ್ಣ ಪುಸ್ತಕವನ್ನು ಬರೆದಿದ್ದಾರೆ. ಅದರಲ್ಲಿ ಹಿಸ್ಟರಿ ಆಫ್ ಎಕಾನಾಮಿಕ್ ಅಂತ ಒಂದು ಚಾಪ್ಟರ್ ಬರುತ್ತದೆ. ಅದರಲ್ಲಿ ಇವತ್ತಿನ ಆರ್ಥಿಕತೆ ಹೇಗಿದೆ. ಹಿಂದೆ ಹೇಗಿತ್ತು ? ಈಗ ಏನಾಗಿದೆ ? ಎಂಬುದನ್ನು ಒಂದೇ ಪ್ಯಾರಾಗ್ರಾಫ್‌ನಲ್ಲಿ ಹೇಳುತ್ತಾರೆ. Will-Durand says

"The men who can manage men, manageonly things and the men who can manage money manage all. So the Bankers watching the trends in Agriculture, Industry and tradeinviting and directing the flow of capital pattern of our money doubly, trebly to work, controlling loans and interest enterprise running great risks to make great gains raised to the top of the economic pyramid.

"From Medicis of Florence and the Sugurs of Oxburg to the Rockshields of Paris, London and Morgnns of Newyork, bankers have sat in the councils of Government financing wars and Popes and occasionally sparking a revolution. Perhaps it is one secret of their power that having studied fluctuations of prices they know that history is inflationary and that money is the last thing a wise man will hoard."

೪—೩೦ ಪಿ. ಎಂ.

ಹೀಗೆ ತಮ್ಮಲ್ಲಿ ಹಣವನ್ನು ಶೇಖರಣೆ ಮಾಡಿಟ್ಟುಕೊಂಡರೆ ಅದಕ್ಕೆ ಬೆಲೆ ಇಲ್ಲವೆಂದುಕೊಂಡು ಕೈಗಾರಿಕೆಗಳಿಗೆ ಸಹಾಯ ಮಾಡುತ್ತಿದ್ದಾರೆಯೇ ಹೊರತು ಬೇರೆ ದೃಷ್ಟಿಯಿಂದ ಮಾಡುತ್ತಿಲ್ಲ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಈ ಬ್ಯಾಂಕ್‌ನವರ ಪಾತ್ರ ಏನಿದ್ದರೂ ಹಣ ಶೇಖರಣೆ ಮಾಡುವುದೇ ಹೊರತು ಅವರು ಯಾವ ರೀತಿಯಿಂದಲೂ ಉತ್ಪಾದನೆ ಮಾಡುವವರಾಗಿಲ್ಲ. ಇವೊತ್ತಿನ ಬ್ಯಾಂಕಿಂಗ್ ವ್ಯವಸ್ಥೆ ಏನಿದೆ, ಅದನ್ನು ಬದಲಾವಣೆ ಮಾಡಲು ರಾಜ್ಯ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆಂದು ತಾವು ಉತ್ತರ ಕೊಡುವಾಗ ಹೇಳಬಹುದು. ಕೊನೆಯಪಕ್ಷ ನಮ್ಮ ರಾಜ್ಯಕ್ಕೆ ಸಂಬಂದಪಟ್ಟಂತೆ ಆದರೂ ಕೆಲವೊಂದು ಬದಲಾವಣೆಗಳನ್ನು ಈ ಕ್ಷೇತ್ರದಲ್ಲಿ ತಾವು ಮಾಡಬಹುದು, ಈಗ ಉದಾಹರಣೆಗೆ ಹೇಳಬೇಕೆಂದರೆ. ಯಾರಿಗಾದರೂ ೩೫ ಲಕ್ಷ ರೂಪಾಯಿಗಳ ಸಾಲದ ಸಹಾಯ ಮಾಡಿದ ನಂತರ ಮತ್ತೆ ೫ ಲಕ್ಷ ರೂಪಾಯಿಗಳ ಸಾಲದ ಅವಶ್ಯಕತೆ ಇದ್ದರೆ ಅದನ್ನು ಯಾವುದೇ ತೊಂದರೆ ಇಲ್ಲದೆ ಕೊಡುವಂತಹ ವ್ಯವಸ್ಥೆಯಾದರೂ ಆಗಬೇಕು. ಮುಖ್ಯವಾಗಿ ಈ ಬ್ಯಾಂಕ್‌ಗಳು ಕೈಗಾರಿಕೆಗಳಿಗೆ ಸಹಾಯ ಮಾಡುವಂತಿರಬೇಕೇ ಹೊರತು ಶೋಷಣೆ ಮಾಡುವಂತಹ ಮಾಧ್ಯಮಗಳಾಗಬಾರದು. ಈ ಬಗ್ಗೆ ತಾವು ಎಚ್ಚರಿಕೆ ವಹಿಸಬೇಕು ಮತ್ತು ಇದಕ್ಕಾಗಿ ತಮ್ಮ ಆಫೀಸ್ ಮತ್ತು ಗುಡ್-ಆಫೀಸಸ್‌ನ್ನು ಉಪಯೋಗಿಸಿಕೊಳ್ಳಬೇಕು ಎಂದು ಒತ್ತಾಯ ಮಾಡಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಜುಗೌಡ (ಹಾನೂರು).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಮಂಡಿಸಿರತಕ್ಕಂಥ ಕೈಗಾರಿಕಾ ಮತ್ತು ರೇಷ್ಮೆ ಇಲಾಖೆ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೈಗಾರಿಕೆಗಳ ಬಗ್ಗೆ ಮಾನ್ಯ ಶ್ರೀನಿವಾಸ್ ಅವರು ಸುಮಾರು ಒಂದೂಕಾಲು ಗಂಟೆಯ ಕಾಲ ನಿರರ್ಗಳವಾಗಿ ಮಾತನಾಡಿದ್ದಾರೆ. ಆದ್ದರಿಂದ ನಾನು ಹೆಚ್ಚು ಇದರ ಬಗ್ಗೆ ಮಾತನಾಡದೆ ಒಂದು ವಿಷಯವನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ವಿದ್ಯಾವಂತ ನಿರುದ್ಯೋಗಿಗಳ ಸ್ವಯಂ ಉದ್ಯೋಗ ಯೋಜನೆಯ ಅಡಿಯಲ್ಲಿ ೧೯೮೩-೮೪ನೇ ಸಾಲಿನಲ್ಲಿ ೧೨,೩೦೭ ಜನರಿಗೆ, ೧೯೮೪-

೭೪ನೇ ಸಾಲಿನಲ್ಲಿ ೧೨,೮೧೦ ಜನರಿಗೆ ಹಾಗೂ ೧೯೭೫-೭೬ನೇ ಸಾಲಿನಲ್ಲಿ ೧೩,೪೦೦ ಜನರಿಗೆ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮೂಲಕ ಸಹಾಯವನ್ನು ಒದಗಿಸಲಾಗಿದೆ. ಈ ಜನರಿಗೆ ತಾವು ಏನು ಹಣದ ಸಹಾಯ ಮಾಡಿದ್ದೀರಿ, ಅದರಲ್ಲಿ ಎಷ್ಟು ಜನ ಸರಿಯಾಗಿ ಉಪಯೋಗ ಮಾಡಿಕೊಂಡಿದ್ದಾರೆಂಬುದನ್ನು ನಾವು ನೋಡಬೇಕಾಗುತ್ತದೆ. ಈ ಫಲಾನುಭವಿಗಳು ಉದ್ಯಮಗಳನ್ನು ಪ್ರಾರಂಭ ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ. ಉದ್ಯಮಗಳನ್ನು ಪ್ರಾರಂಭ ಮಾಡಿದ್ದರೆ ಒಟ್ಟು ಎಷ್ಟು ಜನರಿಗೆ ಕೆಲಸ ಒದಗಿಸಿದ್ದಾರೆಂಬ ಬಗ್ಗೆ ತಾವು ಒಂದು ಸಮೀಕ್ಷೆಯನ್ನು ನಡೆಸ ಬೇಕಾಗುತ್ತದೆ. ಈ ಯೋಜನೆಯ ಅಡಿಯಲ್ಲಿ ಎಷ್ಟು ಬಂಡವಾಳ ಹೂಡಲಾಗಿದೆ, ಅದರಿಂದ ಎಷ್ಟು ಪ್ರತಿಫಲ ಸಿಕ್ಕಿದೆ, ಎಷ್ಟು ಉತ್ಪಾದನೆ ಆಗಿದೆ ಎಂಬ ಬಗ್ಗೆ ಬೆಳಕನ್ನು ಚೆಲ್ಲುವಂತಹ ವರದಿಯನ್ನು ನಮಗೆ ಇದರಲ್ಲಿ ತಾವು ಒದಗಿಸಬೇಕಾಗಿತ್ತು. ಇನ್ನು ಮುಂದೆಯಾದರೂ ಇಂತಹ ವಿವರಗಳನ್ನು ಈ ವಾರ್ಷಿಕ ವರದಿಯಲ್ಲಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ತಾಲ್ಲೂಕ್ ಕೇಂದ್ರಗಳಲ್ಲಿ ಕೈಗಾರಿಕಾ ಷೆಡ್‌ಗಳನ್ನು ಏನು ಕಟ್ಟಿಸಿದ್ದೀರಿ, ಅವುಗಳನ್ನು ಪಡೆದಂಥವರ ಪೈಕಿ ಕೆಲವರು ಅಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದ್ದಾರೆ, ಮತ್ತೆ ಕೆಲವರು ಕಚ್ಚಾ ಸಾಮಗ್ರಿಗಳು ಸಿಕ್ಕಿಲ್ಲವೆಂಬ ಕಾರಣದಿಂದ, ವಿದ್ಯುಚ್ಛಕ್ತಿ ಪೂರೈಕೆಯಾಗಿಲ್ಲವೆಂಬ ಕಾರಣದಿಂದ ಹಾಗೂ ಪರಿಸರದ ಒತ್ತಡಕ್ಕೆ ಸಿಕ್ಕಿಹಾಕಿಕೊಂಡು ಕೈಗಾರಿಕೆಗಳನ್ನೇ ಪ್ರಾರಂಭ ಮಾಡಿಲ್ಲ, ಪ್ರಾರಂಭ ಮಾಡಿದವರ ಪೈಕಿ ಕೆಲವರು ನಾನಾ ಕಾರಣಗಳಿಂದ ನಿಲ್ಲಿಸಿಬಿಟ್ಟಿದ್ದಾರೆ. ಕೆಲವರು ತಮ್ಮ ಹೆಸರಿನಲ್ಲಿರುವುದನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಇಂತಹ ಸಂದರ್ಭಗಳಲ್ಲಿ ಯಾರು ಯಾರು ಈ ಶೆಡ್‌ಗಳನ್ನು ಬಳಸಿಕೊಂಡಿಲ್ಲ, ಅಂತಹವರಿಂದ ವಾಪಸ್ ಪಡೆದುಕೊಂಡು ಉದ್ಯಮಗಳನ್ನು ಸ್ಥಾಪನೆ ಮಾಡಲು ಮುಂದೆ ಬರುವವರಿಗೆ ಕೊಟ್ಟು ತನ್ಮೂಲಕ ನಮ್ಮ ರಾಜ್ಯದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಸ್ಥಾಪನೆಯಾಗುವಂತೆ ತಾವು ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ಜೀವನದಲ್ಲಿ ಹೆಚ್ಚಿನ ರೀತಿಯಿಂದ ಹಾಸು ಹೊಕ್ಕಾಗಿರುವಂತಹ ರೇಷ್ಮೆ ಕೈಗಾರಿಕೆಯ ಬಗ್ಗೆ ಮಾತನಾಡುತ್ತೇನೆ. ಈ ಇಲಾಖೆಯ ಬಗ್ಗೆ ನಾನು ಕಳೆದ ಸಲ ಬಹಳ ಸಮಯದವರೆಗೆ ಮಾತನಾಡಿದ್ದೆ. ತಾವು ಹೆಚ್ಚಿನ ಸಮಯ ಕೊಟ್ಟಿದ್ದೀರಿ. ನಾನು ಕಳೆದ ಸಲ ಅನೇಕ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅನೇಕ ಬೇಡಿಕೆಗಳನ್ನು ಮಂಡಿಸಿ ಅವುಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿದ್ದೆ. ಆದರೆ ಅವುಗಳಲ್ಲಿ ಯಾವುದನ್ನೂ ಕಾರ್ಯಗತ ಮಾಡದ ಕಾರಣ ನನಗೆ ಈ ಸಲ ಮಾತನಾಡಲು ಬೇಜಾರಾಗಿದೆ. ನಾನು ಕಳೆದಸಲ ಮಾಡಿದಭಾಷಣವೆಲ್ಲಾ ಅರಣ್ಯರೋಧನವಾಗಿದೆ. ಯಾವುದನ್ನೂ ಕಾರ್ಯಗತ ಮಾಡಿಲ್ಲವೆಂದು ಬಹಳ ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ. ಈ ಸಲ ಮತ್ತೆ ಮಾತನಾಡಲು ನನಗೆ ಉತ್ಸಾಹವೇ ಇಲ್ಲದಂತೆ ಆಗಿದೆ. ಆದರೂ ಸಹ ವಿಧಿ ಇಲ್ಲದೆ ಮಾತನಾಡಬೇಕಾಗಿದೆ, ನಾನು ರೇಷ್ಮೆ ಬೆಳೆಯುವ ಕ್ಷೇತ್ರದಿಂದ ಬಂದಿರುವುದರಿಂದ, ಶಾಸಕನಾಗಿ ನಾನು ಆ ಜನರ ಕುಂದುಕೊರತೆಗಳ ಬಗ್ಗೆ ಮತ್ತೊಮ್ಮೆ ಸರ್ಕಾರಕ್ಕೆ ತಿಳಿಸುವುದು ನನ್ನ ಆದ್ಯ ಕರ್ತವ್ಯವೆಂದು ಆ ತಿಳಿದುಕೊಂಡು ಮಾತನಾಡುತ್ತಿದ್ದೇನೆ. ಈ ಒಂದು ಇಲಾಖೆಯ ಮಹತ್ವವನ್ನು ಅರಿತುಕೊಂಡು, ರೇಷ್ಮೆಯ ಅಭಿವೃದ್ಧಿಗೆ ೨೦೦ ಕೋಟಿ ರೂಪಾಯಿಗಳಷ್ಟು ವಿದೇಶಿ ನೆರವನ್ನು ಪಡೆದಿರುವ ಕಾರಣ, ಈ ಇಲಾಖೆಯ ಮಂತ್ರಿಗಳ ಸ್ಥಾನವನ್ನು ಸಂಪುಟ ದರ್ಜೆಗೇರಿಸಬೇಕೆಂದು ನಾನು ಮುಖ್ಯಮಂತ್ರಿಗಳನ್ನು ಕೇಳಿಕೊಂಡಿದ್ದೆ. ಆದರೆ ಆ ಕೆಲಸ ಇನ್ನೂ ಆಗಿಲ್ಲ. ಇದು ಈ ಇಲಾಖೆಗೆ ಎಸಗಿರುವಂತಹ ಅಪಚಾರವೆಂದು ಹೇಳಬಹುದು. ಈ ಇಲಾಖೆ ಬಹಳ ಚೆನ್ನಾಗಿ ಬೆಳೆದಿರುವ ಕಾರಣದಿಂದ ಸುಮಾರು ೨೫ ವರ್ಷಗಳಷ್ಟು ಸೇವೆಸಲ್ಲಿಸಿ ಅರಿತು ನುರಿತಂತಹ ಅಧಿಕಾರಿ ಒಬ್ಬರನ್ನು ಈ ಇಲಾಖೆಗೆ ಅಡಿಷನಲ್ ಡೈರೆಕ್ಟರ್ ಆಗಿ ನೇಮಕ ಮಾಡಬೇಕೆಂದು ಕೇಳಿಕೊಂಡಿದ್ದೆ. ಆದರೆ ಅದನ್ನು ಸಹ ಮಾಡಲಿಲ್ಲ. ೧೨ ಕೋಟಿ ರೂಪಾಯಿಗಳಿಂದ ಹಿಡಿದು ೨೧ ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡುತ್ತಿರುವ ಪಶುಸಂಗೋಪನಾ ಇಲಾಖೆ ಮತ್ತು ತೋಟಗಾರಿಕಾ ಇಲಾಖೆ ತಮ್ಮ ತಮ್ಮ ಇಲಾಖಾ ವಾರ್ಷಿಕ ವರದಿಗಳನ್ನು ಪ್ರತ್ಯೇಕವಾಗಿ ಕೊಡುತ್ತಿವೆ. ಆದರೆ ೩೭ ರಿಂದೆ ೪೦ ಕೋಟಿ ರೂಪಾಯಿಗಳವರೆಗೆ ವೆಚ್ಚ ಮಾಡುತ್ತಿರುವ ಈ ರೇಷ್ಮೆ ಇಲಾಖೆ ತನ್ನ ಚಟುವಟಿಕೆಗಳ ಬಗ್ಗೆ ಒಂದು ಪ್ರತ್ಯೇಕ ವಾರ್ಷಿಕ ವರದಿಯನ್ನು ಕೊಡುತ್ತಿಲ್ಲ. ಈಗ ಕೈಗಾರಿಕಾ ಇಲಾಖೆಯ ವಾರ್ಷಿಕ ವರದಿಯಲ್ಲಿಯೇ ಈ ಇಲಾಖೆಯ ಬಗ್ಗೆ ೩-೪ ಪೇಜ್‌ಗಳವರೆಗೆ ಹೇಳಿ ಮುಗಿಸಿದ್ದಾರೆ ಇದನ್ನು ತಪ್ಪಿಸಿ ಇನ್ನು ಮುಂದೆ ಈ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಪ್ರತ್ಯೇಕ ವರದಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನವ ತಿಳಿದಿರುವ ವಿಷಯಗಳಲ್ಲಿ ಈ ರೇಷ್ಮೆಯೂ ಸಹ ಪುರಾತನ ಕಾಲದಿಂದಲೂ ಇದು ಹೆಸರು ಪಡೆದುಕೊಂಡು ಬಂದಿದೆ. ಟಿಪ್ಪುಸುಲ್ತಾನನ ಕಾಲದಿಂದಲೂ

ಈ ರೇಷ್ಮೆ ವ್ಯವಸಾಯ ಬೆಳೆದುಕೊಂಡು ಬಂದಿದೆ. ಆದ್ದರಿಂದ ಟಿಪ್ಪು ಸುಲ್ತಾನನ ಹೆಸರನ್ನು ನಾವು ಮರೆಯುವಂತಿಲ್ಲ. ಈ ರೇಷ್ಮೆ ಬಟ್ಟೆ ತನ್ನ ಒಂದು ನುಣುಪು ಮತ್ತು ಹೊಳಪಿನಿಂದಾಗಿ ಬಟ್ಟೆಯ ರಾಣಿ ಎಂಬ ಹೆಸರಿನ ಗೌರವಕ್ಕೆ ಪಾತ್ರವಾಗಿದೆ. ರೇಷ್ಮೆ ಉತ್ಪಾದನೆಯಲ್ಲಿ ನಮ್ಮ ಭಾರತ ದೇಶ ಇಡೀ ಜಗತ್ತಿನಲ್ಲಿ ಮೂರನೇ ಸ್ಥಾನವನ್ನು ಗಳಿಸಿದೆ. ಚೈನಾ ದೇಶದಲ್ಲಿ ೨೬ ಸಾವಿರ ಮೆಟ್ರಿಕ್ ಟನ್‌ಗಳವರೆಗೆ ರೇಷ್ಮೆ ಉತ್ಪಾದನೆಯಾದರೆ, ಜಪಾನ್‌ನಲ್ಲಿ ೧೪೨೮೦ ಮೆಟ್ರಿಕ್ ಟನ್‌ಗಳವರೆಗೆ ಉತ್ಪಾದನೆ ಮಾಡುತ್ತಿದ್ದಾರೆ. ನಮ್ಮ ಭಾರತ ದೇಶದಲ್ಲಿ ೫೬೪೪ ಮೆಟ್ರಿಕ್ ಟನ್‌ಗಳವರೆಗೆ ಉತ್ಪಾದನೆಯಾಗುತ್ತಿದೆ. ಈ ಬೈವೋಲ್‌ಟೈನ್ ರೇಷ್ಮೆ ಉತ್ಪಾದನೆ ನಮ್ಮಲ್ಲಿ ಚೆನ್ನಾಗಿ ಆಗುತ್ತಿದೆ. ಇದು ನಮ್ಮ ಭಾರತ ದೇಶದ ಹವಾಗುಣವನ್ನು ಚೆನ್ನಾಗಿ ಹೊಂದಿಕೊಂಡಿದೆ. ೭೫೦ ಕೆ.ಜಿ ಹಿಪ್ಪು ನೇರಳೆಯಿಂದ ನೂರು ಕೆ.ಜಿ. ರೋಗರಹಿತವಾದಂಥ ಮೊಟ್ಟೆಗಳನ್ನು ಸಾಕಬಹುದು. ಎಲ್ಲ ರೀತಿಯ ಹವಾಗುಣಕ್ಕೂ ಇದು ಹೊಂದಿಕೊಳ್ಳುತ್ತದೆ. ಅಂತಹ ಒಂದು ಒಳ್ಳೆಯ ಗುಣ ಇದರಲ್ಲಿದೆ. ನೀರಾವರಿ ಪ್ರದೇಶಗಳಲ್ಲಿ ಒಂದು ಹೆಕ್ಟೇರ್ ಪ್ರದೇಶದಲ್ಲಿ ೨೫ ಸಾವಿರದಿಂದ ೩೦ ಸಾವಿರ ಕೆ.ಜಿ. ವರೆಗೆ ಹಿಪ್ಪುನೇರಳೆಯನ್ನು ಬೆಳೆಸಬಹುದಾಗಿದೆ. ಆದೇ ಖುಷ್ಕಿ ಜಮೀನಾದರೆ ೬ ರಿಂದ ೮ ಸಾವಿರ ಕೆ.ಜಿ. ವರೆಗೆ ಹಿಪ್ಪುನೇರಳೆ ಸೊಪ್ಪನ್ನು ಬೆಳೆಸಬಹುದು. ವರ್ಷದಲ್ಲಿ ೫ ಬೆಳೆಗಳನ್ನು ಪಡೆಯಬಹುದು. ಈಗ ನಮ್ಮ ರಾಜ್ಯದಲ್ಲಿ ಒಂದು ಲಕ್ಷದ ೨೦ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಇದನ್ನು ಬೆಳೆಯಲಾಗುತ್ತಿದೆ. ವ್ಯವಸಾಯಕ್ಕೆ ಯೋಗ್ಯವಾದಂಥ ಜಮೀನು ನಮ್ಮ ರಾಜ್ಯದಲ್ಲಿ ಒಂದು ಕೋಟಿ ೩ ಲಕ್ಷದ ೫೬ ಸಾವಿರ ಹೆಕ್ಟೇರ್‌ನಷ್ಟು ಇದೆ. ಈಗ ನಮ್ಮ ರಾಜ್ಯದಲ್ಲಿ ರೇಷ್ಮೆ ವ್ಯವಸಾಯ ಒಟ್ಟು ಜಮೀನಿನ ಪೈಕಿ ಶೇಕಡಾ ಒಂದರಷ್ಟು ಪ್ರದೇಶದಲ್ಲಿ ಮಾತ್ರ ನಡೆದಿದೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ೧೬ ಸಾವಿರ ಮೆಟ್ರಿಕ್ ಟನ್‌ಗಳಿಗೆ ನಮ್ಮ ಉತ್ಪಾದನೆಯನ್ನು ಹೆಚ್ಚಿಸುವಂತಹ ಒಂದು ಗುರಿಯನ್ನು ನಾವು ಇಟ್ಟುಕೊಂಡಿರುವಾಗ ನಾವು ನಮ್ಮ ವ್ಯವಸಾಯ ಜಮೀನಿನ ಪೈಕಿ ಶೇಕಡಾ ೩ ರಷ್ಟು ಪ್ರದೇಶದಲ್ಲಿ ಇದನ್ನು ಬೆಳೆಸಲೇ ಬೇಕಾಗುತ್ತದೆ. ಅದನ್ನು ಬಿಟ್ಟು ಬೇರೆ ಗತ್ಯಂತರವೇ ಇಲ್ಲ. ಈ ರೀತಿ ಮಾಡದಿದ್ದರೆ ನಾವು ನಮ್ಮ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಈ ಹಿಂದೆ ನಾವು ಇದೇ ಸದನದಲ್ಲಿ "Karnataka Silk Worm, Seeds, Cocoon and Silk Yarn (Regulation of Production. Supply, Distribution and Sales) (Amendment) Bill, 1981 ಎಂಬ ಹೆಸರಿನ ಮಸೂದೆಯನ್ನು ಪಾಸ್ ಮಾಡಿದ ಉದ್ದೇಶವೇನೆಂದರೆ, ಗೂಡನ್ನು ಬೆಳೆದ ಪ್ರತಿ ರೈತನೂ ತಾನು ಬೆಳೆದಿದ್ದನ್ನು ಮಾರ್ಕೆಟ್‌ಗೆ ತರಬೇಕು, ಯಾರು ರೇಷ್ಮೆಯನ್ನು ಉತ್ಪಾದನೆ ಮಾಡುತ್ತಾರೆ, ಅವರೆಲ್ಲರೂ ಅದನ್ನು ರೇಷ್ಮೆ ವಿನಿಮಯ ಕೇಂದ್ರಕ್ಕೆ ತರಬೇಕು ಎಂಬ ಒಂದು ಒಳ್ಳೆಯ ಉದ್ದೇಶದಿಂದ. ಈಗ ಅದರ ಪ್ರಕಾರವೇ ಎಲ್ಲ ವ್ಯವಹಾರಗಳೂ ನಡೆಯುತ್ತಿವೆ. ಈ ರೇಷ್ಮೆ ಮಾರಾಟದ ಮೂಲಕ ಸರ್ಕಾರದವರು ಗಳಿಸತಕ್ಕಂಥ ಕಮೀಷನ್ ಏನಿದೆ, ಅದನ್ನು ರೈತರಿಗಾಗಿಯೇ ಬಳಸಬೇಕೆಂದು ಕಾನೂನು ಮಾಡಿದ್ದರೂ ಸಹ, ನಮ್ಮ ಸರ್ಕಾರದವರು ಆ ಕಾನೂನನ್ನು ಬದಿಗೊತ್ತಿ, ಬೇರೆ ಕೆಲಸಗಳಿಗೆ ಆ ಹಣವನ್ನು ಉಪಯೋಗ ಮಾಡುತ್ತಿದ್ದಾರೆ. ರೈತರ ಅನುಕೂಲಕ್ಕಾಗಿ ಈ ಹಣವನ್ನು ಖರ್ಚು ಮಾಡದೆ ಬಹಳ ಅನ್ಯಾಯ ಮಾಡಿದ್ದಾರೆ, ರೈತರಿಗೆ ಅಪಚಾರ ಮಾಡಿದ್ದಾರೆ ಮತ್ತು ದ್ರೋಹ ಮಾಡಿದ್ದಾರೆಂದು ಹೇಳಬಹುದು. ಇದೇ ವಿಚಾರದಲ್ಲಿ ಕೆಲವು ಟ್ರೇಡರ್ಸ್ ಹೈಕೋರ್ಟಿನಲ್ಲಿ ಪ್ರಶ್ನೆ ಮಾಡಿದಾಗ ಹೈಕೋರ್ಟಿನವರೂ ಸಹ ಈ ಕಮಿಷನ್ ಮೂಲಕ ಬರುವಂತಹ ಹಣವನ್ನು ರೈತರಿಗಾಗಿಯೇ ಖರ್ಚು ಮಾಡಬೇಕೆಂದು ತೀರ್ಮಾನ ಕೊಟ್ಟಮೇಲೂ ಸಹ ಈ ಸರ್ಕಾರದವರು ಅದರಂತೆ ನಡೆದುಕೊಳ್ಳುತ್ತಿಲ್ಲ. ಇವರು ಕೋರ್ಟಿನ ಆಜ್ಞೆಯನ್ನೂ ಸಹ ನಿಂದನೆ ಮಾಡಿದ್ದಾರೆ ಕೋರ್ಟಿನ ತೀರ್ಪಿಗೆ ಅಪಚಾರವೆಸಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು.

ರೈತರಿಂದ ವಸೂಲಿ ಮಾಡಿರುವ ಈ ಕಮಿಷನ್ ಹಣ ೩೩ ಕೋಟಿ ರೂಪಾಯಿಗಳನ್ನು ರೇಷ್ಮೆ ಬೆಳೆಯನ್ನು ಬೆಳೆಯತಕ್ಕ ರೈತರ ಅನುಕೂಲಕ್ಕಾಗಿ ಉಪಯೋಗಿಸಬೇಕೆಂದು ನಾನು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ರೇಷ್ಮೆ ಬೆಳೆಗಾರರ ಅಭಿವೃದ್ಧಿಗಾಗಿ ಈ ಹಣವನ್ನು ಮೀಸಲಾಗಿಡದೇ ಬೇರೆ ರೀತಿಯಲ್ಲಿ ಖರ್ಚು ಮಾಡುವುದನ್ನು ನೋಡಿದಾಗ ನಮಗೆ ವ್ಯಥೆಯಾಗುತ್ತದೆ. ಮೊದಲು ರೈತರ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿದ್ದರು. ಆದರೆ ಇವತ್ತಿನ ದಿವಸ ಆ ಹಣವನ್ನು ರೇಷ್ಮೆ ಬೆಳೆಗಾರರ ಅಭಿವೃದ್ಧಿಗೆ ಖರ್ಚು ಮಾಡುವ ಬಗ್ಗೆ ಒಂದು ಚಕಾರ ಶಬ್ದವೂ ಸಹ ಇದರಲ್ಲಿ ಇಲ್ಲ. ಖುಷ್ಕಿ ಜಮೀನಿನಲ್ಲಿ ರೇಷ್ಮೆಯನ್ನು ಬೆಳೆಯುತಕ್ಕ ಅನೇಕ ರೈತರು ನಮ್ಮ ರಾಜ್ಯದಲ್ಲಿ ಇದ್ದಾರೆ. ಇಂತಹ ರೈತರುಗಳಿಗೆ ಈ

ಕಮಿಷನ್ ಹಣದಿಂದ ಬಾವಿಗಳನ್ನು ತೋಡಿಸಿ ಕೊಟ್ಟರೆ ಸಾಮೂಹಿಕವಾಗಿ ರೇಷ್ಮೆಯನ್ನು ಬೆಳೆದು ಅವರು ಅಭಿವೃದ್ಧಿ ಹೊಂದಲಿಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಅಭಿವೃದ್ಧಿ ಕೆಲಸಗಳನ್ನು ಮಾಡುವ ಕಡೆ ಸರ್ಕಾರ ಗಮನ ಹರಿಸಬೇಕು. ಪ್ರತಿಯೊಂದು ಕ್ಷೇತ್ರದಲ್ಲೂ ಹಣವನ್ನು ಖರ್ಚು ಮಾಡಿ ಎಂದು ನಾನು ಹೇಳುವುದಿಲ್ಲ. ಮೂಲಭೂತವಾಗಿ ರೈತರಿಗೆ ಏನು ಅನುಕೂಲಗಳನ್ನು ಮಾಡಿಕೊಡಬೇಕೋ ಅದರ ಕಡೆ ಸರ್ಕಾರ ಆದ್ಯ ಗಮನವನ್ನು ಕೊಡಬೇಕು. ಇಲ್ಲದಿದ್ದರೆ ರೈತರ ಅಭಿವೃದ್ಧಿ ಆಗುವುದಿಲ್ಲ. ಮಾನ್ಯ ರೇಷ್ಮೆ ಸಚಿವರಾದ ವೈ. ಕೆ. ರಾಮಯ್ಯನವರು ರೇಷ್ಮೆ ಕೃಷಿ ಕುಟುಂಬದಲ್ಲಿ ಹುಟ್ಟಿರುವುದರಿಂದ ಅವರು ರೇಷ್ಮೆ ಬೆಳೆಗಾರರಲ್ಲಿ ಇರುವ ತೊಂದರೆಗಳು ಚೆನ್ನಾಗಿ ತಿಳಿದಿರುತ್ತವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಮೈಸೂರು, ಬೆಂಗಳೂರು, ತುಮಕೂರು, ಕೋಲಾರ ಈ ೪ ಜಿಲ್ಲೆಗಳಲ್ಲಿ ಹೆಚ್ಚಾಗಿ ರೇಷ್ಮೆಯನ್ನು ಬೆಳೆಯುತ್ತಾರೆ. ಮಾನ್ಯ ಸಚಿವರು ಸರ್ಕಾರದಲ್ಲಿ ಹೊಡೆದಾಡಿ ರಾಜ್ಯದ ರೇಷ್ಮೆ ಬೆಳೆಗಾರರಿಗೆ ಹೆಚ್ಚು ಅನುಕೂಲ ಮಾಡಿಕೊಡುವುದಕ್ಕೆ ಸರ್ಕಾರದಿಂದ ಹಣವನ್ನು ಬಿಡುಗಡೆ ಮಾಡಿಸಬೇಕು. ಮೊನ್ನೆ ಕೆಲವು ದಿನಗಳ ಹಿಂದೆ ರೇಷ್ಮೆ ನೂಲಿನ ವ್ಯಾಪಾರಸ್ಥರು ಬೆಲೆಯನ್ನು ಹೆಚ್ಚು ಮಾಡಬೇಕೆಂದು ಮುಷ್ಕರ ಹೂಡಿದ್ದರು. ರೇಷ್ಮೆ ಬೆಳೆಗಾರರಿಗಿಂತ ಹೆಚ್ಚಾಗಿ ಈ ರೇಷ್ಮೆ ವ್ಯಾಪಾರಸ್ಥರಿಗೆ ಬಹಳ ಲಾಭ ಇರುತ್ತವೆ. ರೇಷ್ಮೆ ಬೆಳೆಯನ್ನು ಮಾರಾಟ ಮಾಡುವುದಕ್ಕೋಸ್ಕರ ಸರ್ಕಾರವು ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನ್ನು ತಂದಿತು. ಈ ಬೋರ್ಡಿನ ಸಹಾಯದಿಂದ ರೇಷ್ಮೆ ಬೆಳೆಗಾರರಿಗೆ ಸರಿಯಾದ ಬೆಲೆಯನ್ನು ಒದಗಿಸಿ ಕೊಡಬೇಕು ಎನ್ನುವುದು ಉದ್ದೇಶವಾಗಿತ್ತು. ಈ ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನ್ನು ಅಸ್ತಿತ್ವಕ್ಕೆ ತಂದರೂ ಕೂಡ ಬೆಲೆಯನ್ನು ನಿಯಂತ್ರಣ ಮಾಡುವುದಕ್ಕೆ ಏತಕ್ಕೆ ಆಗಲಿಲ್ಲ ? ಈ ಬೋರ್ಡಿನಿಂದ ಯಾವ ಕೆಲಸವನ್ನು ಮಾಡಲಾಗಿದೆ ? ಈ ಸಿಲ್ಕ್ ಮಾರ್ಕೆಟಿಂಗ್ ಬೋರ್ಡಿನಿಂದ ರೈತರಿಗೆ ಸರಿಯಾದ ಅನುಕೂಲತೆಗಳು ಸಿಗುತ್ತಿಲ್ಲ. ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡಿನವರು ಹೆಚ್ಚು ಬಂಡವಾಳವನ್ನು ಹೂಡಿ ರೈತರಿಂದ ರೇಷ್ಮೆಯನ್ನು ಖರೀದಿ ಮಾಡಿ ರೈತರಿಗೆ ಬೆಲೆಯಲ್ಲಿ ಆಗುತ್ತಿರುವ ಏರುಪೇರುಗಳನ್ನು ತಪ್ಪಿಸಬಹುದು. ಇವರು ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನಿಂದ ಮಾರ್ಕೆಟ್ಟಿಗೆ ಒದಗಿಸಿರುವ ಬಂಡವಾಳ ಕೇವಲ ೫ ಕೋಟಿ ರೂಪಾಯಿಗಳು ಮಾತ್ರ. ಈ ೫ ಕೋಟಿ ರೂಪಾಯಿಗಳಲ್ಲಿ ಇವರು ಏನು ಮಾಡುವುದಕ್ಕೆ ಸಾಧ್ಯ ? ರೈತರಿಂದ ರೇಷ್ಮೆಯನ್ನು ಕೊಂಡು ಬೆಲೆಯನ್ನು ನಿಯಂತ್ರಿಸುವುದಕ್ಕೆ ಈ ಹಣದಿಂದ ಸಾಧ್ಯವಾಗುತ್ತದೆಯೇ ? ರಾಜ್ಯದಲ್ಲಿ ಬೆಳೆಯುವ ಒಟ್ಟು ರೇಷ್ಮೆಯಲ್ಲಿ ೨೫–೩೦ ಪರ್ಸೆಂಟ್ ಅಷ್ಟು ರೇಷ್ಮೆಯನ್ನು ಕೊಂಡುಕೊಳ್ಳತಕ್ಕಂಥ ಶಕ್ತಿ ಈ ಮಾರ್ಕೆಟಿಂಗ್ ಬೋರ್ಡ್‌ಗೆ ಇರಬೇಕು. ಆಗ ಮಾತ್ರ ಬೆಲೆಯ ಮೇಲೆ ನಿಯಂತ್ರಣವನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಇಡೀ ರಾಜ್ಯದಲ್ಲಿ ನಡೆಯತಕ್ಕ ರೇಷ್ಮೆ ವಹಿವಾಟಿನಲ್ಲಿ ೨೦–೩೦ ಪರ್ಸೆಂಟ್ ಅಷ್ಟು ರೇಷ್ಮೆಯನ್ನು ಕೊಳ್ಳುವುದಕ್ಕೆ ಈ ಬೋರ್ಡಿಗೆ ಹಣವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮಾರ್ಕೆಟ್ಟಿನಲ್ಲಿ ರೇಷ್ಮೆ ಬೆಳೆಯ ಬೆಲೆಯು ಕೆಳಗೆ ಬರುತ್ತಿದೆ ಎಂದು ಕಂಡುಬಂದಾಗ ಇವರು ಖರೀದಿ ಮಾಡಿರುವ ರೇಷ್ಮೆಯನ್ನು ಸ್ಟಾಕ್ ಇಡುವುದರ ಮೂಲಕ ಬೆಲೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬಹುದು. ಬೆಲೆಯ ಮೇಲೆ ರೆಗ್ಯುಲೇಟ್ ಮಾಡತಕ್ಕ ಶಕ್ತಿಯನ್ನು ಸಂಪಾದನೆ ಮಾಡಿಕೊಳ್ಳದೇ ಇರುವಂಥ ಪರಿಸ್ಥಿತಿ ಇವತ್ತು ಇದೆ. ನಿಜವಾಗಿ ಹೇಳಬೇಕಾದರೆ ಈ ವರಪ್ರದಾನವಾದ ರೇಷ್ಮೆ ಕೃಷಿಯನ್ನು ನಾವು ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕು ಹಾಗು ಇದರ ಬೆಲೆಯಲ್ಲಿ ನಿಯಂತ್ರಣವನ್ನು ಇಟ್ಟುಕೊಳ್ಳಬೇಕು, ಬೆಲೆಯ ಮೇಲೆ ನಿಯಂತ್ರಣ ಇಲ್ಲದೇ ಹೋದರೆ ರೇಷ್ಮೆ ಕೃಷಿ ಕಡಿಮೆಯಾಗುತ್ತದೆ. ಯಾರಿಗೆ ರೇಷ್ಮೆ ಬೆಳೆಯ ಮೇಲೆ ಅಭಿಮಾನ ಇದೆಯೋ ಅವರಿಗೆ ಅಭಿಮಾನ ಕಡಿಮೆಯಾಗುತ್ತದೆ. ರೇಷ್ಮೆ ಕಡ್ಡಿಯನ್ನು ಬೆಳೆಯದೇ ಇರತಕ್ಕ ಪರಿಸ್ಥಿತಿ ಬಂದರೂ ಬರಬಹುದು, ಬೆಲೆ ನಿಯಂತ್ರಣ ಮಾಡುವ ಬಗ್ಗೆ ಪ್ರಗತಿಯನ್ನು ಸಾಧಿಸಬೇಕು. ಕರ್ನಾಟಕ ಸಿಲ್ಕ್ ಬೋರ್ಡ್‌ನವರು ದೊಡ್ಡ ಮರ್ಚೆಂಟ್ ತರಹ ಕೆಲಸ ಮಾಡುತ್ತಿದ್ದಾರೆ. ಈ ರೀತಿ ಮಾಡುವುದನ್ನು ನಿಲ್ಲಿಸಿ ಸರಿಯಾಗಿ, ಮಾದರಿ ರೂಪದಲ್ಲಿ ಕೆಲಸ ಮಾಡಬೇಕು. ಈ ಬೋರ್ಡ್ ಅಲ್ಲದೇ ಸರ್ಕಾರದವರು ಇನ್ನೂ ಒಂದು ಮಾಡಿದ್ದಾರೆ, ಅದು ಯಾವುದೆಂದರೆ, ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್. ಇದೇ ತರಹ ಅನೇಕ ರೇಷ್ಮೆ ಕಾರ್ಖಾನೆಗಳು ನಮ್ಮ ರಾಜ್ಯದಲ್ಲಿ ಕೆಲಸ ಮಾಡುತ್ತಿವೆ. ಇದನ್ನು ಬೇರೆ ಏಕೆ ಮಾಡಿದರೋ ಗೊತ್ತಿಲ್ಲ. ಇದನ್ನು ಮಾಡಿದ ದಿನದಿಂದಲೂ ಇದು ನಷ್ಟದಲ್ಲೇ ಕೆಲಸ ಮಾಡುತ್ತಿದೆ. ಈ ಇಂಡಸ್ಟ್ರೀ ಮೂಲಕ ಅಂತರ ರಾಷ್ಟ್ರೀಯ ಮಟ್ಟದಲ್ಲಿ ರೇಷ್ಮೆಯನ್ನು ಮಾರಾಟ ಮಾಡಬೇಕೆಂದು ೧೫ ಕೋಟಿ ರೂಪಾಯಿಗಳನ್ನು ಇದರಲ್ಲಿ ಹಾಕಿದರೂ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಇದರಲ್ಲಿ

ನಷ್ಟವೇ ಆಗುತ್ತಿದೆ. ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನವರೇ ಇದರ ಕೆಲಸವನ್ನು ಮಾಡಬಹುದು. ಹೋದ ಸಾರಿಯೂ ಸಹ ನಾನು ಇದರ ಬಗ್ಗೆ ಮಾತನಾಡಿದ್ದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ರೇಷ್ಮೆ ಬೆಳೆಯ ಅಭಿವೃದ್ಧಿಗಾಗಿ ಸಲಹೆ ತೆಗೆದುಕೊಳ್ಳಲು ಒಂದು ಸಲಹಾ ಸಮಿತಿಯನ್ನು ಮಾಡಿ. ಆ ಸಲಹಾ ಸಮಿತಿಯ ಸಲಹೆಗಳನ್ನು ಪಡೆದು ಪ್ರಗತಿಪರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಿ. ಆದರೆ ನಾನು ಹೇಳುವುದನ್ನು ತಾವೇ ಗಮನಿಸಲೇ ಇಲ್ಲ. ದಯಮಾಡಿ ಆದಷ್ಟು ಬೇಗ ಒಂದು ಸಮಿತಿಯನ್ನು ಮಾಡಿ ಅದರ ಸಲಹೆಯನ್ನು ಪಡೆಯಿರಿ. ನಮ್ಮ ಕಡೆ ಕಬಿನಿ ಜಲಾಶಯದ ನೀರು ಬರುತ್ತದೆ. ಅಲ್ಲಿ ಸ್ವಲ್ಪ ಕಪ್ಪು ಮಣ್ಣು ಇದೆ. ಈ ಕಪ್ಪು ಮಣ್ಣಿನಲ್ಲಿ ಅಷ್ಟು ಚೆನ್ನಾಗಿ ರೇಷ್ಮೆ ಬೆಳೆ ಬರುವುದಿಲ್ಲ. ಅಲ್ಲದೇ ರೇಷ್ಮೆ ಕಡ್ಡಿಗೂ ಅಪಾಯವಾಗುತ್ತದೆ. ರೈತನಿಗೂ ಅನೇಕ ಸಮಸ್ಯೆಗಳು ಇರುತ್ತವೆ. ರೈತನು ವಾಸಿಸುವ ಮನೆ ಸಹ ಚಿಕ್ಕದಾಗಿರುತ್ತದೆ. ಆ ಸಣ್ಣ ಮನೆಯಲ್ಲೇ ಸಂಸಾರವನ್ನು ಮಾಡಿಕೊಂಡು ಹುಳುಗಳನ್ನು ಸಾಕುತ್ತಾನೆ. ಈ ರೀತಿ ಮಾಡುವುದರಿಂದ ಬೆಳೆ ಸರಿಯಾಗಿ ಬರುವುದಿಲ್ಲ. ರೈತನಿಗೆ ಹುಳುಗಳನ್ನು ಸಾಕುವುದಕ್ಕೆ ಸರಿಯಾದ ಸ್ಥಳ ಅಭಾವ ಇರುವುದರಿಂದ, ಪ್ರತಿಯೊಂದೂ ರೇಷ್ಮೆ ಬೆಳೆಯುವ ಹಳ್ಳಿಗಳಲ್ಲಿ ಒಂದೊಂದು ಸಾಮೂಹಿಕ ಹುಳು ಸಾಕಣೆ ಮನೆಗಳನ್ನು ನಿರ್ಮಾಣ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಇದನ್ನು ಯಾವ ರೀತಿ ಮಾಡಿದರೆ ಅನುಕೂಲವಾಗುತ್ತದೆ. ಇದನ್ನು ಯಾವ ರೀತಿ ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ಬಗ್ಗೆ ನಾವು ಸಲಹೆಯನ್ನು ಬೇಕಾದರೆ ಕೊಡುತ್ತೇವೆ. ರೇಷ್ಮೆ ಬೆಳೆಗಾರರಿಂದ ಕಮಿಷನ್ ರೂಪದಲ್ಲಿ ಪಡೆದಿರುವ ೩೩ ಕೋಟಿ ರೂಪಾಯಿಗಳನ್ನು ಈ ತರಹ ಮನೆಗಳನ್ನು ಕಟ್ಟುವುದಕ್ಕೆ ಉಪಯೋಗಿಸಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಎಲ್ಲಾ ಬಡವರಿಗೂ ಅನುಕೂಲವಾಗುತ್ತದೆ. ರೇಷ್ಮೆಯನ್ನು ಉತ್ಪಾದನೆ ಮಾಡತಕ್ಕ ವೆಚ್ಚವನ್ನು ತಗ್ಗಿಸಬೇಕು. ಅದಕ್ಕೆ ಬೇಕಾದರೆ ನಾವು ಅನೇಕ ಸಲಹೆಗಳನ್ನು ಕೊಡುತ್ತೇವೆ. ಈಗ ಅದರ ಬಗ್ಗೆ ಹೇಳುತ್ತಾ ಹೋದರೆ ಸಮಯ ಸಾಕಾಗುವುದಿಲ್ಲ. ತಾವು ಒಂದು ಸಲಹಾ ಸಮಿತಿಯನ್ನು ಕರೆಯಿರಿ ಆಗ ನಾವು ವಿವರಣೆಯನ್ನು ಕೊಡುತ್ತೇವೆ. ಇನ್ನು ಕೇಂದ್ರ ಸರ್ಕಾರದವರು ರೇಷ್ಮೆ ಬೆಳೆಯ ಮೇಲೆ ನಿಯಂತ್ರಣವನ್ನು ತೆಗೆದುಕೊಳ್ಳುತ್ತಾರೆ. ತಾವು ಇದನ್ನು ಪ್ರತಿಭಟನೆ ಮಾಡಬೇಕು. ರೇಷ್ಮೆ ಬೆಳೆಯು ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವಾಗಿದ್ದರಿಂದ ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರ ಇರಬಾರದು. ಈಗ ನಮ್ಮ ಕರ್ನಾಟಕ ರಾಜ್ಯ ರೇಷ್ಮೆ ಬೆಳೆಯುವುದರಲ್ಲಿ ರಾಷ್ಟ್ರದಲ್ಲಿ ೪ನೇ ಸ್ಥಾನದಲ್ಲಿ ಇದೆ. ತಮ್ಮ ಕಾಲದಲ್ಲಿ ಅದನ್ನು ೨ನೇ ಸ್ಥಾನಕ್ಕಾಗಲೀ ೩ನೇ ಸ್ಥಾನಕ್ಕಾಗಲೀ ತರುವುದಕ್ಕೆ ಕೆಲಸ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ ವಿಶ್ವ ಮಾರುಕಟ್ಟೆಯಲ್ಲಿ ಈ ರೇಷ್ಮೆ ಸರಕು ಅಗ್ಗವಾದಾಗ ಅಲ್ಲಿ ಭಾರತವು ಪ್ರವೇಶ ಮಾಡತಕ್ಕಂತಹ ಅವಕಾಶ ಇದೆ. ಆದರೆ ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಬೇಡಿ. ನೇಕಾರರು ಪ್ರತಿಭಟನೆ ಮಾಡಲಿ, ಯಾರೇ ಪ್ರತಿಭಟನೆ ಮಾಡಲಿ, ನಾನು ನೇಕಾರರಿಗೆ ಅನುಕೂಲ ಆಗಬಾರದು ಎನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ ನೇಕಾರರಿಗೆ ಅನುಕೂಲ ಆಗಬೇಕು. ಆದರೆ ಬೆಲೆ ನಿಯಂತ್ರಣ ಮಾಡಿ ಅವರಿಗೆ ಕೊಡತಕ್ಕಂತಹ ರೇಷ್ಮೆಯನ್ನು ಅವರಿಗೆ ಕೊಡಿ ನಾವು ಬೇಡ ಎಂದು ಹೇಳುವುದಿಲ್ಲ. ನೇಕಾರರ ಹಿತದೃಷ್ಟಿಯಿಂದ ಕೂಡ ತಾವು ಕೆಲಸ ಮಾಡಿ. ಆದರೆ ಚೈನಾ ದೇಶದ ರೇಷ್ಮೆಯಾಗಲಿ, ಅಥವಾ ಹೊರಗಡೆಯ ರೇಷ್ಮೆಯನ್ನಾಗಲಿ ಆಮದು ಮಾಡಿಕೊಳ್ಳುವಂತಹ ಪರಿಪಾಠವನ್ನು ಬೆಳೆಸಿಕೊಳ್ಳುವುದು ಬೇಡ ಎನ್ನತಕ್ಕಂಥದ್ದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗೃಹಕೈಗಾರಿಕೆ ಎಂದು ಇನ್ನೂ ಕೂಡಾ ತಮ್ಮ ಸರಕಾರದ ಮುಖಾಂತರ ಮಾಡಿಲ್ಲ, ಅನೇಕ ಸಹಕಾರ ಸಂಘಗಳ ಮುಖಾಂತರ ರೇಷ್ಮೆ ಬೆಳೆಗಾರರು ತೆಗೆದುಕೊಂಡಿರತಕ್ಕಂಥ ಸಾಲದ ಬಗ್ಗೆ ಬಡ್ಡಿ, ಸುಸ್ತಿ ಬಡ್ಡಿ ಎಲ್ಲವನ್ನೂ ರಿಯಾಯಿತಿಯಲ್ಲಿ ಸಹಾಯ ಮಾಡಲಿಕ್ಕೆ ಏರ್ಪಾಡು ಮಾಡಬೇಕೆಂದು ಬೇಡಿಕೆಯನ್ನು ಇಟ್ಟಿದ್ದೇವೆ. ಏತಕ್ಕೆ ಮಾಡಲಿಲ್ಲ ಎಂದು ತಾವು ವಿವರಣೆ ಕೊಡಬೇಕು. ರೇಷ್ಮೆ ಕೈಗಾರಿಕೆ ಸಹಕಾರ ಸಂಘಗಳು ಏನಿವೆ. ಅವುಗಳಲ್ಲಿ ಇಷ್ಟು ದಿವಸದ ಅವಧಿಯೊಳಗೆ ತಾವು ತೆಗೆದುಕೊಂಡ ಸಾಲವನ್ನು ಪೂರ್ಣವಾಗಿ ಹಿಂತಿರುಗಿಸಿದಾಗ ಅದಕ್ಕೆ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಸರಕಾರದವರು ಘೋಷಣೆ ಮಾಡಿದ್ದಾರೆ. ಇಂಡಸ್ಟ್ರಿಯಲ್ ಪ್ರೊಡ್ಯುಸರ್ಸ್ ಸೊಸೈಟಿಗಳಿವೆ. ಆದರೆ ರೈತನು ಸಹಕಾರ ಸಂಘಗಳ ಮೂಲಕ ತನ್ನ ಜಮೀನನ್ನು ಆಮದು ಮಾಡಿಕೊಂಡು ನೀರಾವರಿ ಬಾವಿ ಮಾಡಿಕೊಳ್ಳಲಿಕ್ಕೆ, ತಾವು ಏಕೆ ಮಾಡಬಾರದು ? ೧೮೯ ಸಹಕಾರಿ ಸೊಸೈಟಿಗಳು ಇವೆ. ಅದರ ಮುಖಾಂತರ ಸುಮಾರು ೨೩೦ ಲಕ್ಷ ರೂಗಳ ಸಾಲವನ್ನು ನಮ್ಮ ರಾಜ್ಯದಲ್ಲಿ ಪಡೆದಿದ್ದಾರೆ. ಆ ೨೩೦ ರೂಗಳ ಸಾಲಕ್ಕೆ ಅನೇಕ ರೀತಿಯಲ್ಲಿ ಬಡ್ಡಿ,

ಸಂಸ್ಥೆ ಬಡ್ಡಿ ನಡೆದಿದೆ. ದಯವಿಟ್ಟು ತಾವು ಮನಸ್ಸು ಮಾಡಿದರೆ, ಯಾವರೀತಿ ಕೈಗಾರಿಕಾ ಸಹಕಾರಿ ಸಂಘಗಳಿಗೆ ಬಡ್ಡಿಯನ್ನು ಮನ್ನಾ ಮಾಡುತ್ತೀರೋ, ಅದೇ ರೀತಿಯಾಗಿ ಈ ಸಂಘಗಳಿಗೂ ಕೂಡಾ ಇರತಕ್ಕಂತಹ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ತಾವು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಮ್ಮ ಸರಕಾರ ಗಂಗಾ ಕಲ್ಯಾಣ ಯೋಜನೆಯನ್ನು ಮಾಡಬೇಕೆಂದು ತೀರ್ಮಾನ ಮಾಡಿದೆ. ಎಲ್ಲೆಲ್ಲಿ ಹರಿಜನ ಗಿರಿಜನರಿಗೆ ಉಪಯೋಜನೆ ಮತ್ತು ವಿಶೇಷ ಘಟಕ ಯೋಜನೆ ಪ್ರಕಾರ, ಗಂಗಾ ಕಲ್ಯಾಣ ಯೋಜನೆ ಆಗುತ್ತದೋ ಅಲ್ಲಲ್ಲಿ ತಾವು ಚಂದ್ರಿಕೆ, ರಾಸಾಯನಿಕ ಗೊಬ್ಬರವನ್ನು ಕೊಡತಕ್ಕಂಥಾದ್ದನ್ನು ನಿಲ್ಲಿಸಿ. ಅದು ದುರುಪಯೋಗ ಆಗುತ್ತಿದೆ. ಆದುದ್ದರಿಂದ ಅಲ್ಲಿ ಗಂಗಾ ಕಲ್ಯಾಣ ಯೋಜನೆ ಮೂಲಕ ಬಾವಿ ಮಾಡತಕ್ಕಂತಹ ಕಾಲದಲ್ಲಿ ಗಿರಿಜನರ ಭೂಮಿಗೆ ಕೇಂದ್ರ ಸರಕಾರದವರು ಒರಿಸ್ಸದಲ್ಲಿ ಗುಡ್ಡಗಾಡು ಜನರ ಭೂಮಿಗೆ ಗಡಿ ಹಾಕಿದಂತೆ ಇಲ್ಲಿಯೂ ತಾವು ಹಾಗೆ ಏಕೆ ಮಾಡಬಾರದು? ಇದರಿಂದ ಅವರಿಗೆ ಕೆಲಸವನ್ನು ಕೂಡಾ ಕೊಟ್ಟಹಾಗೆ ಆಗುತ್ತದೆ. ಈಗಾಗಲೇ ಸರಕಾರ ೧೯೮೬-೮೭ನೇ ಇಸವಿಯಲ್ಲಿ ಸಾವಿರಾರು ಎಕರೆಯನ್ನು ಗಂಗಾ ಕಲ್ಯಾಣ ಯೋಜನೆ ಮೂಲಕ ನೀರಾವರಿಗೆ ಒಳಪಡಿಸಬೇಕೆಂದು ತೀರ್ಮಾನ ಮಾಡಿದೆ: ಅದಕ್ಕಾಗಿ ಇದನ್ನು ಸದುಪಯೋಗ ಮಾಡಿಕೊಂಡು ಅನುಕೂಲ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಜೊತೆಗೆ ಕೆ.ಎಸ್.ಐ.ಸಿ.ಬಿ ಯ ಮ್ಯಾನೇಜಿಂಗ್ ಡೈರೆಕ್ಟರ್‌ವರಿಗೆ ನೇರವಾಗಿ ನಾನು ಸಂಪರ್ಕ ಮಾಡಿದ್ದೆ. ಪತ್ರವನ್ನು ಕೂಡ ಬರೆದಿದ್ದೇನೆ. ತಮಗೆ ಯಾವ ಡೀನಿಯರ್ ಬೇಕೋ, ಒಂದೇ ರೀತಿಯ ಡೀನಿಯರ್ ಬೇಕಾಗಿರತಕ್ಕಂತಹ ದಾರವನ್ನು ಉತ್ಪಾದನೆ ಮಾಡತಕ್ಕಂತಾದ್ದನ್ನು ವ್ಯವಸ್ಥೆ ಮಾಡೋಣ, ತಾವು ಕೊಳ್ಳೆಗಾಲಕ್ಕೆ ಬನ್ನಿ ಎಂದು ಕೇಳಿಕೊಂಡಿದ್ದೆ. ಒಂದು ಹಾತದಲ್ಲಿ ಕಾಮನ್ ರೀಲಿಂಗ್ ಶೆಡ್‌ಗಳನ್ನು ಕಟ್ಟಿಸಿ ತಮಗೆ ೧೮-೨೦ತ್ತೊ, ೧೨-೧೪ಕ್ಕೊ, ಅಂತಹದ್ದನ್ನು ತಯಾರು ಮಾಡತಕ್ಕಂತಹ ಯೋಜನೆಯನ್ನು ಮಾಡೋಣ, ಎಲ್ಲರಿಗೂ ಒಳ್ಳೆಯದಾಗುತ್ತದೆ ಬನ್ನಿ ಎಂದು ಹೇಳಿದ್ದೇನೆ. ಅವರು ೨ ಸಲ Programme ಕೊಟ್ಟಿದ್ದರು ಆದರೆ ಅವರು ಬರಲಿಲ್ಲ. ಅದಕ್ಕೆ ಕಾರಣವೂ ಗೊತ್ತಿಲ್ಲ. ದಯವಿಟ್ಟು ತಾವುಗಳು ಅದನ್ನು ಮಾಡಬೇಕು. ನಾವು ಅಂತರಾಷ್ಟ್ರೀಯ ಮಾರ್ಕೆಟ್ಟಿನಲ್ಲಿ ನಮ್ಮ ರೇಷ್ಮೆ ಪೈಪೋಟಿಯನ್ನು ಎದುರಿಸ ಬೇಕು ಎನ್ನುವಾಗ ಮತ್ತು ನಾವು ಉತ್ತಮ ರೀತಿಯ ರೇಷ್ಮೆದಾರವನ್ನು ತಯಾರುಮಾಡಬೇಕೆನ್ನುವಾಗ ಹಲವಾರು ತೊಂದರೆಗಳು ಆಗುವುದು ಸಹಜ. ಒಂದೇ ಡೀನಿಯರ್ ತಯಾರು ಮಾಡ ವಂತಹ ಟೆಕ್ನಿಕ್ ಬಗ್ಗೆ ಯೋಜನೆಯನ್ನು ಮಾಡಬೇಕು. ಅದಕ್ಕಾಗಿ ಇಂತಹ ಒಂದು ಕಾಮನ್ ರೀಲಿಂಗ್ ಶೆಡನ್ನು ಹಾಕಬೇಕು. ನಮ್ಮದೇ ಆಗಿರತಕ್ಕಂತಹ ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಕೇಡರ್‌ನವರೊಬ್ಬರನ್ನು ಸೂಪರ್‌ವೈಸರ್ ಆಗಿ ಇಟ್ಟು ಮಾಡಿ, ಅಲ್ಲಿ ಡೀನಿಯರ್ ಮಿನಿಮಿಲ್ ಫಿಲೇಚರ್ ಎಂದು ಮಾಡಬಹುದು. ನಿಮ್ಮ ಫಿಲೇಚರ್ ಮಾದರಿಯಲ್ಲಿ ೫೫ ರೂ. ಗೂಡಿಗೆ ಕೊಟ್ಟು ೪೫ ರೂ, ಕಾಸ್ಟ್ ಆಫ್ ಪ್ರೊಡಕ್ಷನ್ ಲೆಕ್ಕಹಾಕಿ ಒಟ್ಟು ನೂರು ರೂಗಳನ್ನು ಇಟ್ಟು ಬಿಡುವುದು. ಆ ತರಹ ಅಲ್ಲ ನಮಗೂ, ನಿಮಗೂ ೮೦ ರೂಗಳ ವ್ಯತ್ಯಾಸ ಇರುತ್ತದೆ. ಕಾಸ್ಟ್ ಆಫ್ ಪ್ರೊಡಕ್ಷನ್‌ನಲ್ಲಿ ಆದುದ್ದರಿಂದ ಅಂತಹ ದಾರವನ್ನು ತೆಗೆಯುವುದಕ್ಕೆ ಒಂದು ವ್ಯವಸ್ಥಿತವಾದ ಪ್ರಯತ್ನವನ್ನು ಮಾಡಬೇಕು. ಒಂದೇ ಡೀನಿಯರ್ ಬಗುವ ರೀತಿಯಲ್ಲಿ ತಮಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ನಾವು ತೋರಿಸಿಕೊಡ ತ್ತೇವೆ. ತಾವು ಬರಬೇಕು. ಪ್ರಯೋಗ ಮಾಡೋಣ ಎಂದು ಹೇಳಿದ್ದೇನೆ. ಆದರೆ ಅವರು ಅದನ್ನು ಮಾಡಲಿಲ್ಲ, ನನ್ನ ಒಂದು ಮುಖ್ಯವಾಗಿರತಕ್ಕಂತಹ ಉದ್ದೇಶ ಅಂದರೆ, ಈ ಇಲಾಖೆಯಲ್ಲಿಟ್ಟಿರತಕ್ಕಂತಹ ೩೩ ಕೋಟಿರೂಗಳನ್ನು ಈ ರೇಷ್ಮೆಯನ್ನು ಯಾರು ಅವಲಂಭಿಸಿರುತ್ತಾರೋ ಅಂತಹ ರೈತರಿಗೆ ಖರ್ಚು ಮಾಡತಕ್ಕಂತಾದ್ದು. ಎಲ್ಲೆಲ್ಲಿ ಗೂಡಿನ ಮಾರ್ಕೆಟ್ಟುಗಳು ದುರ್ಬಲ ಆಗಿವೆಯೋ ಅದನ್ನು ಒಳ್ಳೆಯ ರೀತಿಯಲ್ಲಿ ತಾವು ಮಾಡಿಕೊಡಬೇಕು. ಕೆ.ಎಸ್.ಐ.ಸಿ.ಬಿ.ಯಲ್ಲಿ ಆಗಿರತಕ್ಕಂತಹ ನಷ್ಟವನ್ನು ತುಂಬಲಿಕ್ಕೆ ಏರ್ಪಾಡು ಮಾಡಬೇಕು. ಇದನ್ನು ಸಮಾಲೋಚನೆ ಮಾಡತಕ್ಕಂತಹ ಒಂದು ಸಮಿತಿಯನ್ನು ತಾವು ಕರೆಯಬೇಕು. ಮುಂದಿನ ನೇಯದಾಗಿ, ಹಿಪ್ಪೆನೇರಳೆಯನ್ನು ಎನ್‌ರಿಚ್ ಮಾಡತಕ್ಕಂತಹ ಮತ್ತು ಪೌಷ್ಟಿಕಾಂಶವನ್ನು ಜಾಸ್ತಿ ಮಾಡತಕ್ಕಂತಹ ಒಂದು ಕಾರ್ಯಕ್ರಮವನ್ನು ಜಾಸ್ತಿ ಮಾಡಬೇಕು, ಮತ್ತು ಬರೆ ಅಧಿಕಾರಿಗಳನ್ನು ಮಾತ್ರ ಪರದೇಶಗಳಿಗೆ ಕಳುಹಿಸುವ ಪದ್ಧತಿಯ ಜೊತೆಗೆ ರೈತರನ್ನು ಮತ್ತು ಶಾಸಕರನ್ನು, ಕಳುಹಿಸತಕ್ಕಂತಹ ಪರಿಪಾಠವನ್ನು ಹಾಕಿಕೊಳ್ಳಬೇಕು. ಈ ದಿಶೆಯಲ್ಲಿ ನಿಷ್ಠೆಯಿಂದ ತಾವುಗಳು ಕೆಲಸ ಮಾಡುತ್ತೀರೆಂದು ನಂಬಿದ್ದೇನೆ. ಆದರೂ ಕೂಡ ಈ ೩೩ಕೋಟಿಗಳನ್ನು ತಾವು ಏಕೆ ಬಿಟ್ಟಿದ್ದೀರಿ ಎಂದು ಅರ್ಥವಾಗುತ್ತಿಲ್ಲ. ವಿಶ್ವ ಬ್ಯಾಂಕ್ ಯೋಜನೆಯನ್ನು ಎರಡು ವರ್ಷ ಮುಂದಕ್ಕೆ ಹಾಕದೆ ಇದನ್ನು ಕಾರ್ಯಗತ ಮಾಡುತ್ತೇವೆ ಎಂದು ಹೇಳಿದ್ದೀರಿ. ೩೩೪ರ ನಿಯಮದ ಪ್ರಕಾರ ಕೇಳಿದ್ದಕ್ಕೆ ಉತ್ತರವನ್ನು ಕೊಟ್ಟಿದ್ದೀರಿ, ಪ್ರಶ್ನೆಯೊಂದಕ್ಕೂ ಉತ್ತರವನ್ನು ಕೊಟ್ಟಿದ್ದೀರಿ.

ಮತ್ತೆ ನಾನು ಕೇಳಿದಾಗ ಬಜೆಟ್ ಮೇಲೆ ಮಾತನಾಡುವಾಗ ನಾನು ಹೇಳಿದ್ದೆನೆ, ರಾಜ್ಯದಲ್ಲಿ ಸಂಪನ್ಮೂಲಗಳು ಕಡಿಮೆ ಇದೆ ಎಂದು ಹೇಳಿದ್ದೀರಿ ಮತ್ತು ಎರಡು ವರ್ಷ ಮುಂದಕ್ಕೆ ಹಾಕಿದೆ ಎಂದು ಹೇಳಿದ್ದೀರಿ. ಏನು ಸ್ವಾಮಿ ಇದು ಬ್ರಿಜ್ ಆಫ್ ಪ್ರಿವಿಲೇಜ್ ಆಗುವುದಿಲ್ಲವೇ? ಈ ಮನೆಯನ್ನು ತಪ್ಪು ದಾರಿಗೆ ಎಳೆದ ಹಾಗೆ ಆಗುವುದಿಲ್ಲವೆ? ಅದಕ್ಕಾಗಿ ಖಚಿತವಾಗಿ ಒಂದು ಮಾತನ್ನು ಹೇಳಿ ಇನ್ನು ಎರಡು ವರ್ಷಗಳ ಕಾಲ ಇದನ್ನು ಮಾಡುವುದಕ್ಕಾಗುವುದಿಲ್ಲ, ನಮ್ಮ ಹತ್ತಿರ ಹಣ ಇಲ್ಲ ಎಂದು ಹೇಳಿಬಿಡಿ. ಐದು ವರ್ಷಗಳಲ್ಲಿ ಹೋದ ಸಾರಿ ಕೂಡಾ ಉತ್ತರ ಕೊಡುವಾಗ ಹೇಳಿದ್ದೀರಿ. ಖಂಡಿತವಾಗಿಯೂ ನಿಗದಿ ಮಾಡಿರತಕ್ಕಂತಹ ಅವಧಿಯೊಳಗೆ ಪೂರೈಸುತ್ತೇವೆ ಎಂದು ಹೇಳಿದ್ದೀರಿ. ಈ ಅಧಿವೇಶನದಲ್ಲಿ ಮೂರು ಸಾರಿ ಹೇಳಿದ್ದೀರಿ. ಮತ್ತೆ ಮತ್ತೆ ಮುಂದುವರಿಸಿಕೊಂಡು ಹೋಗತಕ್ಕಂತಾದ್ದು, ಪ್ರತ್ಯಕ್ಷವಾಗಿ ಪರೋಕ್ಷವಾಗಿ, ಒಂದು ಮಾತನ್ನು ಹೇಳತಕ್ಕಂತಾದ್ದು, ಇದು ನಮಗೆ ಕಸಿವಿಸಿಯನ್ನು ಉಂಟುಮಾಡುತ್ತದೆ, ಮತ್ತು ಸಂಶಯಕ್ಕೆ ಎಡೆಮಾಡಿಕೊಡುತ್ತದೆ, ಇದಕ್ಕೆ ಅವಕಾಶ ಮಾಡಿಕೊಡಬೇಡಿ ಮತ್ತು ಬೈವೋಲ್ಟಿನ್ ಬಗ್ಗೆ ಈಗಾಗಲೇ ತಾವು ತೀರ್ಮಾನ ಮಾಡಿದ್ದೀರಿ. ತಾವು ಏನು ತೀರ್ಮಾನ ಮಾಡಿದ್ದೀರೋ ಅದಕ್ಕೆ ನಮ್ಮ ರೀಲರ್ಸ್ ಬದ್ಧರಾಗಿದ್ದಾರೆ. ಈ ಬಗ್ಗೆ ಆಶ್ವಾಸನೆಯನ್ನು ಕೊಡುತ್ತಾ ರೇಷ್ಮೆ ಬ್ಯೂಟ್ ಬಗ್ಗೆ ಏನು ಸಿಸ್ಟಮ್ ಇಟ್ಟಿದ್ದೀರೊ ಅದರಿಂದ ಹೆಚ್ಚಿಗೆ ಪ್ರಯೋಜನ ಆಗುತ್ತಾ ಇಲ್ಲ, ಹೆಚ್ಚಿನ ರೀತಿಯಲ್ಲಿ ಪ್ರಯೋಜನ ಆಗುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರೇಷ್ಮೆ ಪಿಲೇಚರ್ ಘಟಕಗಳನ್ನು ಹೆಚ್ಚಿಗೆ ಸ್ಥಾಪನೆ ಮಾಡುವ ರೀತಿಯಲ್ಲಿ ಅಲ್ಲಿ ವ್ಯವಸ್ಥೆ ಮಾಡಬೇಕು ಅನೇಕ ಜನರು ಈ ಕುರಿತು ಮುಂದೆ ಬಂದಿದ್ದಾರೆ. ಅವರಿಗೆ ಸಾಲದ ರೂಪದಲ್ಲಿ ಹಣವನ್ನು ಕೊಡಿಸಿ ಕೊಡಿಸದೆ ಹೋದರೆ ತೊಂದರೆಯಾಗುತ್ತದೆ, ಶ್ರೀಮಂತರು ಮಾಡತಕ್ಕಂತಾದ್ದು ದೊಡ್ಡದಲ್ಲ. ಒಂದೋ, ಎರಡೋ, ಬೇಸಿನ್ ಹಾಕಿರತಕ್ಕಂತಹ ಚಿಕ್ಕ ರೈತರು ಇದ್ದಾರೆ, ಅವರಿಗೆ ಪ್ರೋತ್ಸಾಹ ಕೊಡಬೇಕು. ಹಾಗೆಯೇ ಮಾರ್ಕೆಟ್ಟಿನಲ್ಲಿ ತೂಕದಲ್ಲಿ ಬಹಳ ಮೋಸ ಆಗುತ್ತದೆ, ಅವರು ಯಾವುದೋ ಒಂದು ಲಾಟ್ ಬಂದಾಗ ತೂಕ ಮಾಡುವಾಗ, ರೀಲರಿಗೆ ಸಂಬಂಧ ಬೆಳೆಸಿಕೊಂಡು ಸಬ್ಸಿಡಿ ಲಾಟ್ ಎಂದು ಹೇಳಿಕೊಂಡು ಅಂದರೆ ೨-೩ ಕೆ.ಜಿ. ಗೂಡುಗಳನ್ನು ಹೊಡೆದು ತಿಂದು ಹಾಕುತ್ತಿದ್ದಾರೆ, ಇದರಿಂದ ಸುಮಾರು ೧೫೦ರೂಗಳ ನಷ್ಟ ರೈತರಿಗೆ ಆಗುತ್ತದೆ ಅದನ್ನು ದಯಮಾಡಿ ಅಬ್ರುಪ್ಟ್ ಆಗಿ ಚೆಕ್ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಸುಮಾರಾಗಿ ಒಂದು ದಿವಸಕ್ಕೆ ಮಾರ್ಕೆಟಿಯರ್ಸ್‌ಗೆ ೧೫೦-೨೦೦ ರೂಗಳ ಲಾಭ ಇದೆ. ಚಿಲ್ಲರೆ ಇರತಕ್ಕಂಥಾದ್ದನ್ನು ಕೂಡಾ ವಾಪಸ್ಸು ಕೊಡುವುದಿಲ್ಲ ಎಂದು ಕೇಳಿದ್ದೇನೆ. ಇದನ್ನೆಲ್ಲಾ ಪರಿಶೀಲನೆ ಮಾಡಬೇಕು ಎಲ್ಲೆಲ್ಲಿ ರೈತರ ಶೋಷಣೆ ಆಗುತ್ತದೆಯೋ ಅದನ್ನು ಆಯಾಯಾ ಹಂತದಲ್ಲಿ ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕುರಿತು ಬಿಗಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ರೇಷ್ಮೆ ವಿನಿಮಯ ಕೇಂದ್ರದಲ್ಲಿ ಬೇರೆ ಒಬ್ಬರ ರೇಷ್ಮೆಯನ್ನು, ಮತ್ತೊಬ್ಬರು ಮಾರಿ ಅದು ಪೋಲೀಸ್ ಸ್ಟೇಶನ್‌ಗೆ ಕಂಪ್ಲೆಂಟ್ ಹೋಗಿ ಕೊನೆಗೆ ಏನೋ ಏನೋ ಮಾಡಿ ಸರಿಪಡಿಸಿಕೊಂಡು ಎನ್ನತಕ್ಕಂತಾದ್ದನ್ನು ನಾವು ಕೇಳಿದ್ದೇವೆ. ಅದರ ಬಗ್ಗೆ ತಮಗೆ ವಿವರಗಳನ್ನು ಕೊಡುತ್ತೇನೆ, ನಾನು ಯಾರ ಮೇಲೆ ಅಪಾದನೆ ಮಾಡುತ್ತೇನೆಯೋ ಅವರು ಇಲ್ಲಿ ಇಲ್ಲದಿರುವುದರಿಂದ ಅಪಾದನೆ ಮಾಡುವುದು ಸರಿಯಲ್ಲ, ಅದರ ಬಗ್ಗೆ ತಮ್ಮ ಚೆಂಬರ್‌ಗೆ ಬಂದು ಅದರ ವಿವರವನ್ನು ಕೊಡುತ್ತೇನೆ ಅದನ್ನು ತಾವುಗಳು ವಿಚಾರಣೆ ಮಾಡಬೇಕು. ಒಟ್ಟಿನಲ್ಲಿ ಎಲ್ಲಾ ಸೌಲಭ್ಯಗಳ ಬಗ್ಗೆ ಹಾಗೂ ನಾನು ಕೊಟ್ಟಂತಹ ಸಲಹೆಗಳ ಬಗ್ಗೆ ಸೂಕ್ತ ರೀತಿಯಲ್ಲಿ ಕ್ರಮತೆಗೆದುಕೊಂಡು ರೇಷ್ಮೆ ಬೆಳೆಗಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು, ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೫-೦೦ ಪಿ. ಎಂ.

ಶ್ರೀ ಎಸ್. ಜಿ. ನಂಜಯ್ಯನಮಠ್ (ಗುಳ್ಳೆದಗುಡ್ಡ).—ಮಾನ್ಯ ಅಧ್ಯಕ್ಷರೇ ಕೈಗಾರಿಕೆ ಬಗ್ಗೆ ಈಗಾಗಲೇ ನನ್ನ ಹಿರಿಯ ಸದಸ್ಯರಾದಂಥ ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್‌ರವರು ಕೈಗಾರಿಕಾ ಸೂಚನೆಯ ಬಗ್ಗೆ, ನೀತಿ ನಿಧಾನಗಳ ಬಗ್ಗೆ ಬಹಳ ವಿಷದವಾಗಿ ಸುಮಾರು ಒಂದೂವರೆ ಗಂಟೆಗಳ ಕಾಲ ತಮ್ಮ ಅನುಮತಿಯನ್ನು ಪಡೆದುಕೊಂಡು ಚರ್ಚೆ ಮಾಡಿದ್ದಾರೆ. ಆದ್ದರಿಂದ ನಾನು ನೇರವಾಗಿ ಕೈಗಾರಿಕೆಗಳಲ್ಲಿ ಬರತಕ್ಕಂಥ ಎಲ್ಲಾ ಉದ್ದಿಮೆಗಳಿಗೆ ಕೈ ಹಾಕದೆ ಪ್ರಮುಖವಾಗಿ ಬಹಳಷ್ಟು ಜನ ಬದುಕಿ ಜೀವನ ಮಾಡತಕ್ಕಂಥ ಕೈ ಮಗ್ಗದ ವಿಷಯದ ಮೇಲೆ ಹಾಗೂ ಖಾದಿಯ ಮೇಲೆ ಕೆಲವಾರು ಮಾತು

ಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದಲ್ಲಿ ೧,೦೨,ಲಕ್ಷ ಕೈ ಮಗ್ಗಗಳು ಕೆಲಸ ಮಾಡುತ್ತಿವೆ. ಈ ವಿಷಯವನ್ನು ಸರ್ಕಾರ ಈಗಾಗಲೇ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಇದರಲ್ಲಿ ಸುಮಾರು ೬೦ ಸಾವಿರ ಕೈ ಮಗ್ಗಗಳು ಸಹಕಾರ ಸಂಘಗಳ ಮುಖಾಂತರವಾಗಿಯೂ ಇನ್ನು ೨೦ ಸಾವಿರ ಕೈ ಮಗ್ಗಗಳು ಕೈಗಾರಿಕಾ ಅಭಿವೃದ್ಧಿ ಕಾರ್ಪೊರೇಷನ್ ವ್ಯಾಪ್ತಿಯಲ್ಲಿಯೂ ಕೆಲಸ ಮಾಡುತ್ತಿವೆ. ಈ ಎರಡೂ ಸಂಸ್ಥೆಗಳಿಂದ ಜನರಿಗೆ ಇವತ್ತು ಉದ್ಯೋಗಾವಕಾಶ ಸಿಗುತ್ತಿದೆ. ಈ ವಿಷಯದ ಬಗ್ಗೆ ನಾನು ಈ ಸದನದಲ್ಲಿ ಮೇಲಿಂದ ಮೇಲೆ ಚರ್ಚೆ ಮಾಡುವಾಗ ಹಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಮ್ಮ ಮುಖಾಂತರ ತರುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಹೆಚ್ಚು ವಿಷಯಗಳನ್ನು ನಾವು ಪ್ರಸ್ತಾಪ ಮಾಡಿಲ್ಲ ಮತ್ತು ಹೆಚ್ಚು ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಕೈ ಹಾಕಿಲ್ಲ ಎನ್ನತಕ್ಕಂಥ ಮಾತನ್ನು ಸಹ ಹೇಳಬೇಕಾಗಿದೆ. ಇದರಲ್ಲಿ ಮುಖ್ಯವಾಗಿ ಇರತಕ್ಕಂಥ ವಿಷಯವೇದರೆ ಕೈ ಮಗ್ಗಗಳಿಗೆ ಸಹಕಾರ ಸಂಘದಿಂದ ಗ್ರಾಹಕರಿಗ್ರೆ ಪಾವತಿಯಾಗಿರತಕ್ಕಂಥ ರಿಬೇಟ್. ಇವತ್ತು ನೇಕಾರರ ಸಹಕಾರ ಸಂಘಗಳಿಗೆ ಒಂದು ಕೋಟಿ ರೂಪಾಯಿಗಳ ರೀಬೆಟ್ ಬಿಡುಗಡೆ ಮಾಡಬೇಕಾದಂಥ ಪರಿಸ್ಥಿತಿ ಇದೆ. ಇದುವರೆವಿಗೂ ಸರ್ಕಾರದವರು ನೇಕಾರರ ಸಹಕಾರ ಸಂಘಗಳಿಗೆ ಕೊಡಬೇಕಾದಂಥ ರಿಬೇಟ್ ಅನ್ನು ಬಿಡುಗಡೆ ಮಾಡಿಲ್ಲ, ಇದಕ್ಕೆ ಕಾರಣವೇನು ? ಈ ಬಗ್ಗೆ ಸರ್ಕಾರದಿಂದ ಒಂದು ಆರ್ಡರ್ ಆದ ತಕ್ಷಣ ಸಹಕಾರ ಸಂಘದವರು ಗ್ರಾಹಕರಿಗೆ ಅವರು ಕೊಡಬೇಕಾಗಿದ್ದಂದಂತಹ ರಿಬೇಟ್ ಅನ್ನು ಪಾವತಿ ಮಾಡಿಬಿಟ್ಟಿದ್ದಾರೆ. ಆದರೆ ಸರ್ಕಾರದವರು ಸಹಕಾರ ಸಂಘಗಳಿಗೆ ಪಾವತಿ ಮಾಡಿ ಎಂದು ಹೇಳಿ ಅಡ್ವಾನ್ಸ್ ಹಣವನ್ನೇನೂ ಕೊಡುವುದಿಲ್ಲ. ಸರ್ಕಾರದ ಒಂದು ಆಜ್ಞೆಯ ಮೇರೆಗೆ ಸಹಕಾರ ಸಂಘಗಳು ರಿಬೇಟ್ ಅನ್ನು ಗ್ರಾಹಕರಿಗೆ ಕೊಡುತ್ತಾರೆ. ತದನಂತರ ನೇಕಾರರ ಸಹಕಾರ ಸಂಘದವರು ಸರ್ಕಾರದಲ್ಲಿ ಕ್ಲೈಮ್ ಮಾಡಬೇಕು. ಈ ರೀತಿಯ ಪರಿಸ್ಥಿತಿ ಇದ್ದರೂ ಸಹ ಸರ್ಕಾರದವರು ಇದುವರೆವಿಗೂ ನೇಕಾರರ ಸಹಕಾರ ಸಂಘಗಳಿಗೆ ಕೊಡಬೇಕಾದಂಥ ರಿಬೇಟ್ ಕೊಡದಿದ್ದರೆ ಅವರ ಮೂಲ ಬಂಡವಾಳಕ್ಕೆ ಧಕ್ಕೆ ಬರುವುದಿಲ್ಲವೇ ? ಸಹಕಾರ ಸಂಘಗಳು ನಾಶವಾಗುವುದಿಲ್ಲವೇ ? ತಾವು ಏತಕ್ಕೆ ಈ ರೀತಿ ವಿಳಂಬ ನೀತಿಯನ್ನು ಅನುಸರಿಸುತ್ತಿದ್ದೀರಿ ? ಸಹಕಾರ ಸಂಘಗಳ ಮೂಲ ಬಂಡವಾಳಕ್ಕೆ ಕುತ್ತು ಬಂದರೆ ಆ ಸಹಕಾರ ಸಂಘಗಳು ಯಾವ ರೀತಿಯಲ್ಲಿ ನಡೆಯಬೇಕು ಈರೀತಿಯಾದರೆ ಸಹಕಾರ ಸಂಘಗಳಿಗೆ ನೆಲೆಯಾದರೂ ಎಲ್ಲಿರುತ್ತದೆ.? ಈ ರಿಬೇಟ್ ಕೊಡುವಲ್ಲಿ ಸರ್ಕಾರ ಎರಡು ರೀತಿಯ ನೀತಿಯನ್ನು ಇಟ್ಟುಕೊಂಡಿದೆ ಎಂದು ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದು ಯಾವ ರೀತಿ ಎಂದರೆ ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರಿಗೆ ಒಂದು ನೀತಿಯಾದರೆ ಇದನ್ನು ಈ ನೇಕಾರರ ಸಂಘಗಳಿಗೆ ಒಂದು ಪ್ರತ್ಯೇಕ ನೀತಿ. ಸರ್ಕಾರದವರು ಮಲತಾಯಿಯ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಇದನ್ನು ನಾನು ತಮ್ಮ ಮುಖಾತರ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಮತ್ತು ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನಾರವರು ರಿಬೇಟ್ ಅನ್ನು ಗ್ರಾಹಕರಿಗೆ ಕೊಟ್ಟು ತಮಗೆ ಬರಬೇಕಾದಂಥ ಒಂದು ರಿಬೇಟ್ ಅನ್ನು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಸರ್ಟಿಫಿಕೇಟ್ ಮಾಡಿಸಿ ಆ ಸರ್ಟಿಫಿಕೇಟ್ ಅನ್ನು ಅವರು ಕಳುಹಿಸಿಕೊಡುವಂತಹ ಅರ್ಜಿಯ ಜೊತೆಯಲ್ಲಿ ಕಳುಹಿಸಿ ಕೊಟ್ಟು ತಕ್ಷಣ ಆ ಎಂ. ಡಿ. ಯವರಿಗೆ ರಿಬೇಟ್ ಬಿಡುಗಡೆ ಮಾಡುತ್ತಾರೆ. ಆದರೆ ಇದೇ ಒಂದು ಸೌಲಭ್ಯವನ್ನು ತಾವು ಸಹಕಾರ ಸಂಘಗಳಿಗೆ ಎತಕ್ಕೆ ಕೊಡುತ್ತಿಲ್ಲ ಇದರಿಂದ ಅವರು ನಿಮ್ಮ ಬಗ್ಗೆ ವಿಶ್ವಾಸ ಕಳೆದುಕೊಂಡಿದ್ದಾರೆ. ಸುಮಾರು ೬೦ ಸಾವಿರ ಕೈಮಗ್ಗಗಳನ್ನು ಇವರು ನಡೆಸುತ್ತಿದ್ದಾರೆ. ಅವರು ಹಾಕಿರತಕ್ಕಂಥ ನಾಲ್ಕು ಷರತ್ತುಗಳನ್ನು ಸಹ ಈ ನೇಕಾರರ ಸಹಕಾರ ಸಂಘಗಳವರು ಪೂರೈಸಿದ್ದಾರೆ. ಆ ನಾಲ್ಕು ಷರತ್ತುಗಳು ಯಾವುವೆಂದರೆ ಉತ್ಪಾದನೆ ಮತ್ತು ಮಾರಾಟದಲ್ಲಿ ಸಂಘಟನೆ ಇರಬೇಕು ಮತ್ತು ತ್ರಿಫ್ಟ್ ಸ್ಕೀಮ್‌ನಲ್ಲಿ ಸದಸ್ಯರಾಗಿರಬೇಕು ಮೂರನೆಯದು ಕೇಂದ್ರ ಸರ್ಕಾರದ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರಬೇಕು ಮತ್ತು ನಾಲ್ಕನೆಯದು ಮಾರಾಟದ ಮಾಲಿನಿಂದ ಬಂದಂಥ ರೊಕ್ಕ ಬ್ಯಾಂಕಿನಲ್ಲಿ ಜಮಾ ಆಗಿರಬೇಕು. ಈ ಷರತ್ತುಗಳನ್ನೆಲ್ಲಾ ಪೂರೈಸಿದ್ದಾರೆ. ಈ ಷರತ್ತುಗಳನ್ನು ಡಿ. ಜಿ. ಎಂ. ರವರ ಸಿಬ್ಬಂದಿ ಬಂದು ನೋಡಿ ಪರಿಶೀಲನೆ ಮಾಡಿ ತಮ್ಮ ವರದಿಯನ್ನು ಜಿ. ಎಂ. ರವರಿಗೆ ಕಳುಹಿಸಿ ಕೊಟ್ಟಿದ್ದರೂ ಸಹ ಇದುವರೆಗೆ ಏತಕ್ಕೆ ಈ ನೇಕಾರರ ಸಹಕಾರ ಸಂಘಗಳಿಗೆ ತಾವು ರಿಬೇಟ್ ಕೊಟ್ಟಿಲ್ಲ? ಈ ಮಾತನ್ನು ನಾನು ವಿಷಾದದಿಂದ ಹೇಳಬೇಕಾಗಿದೆ. ಈ ಸಹಕಾರ ಸಂಘಗಳಿಂದ ಸುಮಾರು ಎರಡು ಲಕ್ಷ ರೂಪಾಯಿಗಳನ್ನು ಗ್ರಾಹಕರಿಗೆ ರಿಬೇಟ್ ಕೊಟ್ಟುಬಿಟ್ಟಿದ್ದಾರೆ. ಇದರಿಂದ ಅವರ ಮೂಲ ಬಂಡವಾಳಕ್ಕೆ ಚ್ಯುತಿ ಬಂದಂತಾಗಿಲ್ಲವೆ ? ಈ ರೀತಿಯಾದರೆ ಸೀರೆ ನೇಕಾರರ ಪರಿಸ್ಥಿತಿ ಏನಾಗುತ್ತದೆ?

ಈ ಹಿಂದೆ ಈ ರೀತಿ ವಿಳಂಬವಾಗುತ್ತಿರಲಿಲ್ಲ, ಈಗ ಮಾತ್ರ ಈ ರೀತಿ ವಿಳಂಬವಾಗುತ್ತಿದೆ. ಬಹುಶಃ ಈ ಹಿಂದೆ ಈ ನೇಕಾರರ ಸಹಕಾರ ಸಂಘಗಳಿಗೆ ನೇರವಾಗಿ ಸಂಪರ್ಕವಿರುವಂತೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಒಬ್ಬ ಅಡಿಷನಲ್ ಡೈರೆಕ್ಟರ್ ಪೋಸ್ಟ್ ನೇಮಕ ಮಾಡಿದ್ದರು. ಅವರು ಈ ವ್ಯವಹಾರಗಳನ್ನೆಲ್ಲಾ ನೋಡಿಕೊಳ್ಳುತ್ತಿದ್ದರು. ಈಗಲೂ ಕೂಡ ಇನೇ ವ್ಯವಸ್ಥೆ ಇದೆ, ಆದರೆ ಆ ವ್ಯಕ್ತಿ ಈ ಸಹಕಾರ ಸಂಘಗಳಲ್ಲಿ ಸಾಕಷ್ಟು ಅನುಭವ ಪಡೆದುಕೊಂಡಿದ್ದಂತಹ ವ್ಯಕ್ತಿ. ನಾನು ಸಹ ಆ ವ್ಯಕ್ತಿಯನ್ನು ಬಹಳ ವರ್ಷಗಳಿಂದ ನೋಡಿದ್ದೇನೆ. ನಾನು ಈ ಬಗ್ಗೆ ಯಾವುದೇ ಆಪಾದನೆಯನ್ನು ಈ ಹಿಂದೆ ಮಾಡಿರಲಿಲ್ಲ. ಆದರೆ ಈಗ ಈ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಹೊಸದಾಗಿ ಒಬ್ಬ ನಿರ್ದೇಶಕರು ಬಂದಿದ್ದಾರೆ, ಅವರು ಈ ಹಿಂದೆ ಇದ್ದಂತಹ ನೀತಿಯನ್ನೇ ಬದಲಾವಣೆ ಮಾಡಿಬಿಟ್ಟಿದ್ದಾರೆ. ಇದರ ಔಚಿತ್ಯವೇನು ? ಈ ರೀತಿ ಬದಲಾವಣೆ ಮಾಡತಕ್ಕಂಥ ಅವಶ್ಯಕತೆ ಇತ್ತೆ ? ಈ ವಿಷಯವನ್ನು ನಾನು ಬಹಳ ಗಂಭೀರವಾಗಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸುಮಾರು ಒಂದು ಕೋಟಿ ರೂಪಾಯಿಗಳ ರಿಬೇಟ್ ಈ ನೇಕಾರರ ಸಹಕಾರ ಸಂಘಗಳಿಗೆ ಬರಬೇಕಾಗಿದೆ. ಈ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿದ್ದಂತಹ ಒಬ್ಬ ಅಡಿಶನಲ್ ಡೈರೆಕ್ಟರ್‌ರವರ ಅಧಿಕಾರ ವ್ಯಾಪ್ತಿಯನ್ನು ಕಡಿಮೆ ಮಾಡಿದ್ದಾರೆ. ಈ ಕೈಮಗ್ಗದ ಉದ್ದಿಮೆಗಳನ್ನು ನೋಡಿಕೊಳ್ಳುವ ಸಲುವಾಗಿಯೇ ಈ ಅಡಿಶನಲ್ ಡೈರೆಕ್ಟರ್ ಹುದ್ದೆ ಇತ್ತು. ಅದಕ್ಕೆ ಒಂದು ಆರ್ಡರ್ ಸಹ ಇದೆ ಅದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. The Additional Director can execise all financial powers so far as Industrial Co-operative Societies are concerned. ಹೀಗಿದ್ದರೂ ಕೂಡ ಈ ಒಂದು ಇಲಾಖೆ ಯಾವುದೇ ಅನುಭವ ಇಲ್ಲದೆ ಇರುವಂತಾದ್ದು ಸ್ಪಷ್ಟವಾಗಿರುವುದು ಕಂಡುಬರುತ್ತದೆ. ಮೂಲ ವ್ಯವಸ್ಥೆಯಲ್ಲಿ ಬದಲಾವಣೆ ತರುವುದಕ್ಕೆ ಕಾರಣವೇನು ? ಸುಮಾರು ೨೦-೩೦ ವರ್ಷಗಳಿಂದ ಸಹಕಾರ ಸಂಘಗಳ ಕಷ್ಟಕಾರ್ಪಣ್ಯಗಳನ್ನು ಸಹಕಾರ ಸಂಘಗಳ ದುಃಖ ದುಮ್ಮಾನಗಳನ್ನು ನೇರವಾಗಿ ತಿಳಿದುಕೊಂಡಿರತಕ್ಕಂಥ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಡಿಶನಲ್ ಡೈರೆಕ್ಟರ್‌ರವರೇ ಅನುಕೂಲ ಮಾಡಿಕೊಡುವಂತಾದರೆ ಒಳ್ಳೆಯದೆಂದು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಹಾಗೂ ಈ ಒಂದು ದಿಶೆಯಲ್ಲಿ ಇವತ್ತು ಕೈಮಗ್ಗ, ಬಹಳ ಶೀಘ್ರವಾಗಿ, ಹೆಚ್ಚು ಚುರುಕಾಗಿ ಆಗುವಂತೆ ನೋಡಿಕೊಳ್ಳಬೇಕು. ಹಾಗೂ ಹೆಚ್ಚು ಸುಧಾರಣಾ ರೂಪದಲ್ಲಿ ತರಬೇಕು. ಇದರಲ್ಲಿ ಎಷ್ಟು ಜನ ಅವಲಂಬಿತರಾಗಿದ್ದಾರೆ, ಅವರೆಲ್ಲರ ಹಿತಾಸಕ್ತಿಯನ್ನು ಪೂರೈಸಿಕೊಂಡು ಬರತಕ್ಕ ನೇಕಾರರ ಸಂಘಗಳ ಕಾರ್ಯವ್ಯಾಪ್ತಿ ಚುರುಕು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತೇನೆ. ಹೋದಸಾರಿ ಕೂಡ ನಾನು ಈ ಸೂಚನೆಯನ್ನು ತಂದಿದೆ, ಕೈಮಗ್ಗಗಳನ್ನು ನೋಡಿಕೊಳ್ಳುವುದಕ್ಕೆ ಪ್ರತ್ಯೇಕವಾದ ನಿರ್ದೇಶನಾಲಯಗಳನ್ನು ರಚಿಸಬೇಕೆಂದು ಹೇಳಿದ್ದೆ. ಕೈಗಾರಿಕೆ ಮತ್ತು ವಾಣಿಜ್ಯ ಇವೆರಡನ್ನೂ ಸೇರಿಸಿಕೊಂಡಿರುವುದರಿಂದ, ಇದರ ಅಭಿವೃದ್ಧಿಗೆ ನಿಜವಾಗಿಯೂ ವಿಳಂಬವಾಗಿದೆಯೆಂದು ಸ್ಪಷ್ಟವಾಗಿ ಹೇಳಿದ್ದೆ. ಒಟ್ಟು ಒಂದು ಲಕ್ಷದ, ಎರಡು ಸಾವಿರದ ಎಂಟುನೂರ ಮೂವತ್ನಾಲ್ಕು ಕೈಮಗ್ಗಗಳು ಈ ರಾಜ್ಯದಲ್ಲಿದ್ದು, ಅವುಗಳಲ್ಲಿ ೬೦ ಸಾವಿರ ಕೈಮಗ್ಗಗಳು ನೇಕಾರರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿವೆ, ೨೦ ಸಾವಿರ ಕೈಮಗ್ಗಗಳು ಕೆ.ಹೆಚ್.ಡಿ.ಸಿ. ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿವೆ. ಇಷ್ಟೊಂದು ರೀತಿಯಲ್ಲಿ ಲಕ್ಷಗಟ್ಟಲೆ ಇಲ್ಲಿ ಉತ್ಪಾದನೆ, ಅಭಿವೃದ್ಧಿ ಇದ್ದರೂ, ಇದಕ್ಕೆ ಪ್ರತ್ಯೇಕವಾದ ನಿರ್ದೇಶನಾಲಯವಿಲ್ಲ. ಆದ್ದರಿಂದ ಇದಕ್ಕೆ ಪ್ರತ್ಯೇಕವಾದ ನಿರ್ದೇಶನಾಲಯವನ್ನು ತೆರೆದು ಒಬ್ಬ ಡೈರೆಕ್ಟರನ್ನು ನೇಮಿಸಿದರೆ, ಉತ್ಪಾದನೆಯ ಗುಣಮಟ್ಟ ಮತ್ತು ಅಲ್ಲಿರತಕ್ಕಂಥ ಕೆಲವು ಕಷ್ಟನಷ್ಟಗಳು ತಪ್ಪುತ್ತವೆ, ಮತ್ತು ಈ ವಿಚಾರದಲ್ಲಿ ಯೋಜನೆಗಳು ಮತ್ತು ಹೆಚ್ಚಿನ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದಕ್ಕಾಗುತ್ತದೆ. ಈ ಯೋಜನೆಯನ್ನು ಅಭಿವೃದ್ಧಿಗೊಳಿಸುವಲ್ಲಿ ಯಶಸ್ಸು ಸಾಧಿಸಬೇಕು. ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ಈ ಒಂದು ಸೂಚನೆಯನ್ನು ಕೊಡುತ್ತೇನೆ. ಕೇವಲ ನಮ್ಮ ರಾಜ್ಯದಲ್ಲಿ ಇದನ್ನು ಮಾಡಿ ಎಂದು ಹೇಳುತ್ತಿಲ್ಲ. ಈಗಾಗಲೇ ಪ್ರತ್ಯೇಕವಾದ ನಿರ್ದೇಶನಾಲಯ ತಮಿಳುನಾಡಿನಲ್ಲಿ ಇದೆ, ಆಂಧ್ರದಲ್ಲಿದೆ, ಮಹಾರಾಷ್ಟ್ರದಲ್ಲಿದೆ. ಈ ಮೂರು ರಾಜ್ಯಗಳಲ್ಲಿ ಮಾಡಿದ ಮೇಲೆ. ಅದೇ ಒಂದು ಹಿತಾಸಕ್ತಿಯ ಮೇಲೆ, ನಮ್ಮ ರಾಜ್ಯದಲ್ಲೂ ಈ ನೀತಿಯನ್ನು ಏಕೆ ತರಬಾರದು ಎಂಬುದನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಈ ವಿಚಾರ ಮಾನ್ಯ ಬಾಪೂಗೌಡರೂ ಇದ್ದಾಗ ಕೂಡ ಪ್ರಸ್ತಾಪವಾಗಿತ್ತು. ಅವರು ಇದನ್ನು ಮಾಡುವ ಹಂತದಲ್ಲಿದ್ದರು. ಆದರೆ

ರಾಜಕೀಯದ ಏರುಪೇರಿನಿಂದ ಇದು ಆಗಲಿಲ್ಲ, ಪ್ರತ್ಯೇಕ ನಿರ್ದೇಶನಾಲಯುವನ್ನು ತರಬೇಕೇ ಬೇಡವೇ ಎಂಬುದನ್ನು ಮಾತ್ರ ಯೋಚನೆ ಮಾಡಬೇಡಿ. ಇದರ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ ಮಾಡಬೇಡಿ. ಮಾನ್ಯ ಹಿರಿಯರಾದ ಜೆ. ಹೆಚ್. ಪಟೇಲರ್ ಅವರನ್ನು ಭೇಟಿ ಮಾಡಿದರೆ ಒಳ್ಳೆಯದು. ಎಲ್ಲರ ಜೊತೆಯಲ್ಲಿ ಚರ್ಚೆ ಮಾಡಿದರೆ, ಅಧಿಕಾರ ಮೊಟಕು ಆಗುತ್ತದೆ, ಬೇರೆ ಏನೋ ಸೃಷ್ಟಿ ಮಾಡಿ, ಇದು ಆಗದಂತೆ ಮಾಡಬಹುದು. ನಮ್ಮ ರಾಜ್ಯದಲ್ಲಿ ಇದರ ಅವಶ್ಯಕತೆ ಬಹಳ ಇದೆ. ಆದಷ್ಟು ತೀವ್ರವಾಗಿ ಇದನ್ನು ಮಾಡಬೇಕು. ಮಾನ್ಯ ದೇವರಾಜ ಅರಸರ ಕಾಲದಲ್ಲಿ ಇದಕ್ಕೆ ಪ್ರತ್ಯೇಕವಾದ ಮಂತ್ರಿಯನ್ನೇ ನೇಮಕ ಮಾಡಿದ್ದರು. ಆದ್ದರಿಂದ ಪ್ರತ್ಯೇಕವಾದ ಒಬ್ಬ ಅಧಿಕಾರಿ, ನಿರ್ದೇಶನಾಲಯದೊಳಗೆ ಇದ್ದರೆ ಈ ಕೈಮಗ್ಗದ ಕೆಲಸಗಳು ತ್ವರಿತಗತಿಯಲ್ಲಿ ಆಗುತ್ತವೆ ಮತ್ತು ಸಮಸ್ಯೆಗಳು ನಿವಾರಣೆಯಾಗುತ್ತದೆಂದು ಹೇಳುತ್ತೇನೆ. ಆದುದರಿಂದ ಆದಷ್ಟು ತೀವ್ರವಾಗಿ ನಿರ್ದೇಶನಾಲಯವನ್ನು ರಚಿಸಿದರೆ ಒಳ್ಳೆಯದು.

ಅಧ್ಯಕ್ಷರು.—ತಾವು ದಯಮಾಡಿ ಮುಗಿಸಿ.

ಶ್ರೀ ಎಸ್. ಜಿ.. ನಂಜಯ್ಯನಮಠ್,—ಅಧ್ಯಕ್ಷರೇ, ತಾವು ನಮಗೆ ವೇಳೆಯನ್ನು ಕೊಡಬೇಕು. ಈ ಯೋಜನೆಯನ್ನು ಮಾಡಿದರೆ, ಆರೋಗ್ಯಕರವಾದ ಬೆಲೆ ಬರಬಹುದೆಂದು ನನ್ನ ಸ್ಪಷ್ಟವಾದ ವಿನಂತಿ. ಪ್ರತ್ಯೇಕ ನಿರ್ದೇಶನಾಲಯುವನ್ನು ಮಾಡುವಾಗ, ನನ್ನ ವಯಸ್ಸಿನ ಐ.ಎ.ಎಸ್. ಅಧಿಕಾರಿಯನ್ನು ತರುವುದು ಬೇಡ. ಸಹಕಾರಿ ರಂಗದೊಳಗೆ, ಕೈಮಗ್ಗ ರಂಗದಲ್ಲಿ, ಸುಮಾರು ವರ್ಷಗಳು ಸೇವೆ ಸಲ್ಲಿಸಿದಂಥ ಹಿರಿಯ ಅಧಿಕಾರಿಗಳನ್ನು ನೇಮಿಸಿದರೆ, ನೀವು ಹಾಕಿಕೊಂಡಿರತಕ್ಕ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ. ಈ ಒಂದು ತಿಳುವಳಿಕೆಯನ್ನು ತಮ್ಮ ಮುಖಾಂತರ ವಾಗಿ ಸರ್ಕಾರಕ್ಕೆ ಕೊಡಬಯಸುತ್ತೇನೆ. ಕೆ.ಹೆಚ್.ಡಿ.ಸಿ. ಬ್ರಾಂಚುಗಳನ್ನು ನೇಕಾರರ ಸಹಕಾರ ಸಂಘಗಳು ಎಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿವೆ ಅಲ್ಲಿ, ಇವುಗಳನ್ನು ತರುವುದು ಬೇಡವೆಂದು ನನ್ನ ಇಷ್ಟ. ಎಲ್ಲಿ ಅನಾರೋಗ್ಯಕರವಾದ ಸಹಕಾರ ಸಂಘಗಳು ಇವೆ, ಅಲ್ಲಿ ಬೇಕಾದರೆ ಈ ಬ್ರಾಂಚುಗಳನ್ನು ತೆರೆಯಲಿ. ಕೆ.ಹೆಚ್.ಡಿ.ಸಿ. ಅವರಂತೆ, ಹೆಚ್ಚು ಕೂಲಿ ಕೊಡುವಂಥ ವ್ಯವಸ್ಥೆಯನ್ನು ನೇಕಾರರ ಸಹಕಾರ ಸಂಘಗಳು ಮಾಡುವಾಗ, ಕೆ.ಹೆಚ್.ಡಿ.ಸಿ. ಬ್ರಾಂಚುಗಳನ್ನು ಅಲ್ಲಿ ತೆರೆದರೆ, ಅಷ್ಟೊಂದು ಆರೋಗ್ಯಕರವಾದ ಅಭಿವೃದ್ಧಿ ಆಗುವುದಿಲ್ಲ. ನೇಕಾರರ ಸಹಕಾರ ಸಂಘಗಳು ಸಾಕಷ್ಟು ಇವೆ. ನೇಕಾರರಿಗೆ, ನೇಕಾರರ ಸಹಕಾರ ಸಂಘಗಳಿಂದ ಲಾಭವನ್ನು ಪಡೆಯಲು ಅನುಕೂಲವಾಗುತ್ತದೆ. ನನ್ನ ಕ್ಷೇತ್ರದಲ್ಲಿ ಕಮತಗಿ, ಗುಳೇದಗುಡ್ಡ, ಗೂಡೂರು ಇಲ್ಲಿ ಸಾವಿರಗಟ್ಟಲೆ ನೇಕಾರರು ಇದ್ದಾರೆ, ಅವರಿಗೆ ಮನೆಗಳು ಇಲ್ಲ. ಹುಡ್ಕೋ ಸ್ಕೀಮಿನ ಅಡಿಯಲ್ಲಿ ನಿವೇಶನಗಳನ್ನು ಕೊಟ್ಟು, ಮನೆಗಳನ್ನು ಕಟ್ಟಿಕೊಟ್ಟು ಅನುಕೂಲ ಮಾಡಬೇಕು. ನನ್ನ ಕ್ಷೇತ್ರದಲ್ಲಿನ ಅಮೀನಗಡದಲ್ಲಿ ಹೊಸ ಕಟ್ಟಲು ಲ್ಯಾಂಡ್ ಆರ್ಮಿ ಯವರಿಗೆ ಕೊಟ್ಟಿದ್ದಾರೆಂದು ತಿಳಿದು ಬಂದಿವೆ. ೪-೫ ತಿಂಗಳಿಂದ ಕಟ್ಟಡ ಪ್ರಾರಂಭ ಮಾಡಿಲ್ಲ, ಇದು ಯಾವ ಹಂತದಲ್ಲಿ ವಿಳಂಬವಾಗಿದೆಯೋ ಗೊತ್ತಿಲ್ಲ. ಆದಷ್ಟು ತೀವ್ರವಾಗಿ ಕಟ್ಟಡ ನಿರ್ಮಾಣ ಮಾಡಬೇಕು. ಆದಷ್ಟು ತೀವ್ರವಾಗಿ ಮಾಡಿ, ಕಟ್ಟಡದ ಉದ್ಘಾಟನೆಯನ್ನು ತಾವೇ ಮಾಡಿದರೆ ಒಳ್ಳೆಯದೆಂದು ಕೇಳಿಕೊಳ್ಳುತ್ತೇನೆ. ಕೆ. ಹೆಚ್. ಡಿ. ಸಿ. ನವರು ಈ ಹಿಂದೆ ಕೇವಲ ಎರಡು ರೂಪಾಯಿ ಕೂಲಿಯನ್ನು ಹೆಚ್ಚಿಸಿದ್ದಾರೆ. ಬೆಲೆಗಳು ಏರಿರುವಾಗ ಹಾಗೂ ಮೂಲ ಬಂಡವಾಳ ಇಲ್ಲದ ನೇಕಾರರ ಸ್ಥಿತಿ ಶೋಚನೀಯ. ಇವರಿಗೆ ಬೇರೆ ಯಾವ ಆದಾಯವೂ ಇರುವುದಿಲ್ಲ. ಆದುದರಿಂದ ಒಂದು ಸೀರೆಗೆ, ಉತ್ಪಾದನೆಯಲ್ಲಿ ೫ ರೂಪಾಯಿ ಕೂಲಿಯನ್ನು ಹೆಚ್ಚು ಮಾಡಿದರೆ ಅನುಕೂಲವಾಗುತ್ತದೆ. ಇನ್ನು ಜನತಾ ಸೀರೆಗೆ ಈಗ ೭ ರೂಪಾಯಿ ಕೂಲಿ ಇರುವುದನ್ನು ೧೦ ರೂಪಾಯಿಗಳಿಗೆ ಹೆಚ್ಚು ಮಾಡಬೇಕು. ಹಾಗೂ ಈ ಜನತಾ ಸೀರೆಯ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ಎರಡು ಸೀರೆ ಕೊಡುವ ಬದಲು ಒಂದನ್ನೇ ಕೊಡಿ, ದಪ್ಪ ಇರುವಂಥ ಸೀರೆಯನ್ನು ಕೊಡಿ. ಇಲ್ಲದೇ, ಹೋದರೆ, ಯಾರು ಜನತಾ ಸೀರೆ ಉಡುತ್ತಾರೆ ಅವರು ಲಂಗಗಳನ್ನು ಹಾಕಿಕೊಳ್ಳಬೇಕೆಂದು ಕಾನೂನು ಮಾಡಬೇಕಾಗುತ್ತದೆ. ಆದುದರಿಂದ ಮೈ ಮುಚ್ಚುವಂಥ ಜನತಾ ಸೀರೆಯನ್ನು ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಲಿವಿಂಗ್ ಕಂ ವರ್ಕ್ ಷೆಡ್‌ಗಳಿಗೆ ಸಬ್ಸಿಡಿ ಮೂರು ಸಾವಿರ ಕೊಡುತ್ತಿದ್ದಾರೆ. ಈ ಮೂರು ಸಾವಿರಕ್ಕೆ ಬಡ್ಡಿ ಹಾಕುವುದನ್ನು ನೋಡಿದರೆ, ನೇಕಾರರಿಗೆ ಭಾರವಾಗುತ್ತದೆ. ಆದ್ದರಿಂದ ದಯಮಾಡಿ, ಸರ್ಕಾರ ಸಬ್ಸಿಡಿಯನ್ನು ಐದು ಸಾವಿರಕ್ಕೆ ಏರಿಸಿದರೆ ಒಳ್ಳೆಯದು. ಇನ್ನು ನೂಲಿನ ಬೆಲೆಯು ಗಗನಕ್ಕೆ ಏರಿದೆ, ನೂಲನ್ನು ಖರೀದಿ ಮಾಡುವ ವ್ಯವಸ್ಥೆಯಲ್ಲಿ ನೇಕಾರರಿಗೆ ರಿಬೇಟ್

ವ್ಯವಸ್ಥೆ ಮಾಡಿ ಎಂದು ನಾನು ಹೋದಸಾರಿಯೇ ಕೇಳಿಕೊಂಡಿದ್ದೆ. ಆದುದರಿಂದ ಈ ಬಾರಿ ಅಲ್ಪ ಪ್ರಮಾಣದಲ್ಲಾದರೂ ರೀಬೇಟ್ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೇಂದ್ರ ರೇಷ್ಮೆ ಮಂಡಲಿಯವರು ರೇಷ್ಮೆಯನ್ನು ಖರೀದಿಸಿ ಮಾರುತ್ತಿದ್ದಾರೆ. ಇದರಿಂದ ಖಾಸಗೀ ಜನರು ಶ್ರೀಮಂತರಾಗುತ್ತಿದ್ದಾರೆ ಆದುದರಿಂದ ನಾನು ಹೇಳುವುದೇನೆಂದರೆ ಈ ಕೇಂದ್ರ ರೇಷ್ಮೆ ಮಂಡಲಿಯವರು ಸಮರ್ಥವಾಗಿ ನಡೆಯುತಕ್ಕಂಥಾ ಸಹಕಾರ ಸಂಘಗಳಿಗೆ ಇಂತಿಷ್ಟು ಕೊಡಬೇಕೆಂದು ಮೀಸಲಾಗಿಟ್ಟರೆ ಬಡ ನೇಕಾರರಿಗೆ ಅನುಕೂಲವಾಗುತ್ತದೆ. ಈ ಯೋಜನೆ ಸಾಧುವಾದುದು ಎಂದು ನನ್ನ ಅಭಿಪ್ರಾಯ ದಯವಿಟ್ಟು ಸರ್ಕಾರ ಹೀಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ತಾವು ಒಕ್ಕಲಿಗರಿಗೆ ೩೫ ಕೋಟಿ ರೂಪಾಯಿಯಷ್ಟು ಬಡ್ಡಿ ಸೂಟಿ ಕೊಟ್ಟಿದ್ದೀರಿ ನಾನು ಒಕ್ಕಲಿಗರಿಗೆ ಕೊಡುವುದು ಬೇಡ ಅನ್ನುವುದಿಲ್ಲ ನಾನು ಇದನ್ನು ಸ್ವಾಗತ ಮಾಡುತ್ತೇನೆ ಅವರಿಗೆ ಕೊಟ್ಟಂಥಾ ರೀತಿಯಲ್ಲೇ ಈ ನೇಕಾರರಿಗೂ ಸ್ವಲ್ಪ ರಿಬೇಟ್ ಕೊಟ್ಟರೆ ಅವನಿಗೂ ಒಂದು ಆಸಕ್ತಿ ಇರುತ್ತದೆ ಕೇವಲ ಎರಡು ಮಗ್ಗಗಳನ್ನು ಇಟ್ಟುಕೊಂಡಿರತಕ್ಕಂಥ ನೇಕಾರರಿಗೂ ಸಹ ಒಕ್ಕಲಿಗನಿಗೆ ಯಾವ ರೀತಿಯಾದ ಒಂದು ನೀತಿ ಸಂಹಿತೆ ಇದೆಯೋ ಅದೇ ರೀತಿಯಾಗಿ ಅವರಿಗೂ ಇರುತ್ತದೆ. ಅವರು ಎರಡು ಮಗ್ಗ ಇಟ್ಟುಕೊಂಡರೂ ಕೂಡ ಅವರಿಗೆ ಲಾಳಿ, ಕಟ್ಟಿ ಮುಂತಾದ ಉಪಕರಣಗಳು ಬೇಕಾಗುತ್ತವೆ ಈ ಪವರ್‌ಲೂಂ ಮೇಲೆ ಅವರು ತೆಗೆದುಕೊಂಡಿರುವ ಸಾಲದ ಬಡ್ಡಿ ಲೆಕ್ಕ ಹಾಕಿದರೆ ೪೦-೫೦ ಲಕ್ಷ ರೂಪಾಯಿ ಹಳೇ ಬಡ್ಡಿಯನ್ನೇ ಕೊಡಬೇಕಾಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಈ ಒಕ್ಕಲಿಗರಿಗೆ ಸೂಟಿ ಬಡ್ಡಿ ೩೫ ಕೋಟಿ ರೂಪಾಯಿ ಹೇಗೆ ರಿಬೇಟ್ ಕೊಟ್ಟಿದ್ದೀರೋ ಅದೇ ರೀತಿಯಾಗಿ ಈ ನೇಕಾರರಿಗೂ ಸಹ ಅವರು ತೆಗೆದುಕೊಂಡಿರುವ ಸಾಲಿನ ಮೇಲಿನ ಬಡ್ಡಿಗೆ ಅವರು ತಮಗೆ ಬೇಕಾದ ಉಪಕರಣಗಳನ್ನು ಕೊಂಡುಕೊಳ್ಳ ಬೇಕಾಗಿರುವುದರಿಂದ ಒಂದು ಪರ್ಸೆಂಟ್ ರಿಬೇಟ್ ಕೊಟ್ಟರೂ ಕೂಡ ಆ ನೇಕಾರರಿಗೆ ೩೫-೪೦ ಲಕ್ಷ ರೂಪಾಯಿಯಷ್ಟು ಸೂಟಿ ಸಿಕ್ಕುತ್ತದೆ ತಮಗೆ ಹೇಳಬೇಕಾದರೆ ಪವರ್‌ಲೂಮ್‌ನವರಿಗೆ ಸಾಲದ ಹೊರೆ ಹೇರಳವಾಗಿರುವುದರಿಂದ ಈಗ ಅವರಿಗೆ ಒಂದು ಭಾರೀ ಪೆಟ್ಟು ಬಿದ್ದಂತಾಗಿದೆ. ಆದ್ದರಿಂದ ತಾವು ಎರಡು ಪವರ್‌ಲೂಮ್ ಇಟ್ಟುಕೊಂಡಿರುವವರಿಗೆ ಇಂತಿಷ್ಟು ಸೂಟಿ, ೫ ಪವರ್ ಲೂಮ್ ಹೊಂದಿರತಕ್ಕಂಥಾವರಿಗೆ ಇಂತಿಷ್ಟು ಸೂಟಿ ೧೦ ಪವರ್ ಲೂಮ್ ಇಟ್ಟುಕೊಂಡಿರತಕ್ಕಂಥಾವರಿಗೆ ಇಂತಿಷ್ಟು ಸೂಟಿ ಎಂದು ಅವರಿಗೆ ಸ್ವಲ್ಪ ರಿಬೇಟ್ ತೋರಿಸುವುದಾದರೆ ಅವರಿಗೆ ಸ್ವಲ್ಪ ಬಡ್ಡಿಯನ್ನು ಕಡಿಮೆ ಮಾಡುವ ಹಾಗೆ ರಿಯಾಯಿತಿ ತೋರಿಸಿಕೊಡಬೇಕು ಎಂದು ಹೇಳುತ್ತೇನೆ ಒಕ್ಕಲಿಗರಿಗೆ ಯಾವರೀತಿಯಾಗಿ ಒಂದು ನೀತಿ ಸಂಹಿತೆಯನ್ನು ರೂಪಿಸಿಕೊಂಡಿದ್ದೀರೋ ಬಡ್ಡಿ ರಿಯಾಯಿತಿ ಬಗ್ಗೆ, ಹಾಗೆಯೇ ನೇಕಾರರಿಗೂ ಕೂಡಒಂದು ನೀತಿ ಸಂಹಿತೆಯನ್ನು ರೂಪಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ಸೇಲ್ಸ್‌ಟ್ಯಾಕ್ಸ್ ವಿಚಾರ...

ಅಧ್ಯಕ್ಷರು.—ತಾವು ಬೇಗ ಮುಗಿಸಬೇಕು.

ಶ್ರೀ ಎಸ್. ಜಿ. ನಂಜಯ್ಯನಮಠ್.—ಮುಗಿಸುತ್ತೇನೆ ಈ ರೇಷ್ಮೆ ವ್ಯವಸಾಯದಲ್ಲಿ ನಿರತರಾಗಿರತಕ್ಕಂಥಾವರಿಗೆ ಈ ಸೇಲ್ಸ್‌ಟ್ಯಾಕ್ಸನ್ನು ಅಳವಡಿಸುವುದಾದರೆ, ಇದರ ಬಗ್ಗೆ ತಮಗೆ ಒಂದು ಪ್ರಮುಖವಾದ ವಿಷಯವನ್ನು ಹೇಳಬಯಸುತ್ತೇನೆ. ಅದೇನೆಂದರೆ ಇಲ್ಲಿ ಸೇಲಂ ಮಾದರಿ ಒಂದು ತರಬೇತಿ ಕೇಂದ್ರವನ್ನು ತೆರೆಯುವುದಕ್ಕೆ ತಾವು ಯೋಚಿಸಬೇಕೆಂದು ನಾನು ಒತ್ತಿ ಹೇಳುತ್ತೇನೆ ಇದು ಗಹನವಾದ ವಿಚಾರ ಹಾಗೆ ಮಾಡಿದರೆ ಇದರಿಂದ ಖಾಸಗೀ ಜನರ ಪೈಪೋಟಿ ತಪ್ಪುತ್ತದೆ ಈ ದಿಶೆಯಲ್ಲಿ ತಾವು ಸೇಲಂ ಮಾದರಿ ಒಂದು ತರಬೇತಿ ಕೇಂದ್ರವನ್ನು ೩೫ ಸಾವಿರ ನೇಕಾರರ ಜನಸಂಖ್ಯೆ ಇರತಕ್ಕಂಥಾ ಬಿಜಾಪುರ ಜಿಲ್ಲೆಯಲ್ಲಿ ಮಾಡಿದರೆ ತಮ್ಮನ್ನು ನಾನು ಅಭಿನಂದಿಸುತ್ತೇನೆ ಇದಕ್ಕೆ ಬೇಕಾದಂಥಾ ಸೈಟ್ಸನ್ನು ಫ್ರೀ ಆಗಿ ನಾವು ಕೊಡುತ್ತೇವೆಂದು ಹೇಳುತ್ತೇನೆ. ಹಾಗೆ ಅಲ್ಲಿ ಒಂದು ತರಬೇತಿ ಕೇಂದ್ರವನ್ನು ತೆರೆದರೆ ಇದರಿಂದ ಅಲ್ಲಿನ ಕೈಮಗ್ಗದವರಿಗೆ ತುಂಬಾ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಖಾದಿ ಬಗ್ಗೆ ಎರಡು ನಿಮಿಷ ಮಾತ್ರ ಮಾತನಾಡುತ್ತೇನೆ.

ಅಧ್ಯಕ್ಷರು.—ನಿಮಗೆ ಇನ್ನು ಟೈಂ ಕೊಡುವುದಿಲ್ಲ ಏತಕ್ಕೆಂದರೆ ಇನ್ನೂ ಮಾತನಾಡುವವರು ಬಹಳ ಜನ ಇದ್ದಾರೆ ದಯವಿಟ್ಟು ಕೂತುಕೊಳ್ಳಿ.

ಶ್ರೀ ಎಸ್. ಜಿ. ನಂಜಯ್ಯನಮಠ್.—ನಾನು ಖಾದಿ ಉದ್ಯಮದಲ್ಲಿ ಕೆಲಸ ಮಾಡುತ್ತಾ ಇದ್ದುದರಿಂದ ಅದರ ಬಗ್ಗೆ ಒಂದೆರಡು ವಿಚಾರ ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.—ಈಗ ನಾನೇ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ದಯವಿಟ್ಟು ಕೂತುಕೊಳ್ಳಿ.

ಶ್ರೀ ಎಸ್. ಜಿ. ನಂಜಯನಮಠ್.—ಒಂದೇ ಒಂದು ವಿಚಾರ ಹೇಳುತ್ತೇನೆ.

ಅಧ್ಯಕ್ಷರು.—ನಿಮಗೆ ಮಾತನಾಡಲು ಟೈಂ ಕೊಟ್ಟರೆ ಅನ್‌ಡ್ಯೂ ಅಡ್ವಾಂಟೇಜ್ ತೆಗೆದುಕೊಳ್ಳುತ್ತಿದ್ದೀರಲ್ಲಾ ನಿಮಗೆ ಮಾತನಾಡಲು ಟೈಂ ಕೊಡಲು ಸಾಧ್ಯವಿಲ್ಲ ದಯವಿಟ್ಟು ಕೂಡಿರಿ.

ಶ್ರೀ ಎಸ್. ಜಿ. ನಂಜಯ್ಯನಮಠ್.—ನಾನು ಹೊಸದಾಗಿ ಈ ಮನೆಗೆ ಬಂದಿರತಕ್ಕಂಥಾ ಸದಸ್ಯ ನನಗೆ ಸ್ವಲ್ಪ ಟೈಂಕೊಡಬೇಕು.

ಅಧ್ಯಕ್ಷರು.—ಇಲ್ಲಿ ಕೂತಿರುವವರು ಎಲ್ಲರೂ ಕೂಡ ಹೊಸದಾಗಿ ಬಂದವರೇ ದಯವಿಟ್ಟು ಕೂಡಿರಿ ಈಗ ರಾಮಕೃಷ್ಣ ಅವರು ಗೈರುಹಾಜರಾಗಿರುವುದರಿಂದ ಹೀರೇರೆಡ್ಡಿಯವರು ಮಾತನಾಡಿ. ತಾವು ೧೦ ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಬಿ. ಬಿ. ಹಿರೇರೆಡ್ಡಿ (ರಾಮದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಸದನದ ಮುಂದೆ ಇರತಕ್ಕಂಥಾ ವಾಣಿಜ್ಯ ಮತ್ತು ಕೈಗಾರಿಕೆಗಳ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತೇನೆ ಸ್ವಾಮಿ, ಈ ಬೆಂಗಳೂರಿನ ಸುತ್ತಮುತ್ತ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಏನು ತಡೆ ಹಿಡಿದಿದ್ದಾರೆ ನನಗೆ ಅದು ಬಹಳ ಸಂತೋಷವಾಗಿದೆ ಆದರೆ ತಾಲ್ಲೂಕಾ ಮಟ್ಟದಲ್ಲಿ ಈ ಕೈಗಾರಿಕೆಗಳು ಬೆಳೆಯುವುದಕ್ಕೆ ತಾವು ಆಸ್ಪದ ಮಾಡಿಕೊಡುವಂತಾಗಬೇಕು. ಈ ತಾಲ್ಲೂಕುಗಳಲ್ಲಿ ಕೆಲವೊಂದು ಮಧ್ಯಮ ಕೈಗಾರಿಕೆಗಳು ಪ್ರಾರಂಭ ಮಾಡುವುದಕ್ಕೆ ತಕ್ಕ ಪ್ರೋತ್ಸಾಹ ಕೊಟ್ಟರೂ ಕೂಡ ಕೆಲವು ತಾಲ್ಲೂಕುಗಳು ಮುಂದೆ ಬಂದಿಲ್ಲ ಉದಾಹರಣೆಗೆ ನನ್ನ ಕ್ಷೇತ್ರವಾದ ರಾಮದುರ್ಗ ಹತ್ತಿರ ಕೈಗಾರಿಕೆ ಮತ್ತು ಶೇಖರಣಾ ವಿಭಾಗದವರು ಅಲ್ಲಿ ಒಂದು ಉದ್ಯಮವನ್ನೂ ಕೂಡ ಬೆಳಸಲಿಕ್ಕೆ ಆಗದೇ ಇರುವ ಪರಿಸ್ಥಿತಿ ಇದೆ. ಇದರ ಬಗ್ಗೆ ಮೊನ್ನೆ ಮಾನ್ಯ ಮಂತ್ರಿಗಳಾದ ಶ್ರೀ ಜೆ. ಹೆಚ್. ಪಟೇಲರು ಭೇಟಿ ಮಾಡಿದಾಗ ಅಲ್ಲಿ ಅವರು ದೊಡ್ಡ ಕೈಗಾರಿಕೆಗಳು ಬರುವ ಹಾಗೆ ಮಾಡಿಕೊಡುತ್ತೇನೆಂದು ಭರವಸೆ ಕೊಟ್ಟರು ಅದನ್ನು ಮಾಡಿಕೊಡಬೇಕೆಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ ಹಾಗೂ ಈಗಾಗಲೆ ಒಬ್ಬ ಸದಸ್ಯರು ಈ ನೇಕಾರರ ಬಗ್ಗೆ ಹೇಳಿದ್ದಾರೆ ನಾನೂ ಸಹ ಹೇಳುವುದು ಇಷ್ಟೆ ಕರ್ನಾಟಕದಲ್ಲಿ ಈ ನೇಕಾರರು ತಮ್ಮ ಉದ್ಯಮಗಳನ್ನು ಸಾಕಷ್ಟು ಬೆಳೆಸಿಕೊಳ್ಳುವುದಕ್ಕೆ ಬಹಳಷ್ಟು ಸಾಧ್ಯವಾಗಿಲ್ಲ ಅನ್ನುವ ಮಾತನ್ನು ಹೇಳುತ್ತೇನೆ ಏತಕ್ಕೆಂದರೆ ಆಂಧ್ರದಲ್ಲಿರುವ ಹಾಗೆ, ತಮಿಳ್‌ನಾಡಿನಲ್ಲಿರುವ ಹಾಗೆ, ಮಹಾರಾಷ್ಟ್ರದಲ್ಲಿರುವ ಹಾಗೆ ಇದಕ್ಕೆ ಒಂದು ಪ್ರತ್ಯೇಕವಾದ ಡೈರೆಕ್ಟೋರೇಟ್ ಇಲ್ಲದೇ ಇರುವುದು ಅವರು ಸಾಕಷ್ಟು ಹತ್ತಿಯನ್ನು ಆ ಕೈಗಾರಿಕೆಗಳಿಗೆ ಒದಗಿಸುತ್ತಾರೆ ಕರ್ನಾಟಕದಲ್ಲಿ ಇದಕ್ಕೇ ಒಂದು ಪ್ರತ್ಯೇಕವಾದ ಡೈರೆಕ್ಟೋರೇಟ್ ಇಲ್ಲದೇ ಇರುವುದರಿಂದ ಇಲ್ಲಿ ಬೆಳೆಯಲಿಕ್ಕೆ ಅವಕಾಶವಾಗಿಲ್ಲ, ಇವರ ಒಂದು ನಿರ್ಲಕ್ಷ್ಯತನದಿಂದ ಈ ರೀತಿ ಆಗಿದೆ. ಆದುದರಿಂದ ಈ ನೇಕಾರರಿಗೆ ಸಹಾಯವಾಗುವ ಹಾಗೆ ಅವರು ಅದನ್ನು ಹೆಚ್ಚಾಗಿ ಬೆಳೆಸಲಿಕ್ಕೆ ಒಂದು ಪ್ರತ್ಯೇಕವಾದ ಡೈರೆಕ್ಟೋರೇಟ್ ಇರಬೇಕು ಇಲ್ಲಿ ಪ್ರತ್ಯೇಕವಾದ ಅಸಿಸ್ಟೆಂಟ್ ಡೈರೆಕ್ಟರ್ ಇದ್ದರೂ ಸಹ ಅವರಿಗೆ ಸರಿಯಾದ ಅಧಿಕಾರವಿಲ್ಲ ಈ ಬಗ್ಗೆ ಅಧಿಕಾರವೂ ಕೂಡ ಡೈರೆಕ್ಟರಿಗೇನೇ ಇರುತ್ತದೆ ಇಲ್ಲಿ ಅಸಿಸ್ಟೆಂಟ್ ಡೈರೆಕ್ಟರಿಗೆ ಅಧಿಕಾರ ಇಲ್ಲ ಆದುದರಿಂದ ತಮಗೆ ಹೇಳಬೇಕಾಗಿದೆ ಇಲ್ಲಿ ಕೈಗಾರಿಕೆಗಳ ಬಗ್ಗೆ ಅಧಿಕಾರ ವಿಕೇಂದ್ರೀಕರಣ ಆಗಿದೆಯೋ ವಿನಾ ಅಧಿಕಾರ ಕೇಂದ್ರೀಕೃತ ಆಗಿಲ್ಲ. ಈ ಕೆಲಸವು ಚೆನ್ನಾಗಿ ನಡೆಯಬೇಕಾದರೆ ಇದರ ಬಗ್ಗೆ ಸಂಪೂರ್ಣ ಅಧಿಕಾರ ಅಸಿಸ್ಟೆಂಟ್ ಡೈರೆಕ್ಟರವರಿಗೆ ಕೊಡಬೇಕು. ಅಲ್ಲದೆ ನೇಕಾರರಿಗೆ ಸಿಗತಕ್ಕಂಥಾ ಸೌಲಭ್ಯಗಳೂ ಸಹ ಸಿಗುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಟ್ಟು ೧ ಲಕ್ಷ ೩೦ ಸಾವಿರ ಕೈಮಗ್ಗಗಳು ಇವೆ. ಈ ಬಗ್ಗೆ ಸಂಘಗಳೂ ಇವೆ ಆದರೆ ಸರಿಯಾದ ಇನ್‌ಸ್ಪೆಕ್ಷನ್ ಇಲ್ಲ ಬೆಂಗಳೂರಿನಿಂದ ಅಧಿಕಾರಿಗಳು ಬೆಳಗಾಂಗೆ ಬಂದು ೪ ದಿವಸ ಇದ್ದು ೪ ಸಂಘಗಳನ್ನು ಇನ್‌ಸ್ಪೆಕ್ಷನ್ ಮಾಡಿ ಅದು ಸರಿಯಿಲ್ಲ ಇದು ಸರಿಯಿಲ್ಲ ಎಂದು ಹೇಳಿ, ಆ ಸಂಘಗಳನ್ನು ಬ್ಲಾಕ್ ಲಿಸ್ಟ್ ಮಾಡಿ ಹೋಗಿ ಬಿಡುತ್ತಾ

ಇದರ ಬಗ್ಗೆ ಈಗಾಗಲೇ ಸಾಕಷ್ಟು ಕೇಸು ಕೋರ್ಟಿನಲ್ಲಿ ಇದೆ. ಇದರ ಜೊತೆಗೆ ಜಿಲ್ಲಾ ಮಟ್ಟದಲ್ಲಿರುವ ಕೈಗಾರಿಕೆಗಳನ್ನೂ ಕೂಡ ಇನ್‌ಸ್ಪೆಕ್ಟ್ ಮಾಡಿದ್ದಾರೆ. ನಾನು ಹೇಳುವುದು ಇಷ್ಟೆ ಈ ಸಂಘಗಳಿಗೆ ಕೊಡಬೇಕಾದಂಥಾ ಸೌಕರ್ಯಗಳನ್ನು ಕೊಡಬೇಕು. ಆ ಸಂಘದವರಿಗೆ ಇಂತಿಂಥಾ ಸೌಲಭ್ಯಗಳನ್ನು ಕೊಡಬೇಕು ಎಂದು ತಿಳಿಸಿದರೂ ಕೂಡ ಕೊಟ್ಟಿಲ್ಲ ಅದನ್ನು ಸರಿಯಾಗಿ ಎನ್‌ಕ್ವೈರಿ ಮಾಡದೆ ೪ ದಿವಸ ಬಂದು ೪ ಸಂಘಗಳನ್ನು ಇನ್‌ಸ್ಪೆಕ್ಟ್ ಮಾಡಿ ಇದು ಸರಿಯಿಲ್ಲ ಅದು ಸರಿಯಿಲ್ಲ ಎಂದು ಹೇಳಿ ಬ್ಲಾಕ್‌ಲಿಸ್ಟ್ ಮಾಡುವುದು ಸರಿಯಾದುದಲ್ಲ ಕೆಲವು ಇನ್‌ಸ್ಪೆಕ್ಷನ್ಸ್ ಮಾಡದೇ ಇರುವ ಸಂಘಗಳು ಹಾಗೆಯೇ ಇವೆ. ಆ ಸಂಘದಲ್ಲಿ ಏನು ಕೆಲಸ ನಡೆದಿದೆ, ಏನು ಸೌಕರ್ಯಗಳನ್ನು ಒದಗಿಸಿಕೊಡಬೇಕು ಇದರ ಬಗ್ಗೆ ಅಲ್ಲಿಯ ನಿಜವಾದ ಸಂಗತಿಗಳನ್ನು ಹೇಳುವುದಕ್ಕೆ ಏತಕ್ಕೆ ಹಿಂದೇಟು ಹಾಕುತ್ತಿದ್ದಾರೋ ಗೊತ್ತಿಲ್ಲ. ಇದರಿಂದ ಎಷ್ಟೋ ಜನರು ಬಹಳ ಪಶ್ಚಾತ್ತಾಪ ಪಡುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ತಮಗೆ ಹೇಳುವುದು ಈ ಬಗ್ಗೆ ಆ ಸಂಘಗಳಿಗೆ ಅನುಕೂಲಕರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಹಾಗೆ ಲಕ್ಷ್ಯ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಬೆಳಗಾಂ ಜಿಲ್ಲೆಯಲ್ಲಿ ಕೆಲವು ನೇಕಾರರ ಸಹಕಾರ ಸಂಘಗಳು ಏನು ಇವೆ ಅವರು ಕೆಲವು ಅನುಕೂಲಗಳನ್ನು ಮಾಡಿಕೊಡಬೇಕೆಂದು ಕೇಳಿದ್ದಾರೆ . ಅವರ ಕಷ್ಟಸುಖಗಳನ್ನು ಕೇಳಿಕೊಂಡು, ತಕ್ಕ ಅನುಕೂಲಗಳನ್ನು ಮಾಡಿಕೊಡಬೇಕು. ಈ ಕೈಮಗ್ಗದ ನೇಕಾರರಿಗೆ ತಕ್ಕ ಪ್ರೋತ್ಸಾಹವನ್ನು ಕೊಟ್ಟು ಅವರಿಗೆ ಸ್ವಲ್ಪ ರಿಬೇಟ್ ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ಕೆ ಹೆಚ್ ಡಿ ಸಿ ಸಿ ಬಗ್ಗೆ ಹೇಳಬೇಕಾದರೆ ಅವರು ಕರ್ನಾಟಕದಲ್ಲಿ ಉತ್ಪಾದನೆ ಮಾಡತಕ್ಕಂಥಾ ಮಾಲುಗಳು ಕಡಿಮೆ ಅವರು ಹೊರಗಡೆ ಖರೀದಿ ಮಾಡುತ್ತಿದ್ದಾರೆ. ಅವರು ಇಲ್ಲೇ ಆ ಮಾಲುಗಳನ್ನು ಉತ್ಪಾದನೆ ಮಾಡುವ ಹಾಗೆ ಪ್ರಯತ್ನ ಮಾಡಬೇಕು. ಹಾಗಾದರೆ ನಮ್ಮ ನೇಕಾರರಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ ಮತ್ತು ಹೆಚ್ಚು ಅನುಕೂಲವಾಗುತ್ತದೆ, ಎಂದು ಹಾಗೆ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

೫–೩೦ ಪಿ. ಎಂ.

ಇಲ್ಲಿ ಕೆ. ಎಸ್. ಸಿ.ಯಲ್ಲಿ ದುಡಿಯತಕ್ಕ ನೇಕಾರರಿಗೆ ಬಹಳಷ್ಟು ಪಗಾರ ಕಡಿಮೆ ಇದೆ. ಇದರ ಬಗ್ಗೆ ಕೆ. ಎಸ್. ಸಿ. ಅಧ್ಯಕ್ಷರ ನಜರಿಗೆ ನಾನು ಈಗಾಗಲೇ ತಂದಿದ್ದೇನೆ, ಆದರೆ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚು ಮಾಡಿದ್ದರೂ ಹೊಟ್ಟೆ ತುಂಬಿಕೊಳ್ಳಲಿಕ್ಕೆ ಈ ಪಗಾರ ಸಾಕಾಗುವುದಿಲ್ಲ. ಆದ್ದರಿಂದ ಅವರಿಗೆ ಹೆಚ್ಚು ಪಗಾರ ಕೊಟ್ಟು ಒಳ್ಳೆಯ ವಾತಾವರಣ ನಿರ್ಮಾಣ ಮಾಡಿ ಅವರು ಯೋಗ್ಯರೀತಿಯಿಂದ ಸುಖಸಂಸಾರ ಸಾಗಿಸಲಿಕ್ಕೆ ಅನುಕೂಲ ಮಾಡಿ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ. ಮತ್ತು ಸ್ಟೇಟ್ ಕಾಟನ್ ವೀವರ್ಸ್ ಕೋಆಪರೇಟಿವ್ ಸೊಸೈಟಿಯಲ್ಲಿ ಒಂದು ಸಲಹಾ ಮಂಡಳಿಯನ್ನು ನೇಮಿಸಿ ಯಾವರೀತಿ ನೂಲು ಕೊಡಬೇಕು, ಯಾವ ರೀತಿ ಮಾರಾಟ ಮಾಡಬೇಕು ಎಂದು ಯೋಚನೆ ಮಾಡುವ ಅವಶ್ಯಕತೆ ಇದೆ. ಆದುದರಿಂದ ಸ್ಟೇಟ್ ಕಾಟನ್ ವೀವರ್ಸ್ ಕೋಆಪರೇಟೀವ್ ಸೊಸೈಟಿಗೆ ಸಲಹಾ ಮಂಡಲಿಯನ್ನು ನೇಮಿಸಿದರೆ ಒಳ್ಳೆಯದಾಗುತ್ತದೆ ಎಂದು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ಕೆ.ಎಸ್.ಸಿ.ಸಿ.ಯಲ್ಲಿ ಎಲ್ಲೆಲ್ಲಿ ಹೆಚ್ಚು ನೇಕಾರರಿದ್ದಾರೆ. ಯಾವ ಯಾವ ಜಿಲ್ಲೆಯಲ್ಲಿದ್ದಾರೆ ಅಲ್ಲಿಗೆ ಒಬ್ಬ ನೇಕಾರರ ಪ್ರತಿನಿಧಿ ಇರಬೇಕು. ಬೆಳಗಾಂನಲ್ಲಿ ಹೆಚ್ಚು ಜನ ಇದ್ದರೂ ಕೂಡ ಕೆ. ಎಸ್, ಸಿ.ಸಿ.ಯಲ್ಲಿರುವುದಿಲ್ಲ. ಇದರಿಂದ ಅಲ್ಲಿ ನೇಕಾರರಿಗೆ ಸಿಗತಕ್ಕ ಸೌಲತ್ತುಗಳಾಗಲೀ, ಖರೀದಿ ಮಾಡತಕ್ಕಂಥಾ ಮಾಲಾಗಲೀ ಸಿಗುವುದು ಸಾಧ್ಯವಾಗಿಲ್ಲ. ಬೆಳಗಾಂ ಜಿಲ್ಲೆಯಲ್ಲಿ ಬೇರೆ ಕಡೆಗಿಂತ ನೇಕಾರರು ಹೆಚ್ಚು ಇದ್ದಾರೆ. ಅಲ್ಲಿ ಈ ಒಂದು ವ್ಯವಸ್ಥೆ ಮಾಡಿದರೆ ಕೆ.ಎಸ್,ಸಿ.ಸಿಗೂ ಫಾಯಿದೆಯಾಗುತ್ತದೆ. ನೇಕಾರರಿಗೂ ಅನುಕೂಲವಾಗುತ್ತದೆ. ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ ಆಮೇಲೆ ಕ್ರೆಡಿಟ್ ಯೋಜನೆಯಿಂದ ಸಾಕಷ್ಟು ಅನುಕೂಲವಾಗಿದೆ. ಕೋಆಪರೇಟೀವ್ ಸೊಸೈಟಿಗಾದರೂ ಕೊಡಲಿ, ಪ್ರೈಮರಿ ಸೊಸೈಟಿಗಾದರೂ ಕೊಡಲಿ, ನೇಕಾರರ ಸರಕಾರ ಸಂಘಕ್ಕೆ ಅನ್ವಯವಾಗುವ ಹಾಗೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಆಮೇಲೆ ನೂಲಿನ ಧಾರಣೆ ಸಾಕಷ್ಟು ಹೆಚ್ಚಾಗಿದೆ. ನೇಕಾರರಿಗೆ ನೂಲು ಸಿಗದೇ ಇರುವುದರಿಂದ ಮತ್ತು ಹೆಚ್ಚಿನ ಧಾರಣೆಗೆ ಕೊಂಡುಕೊಳ್ಳುವುದರಿಂದ ಬಹಳ ತೊಂದರೆಯಾಗಿದೆ. ಸಹಕಾರ ತತ್ವದ ಮೇಲೆ ಕಟ್ಟಿದಂಥ ಸ್ಪಿನ್ನಿಂಗ್ ಮಿಲ್ ನೂಲಿನ ಗಿರಣಿಗಳಿಗೆ ಸರ್ಕಾರ ಸಾಕಷ್ಟು ಅವಕಾಶ ಕೊಟ್ಟಿದೆ. ಆದುದರಿಂದ ಈ ಎಲ್ಲಾ ಮಿಲ್

ಗಳವರನ್ನೂ ಒಂದು ಮೀಟಿಂಗ್‌ಗೆ ಕರೆದು, ಡೈರೆಕ್ಟರ್ ಮತ್ತು ಸಂಬಂಧಿಸಿದ ಸಚಿವರು ಅಲ್ಲಿ ಕೂಡಿಕೊಂಡು, ನೂಲಿನ ಬೆಲೆ ಒಂದೇ ರೀತಿ ಇರುವ ಹಾಗೆ ಬೆಲೆ ಹೆಚ್ಚೂ ಕಡಿಮೆಯಾಗದೆ. ಹಾಗೆ ೩ ತಿಂಗಳಾಗಲೀ, ೬ ತಿಂಗಳಾಗಲೀ ಒಂದು ವರ್ಷದಲ್ಲಿ ಒಂದೇ ರೇಟ್ ಇರುವಹಾಗೆ ೧೦ ಪರ್ಸೆಂಟ್ ಸಬ್ಸಿಡಿಕೊಟ್ಟು ಸಹಕಾರ ಸಂಘಗಳಿಗೆ ಒದಗಿಸುವ ಏರ್ಪಾಡು ಆಗಬೇಕು. ಈಗ ನೇಕಾರರ ಸಹಕಾರ ಸಂಘಗಳು ಒಳ್ಳೆಯ ರೀತಿ ಬೆಳವಣಿಗೆಯಾಗುವವರೆಗೆ ಅಭಿವೃದ್ಧಿ ಹೊಂದುವವರಿಗೆ ಪ್ರತಿಯೊಬ್ಬ ನೇಕಾರರಿಗೆ ಸಬ್ಸಿಡಿ ಮೇಲೆ ಸಾಲ ಸೌಲತ್ತುಗಳು ಸಿಗುವಂತೆ ಮಾಡಬೇಕು. ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಬೆಳಗಾಂ ಜಿಲ್ಲೆಯಲ್ಲಿ ಸಾಕಷ್ಟು ನೇಕಾರ ಜನ ಇದ್ದರೂ ಕೂಡ ಯಾವುದೇ ರೀತಿಯ ಸೌಲತ್ತು ಇಲ್ಲ. ಬ್ಲೀಚಿಂಗ್ ಡೈಯಿಂಗ್ ಮುಂತಾದ್ದಕ್ಕೆಲ್ಲಾ ಮಹಾರಾಷ್ಟ್ರಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ ದಯಮಾಡಿ ನಮ್ಮ ಸರ್ಕಾರ ಬೆಳಗಾಂ ಜಿಲ್ಲೆಯವರಿಗೆ ಬ್ಲೀಚಿಂಗ್ ಡೈಯಿಂಗ್. ಮುಂತಾದ ಎಲ್ಲಾ ರೀತಿಯ ಸೌಲಭ್ಯಗಳಿಗೂ ಸಹಕಾರಿ ತತ್ವದ ಮೇಲೆ ಪ್ಲಾಂಟ್‌ಮಾಡಿ ಎಲ್ಲಾ ನೇಕಾರರಿಗೆ ಅನುಕೂಲ ಮಾಡಿಕೊಟ್ಟರೆ ಮಹಾರಾಷ್ಟ್ರಕ್ಕೆ ಹೋಗುವುದು ತಪ್ಪುತ್ತದೆ ಮತ್ತು ಅನುಕೂಲವಾಗುತ್ತದೆ ಎಂದು ಕೇಳಿಕೊಳ್ಳುತ್ತೇನೆ. ನಾನು ಈಗಾಗಲೇ ಹೇಳಿದ ಹಾಗೆ ನೇಕಾರರ ಸಹಕಾರ ಸಂಘಗಳು ಏನಿವೆ ಅವನ್ನು ಬ್ಲಾಕ್‌ಲಿಸ್ಟ್‌ನಲ್ಲಿ ಹಾಕಿದ್ದರಿಂದ ಬಿಡಿಸಿಸಿ ಬ್ಯಾಂಕ್‌ನಿಂದ ಕೊಟ್ಟರತಕ್ಕ ಸಾಲ ೨೮ ಲಕ್ಷ ರೂಪಾಯಿ ವಸೂಲಾಗಿಲ್ಲ. ಹಾಗೇ ಉಳಿದಿವೆ. ಅದಕ್ಕೆ ರಿಬೇಟ್ ಕೊಡಬೇಕು, ಕೊಟ್ಟು ಬಹಳ ದಿವಸಗಳಿಂದ ಉಳಿದಂಥ ಸಾಲದಿಂದ ಮುಕ್ತರನ್ನಾಗಿ ಮಾಡಿ ಹೊಸ ಸಾಲ ಕೊಟ್ಟರೆ ನೇಕಾರರು ಮಗ್ಗ ನಡೆಸಿ ಸುಖ ಸಂಸಾರ ಮಾಡಲಿಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ತೀವ್ರಗತಿಯಿಂದ ರಿಬೇಟ್ ಬಿಡುಗಡೆ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ರಿಬೇಟ್ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆ. ನಾನು ಆರಿಸಿ ಬಂದಾಗಿನಿಂದಲೂ ಮೂರು ನಾಲ್ಕು ಸಲ ಹೇಳಿದ್ದೇನೆ. ಬೆಳಗಾಂ ಜಿಲ್ಲೆಯಲ್ಲಿರತಕ್ಕ ನೇಕಾರ ಸಹಕಾರ ಸಂಘಕ್ಕೆ ರಿಬೇಟ್ ಕೊಡಬೇಕು. ಎಂದು ತಿಳಿಸಿದರೂ, ಮಾನ್ಯ ಸಚಿವರು ಕೊಡುವ ಮನಸ್ಸು ಮಾಡಿದರೂ ಕೂಡ ಡೈರೆಕ್ಟರಿಂದ ಅದಕ್ಕೆ ಅನುಕೂಲ ವಾತಾವರಣ ಬರಲೊಲ್ಲದು, ಏಕೆಂದರೆ ಈ ಕೈಗಾರಿಕೆ ಎನ್ನುವಂಥಾದ್ದು ಐಎಎಸ್ ಆಫೀಸರ್ಸ್‌ಗೆ ಹಿತವಾಗುವುದಿಲ್ಲ. ನೂಲಿನ ಗಿರಣಿ, ಸಕ್ಕರೆ ಕಾರ್ಖಾನೆ ಮುಂತಾದ ದೊಡ್ಡದೊಡ್ಡ ಗಿರಣಿಗಳ ಮೇಲೆ ಕಾರ್ಖಾನೆಗಳ ಮೇಲೆ ಅವರ ಕೃಪಾದೃಷ್ಟಿ ಇರುತ್ತದೆಯೇ ಹೊರತು ಬಡವರ, ಕೈಮಗ್ಗದವರ ಮೇಲೆ ಅವರ ಕೃಪಾದೃಷ್ಟಿ ಇರುವುದಿಲ್ಲ. ಆದುದರಿಂದ ಇದನ್ನು ಡೈರೆಕ್ಟರಿಂದ ಮುಕ್ತಮಾಡಿ ಅಡಿಷನಲ್ ಡೈರೆಕ್ಟರಿಗೆ ಕೊಟ್ಟರೆ ಸಮಸ್ಯೆ ಬಗೆಹರಿಯುತ್ತದೆ. ಬಡವರ ಮೇಲೆ ಲಕ್ಷ್ಯ ಇಟ್ಟು ಅವರಿಗೆ ಸಿಗತಕ್ಕಂಥ ಸಾಲ, ರಿಬೇಟ್ ಕೊಡುವ ಸಲುವಾಗಿ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ. ಅದೇಪ್ರಕಾರ ಪವರ್‌ಲೂಂ ಕೂಡ ಆಗಿದೆ, ಕರ್ನಾಟಕ ರಾಜ್ಯದಲ್ಲಿ ೪೦೦೦ ಮಗ್ಗಗಳಿಗೆ ಸೊಸೈಟಿಯಲ್ಲಿ ೪೫೦೦ ಇದೆ. ಕೈಮಗ್ಗಗಳಿಗಾಗಲಿ, ಪವರ್‌ಲೂಂಗಳಿಗಾಗಲೀ, ಸರ್ಕಾರವಾಗಲೀ, ಅಧಿಕಾರಗಳಾಗಲೀ ಅನುಕೂಲ ವಾತಾವರಣ ಕಲ್ಪಿಸಿಯೇ ಇಲ್ಲ ಎಂದು ಆರೋಪ ಮಾಡಬಹುದು. ಹತ್ತಿ ಮಗ್ಗಗಳಿಗಾಗಲೀ ವಿದ್ಯುಚ್ಛಕ್ತಿಯಿಂದ ನಡೆಸತಕ್ಕ ಮಗ್ಗಗಳಿಗಾಗಲೀ ಸಂಘ ಅಥವಾ ವ್ಯಕ್ತಿ ನಡೆಸುವಂಥಾದ್ದಕ್ಕಾಗಲೀ ಸಹಾಯ ಕೊಡುವ ಬಗ್ಗೆ ಲಕ್ಷ್ಯ ವಹಿಸಿಲ್ಲ ಎಂದು ಹೇಳಬಹುದು. ಪವರ್‌ಲೂಂ ನೇಕಾರರ ಪರಿಸ್ಥಿತಿಯೂ ಕೂಡ ಬಹಳ ಚಿಂತಾಜನಕವಾಗಿದೆ. ಸಹಕಾರ ಸಂಘದಿಂದಾಗಲೀ ವ್ಯಕ್ತಿಗಳಿಂದಾಗಲೀ ತಯಾರಿಸಿದ ಮಾಲನ್ನು ಕೊಂಡುಕೊಳ್ಳುವವರಿಲ್ಲ, ಮಜೂರಿ ಬಿಟ್ಟರೂ ಕೂಡ ಕೊಂಡುಕೊಳ್ಳುವ ಪರಿಸ್ಥಿತಿ ಇಲ್ಲ. ಸರ್ಕಾರದ ಸಾಲ ೧೭ ಲಕ್ಷ ಅದಕ್ಕೆ ಬಡ್ಡಿ ೩೬ಲಕ್ಷ ದಂಡದ ಬಡ್ಡಿ ೫ ಲಕ್ಷ ಆಗಿದೆ ಎಂದು ತಿಳಿದು ಬಂದಿದೆ. ದಂಡದ ಬಡ್ಡಿ ಮತ್ತು ಬಡ್ಡಿ ೪೧ ಲಕ್ಷ ಬಿಟ್ಟು ಉಳಿದ ೧೭ ಲಕ್ಷ ತುಂಬಲಿಕ್ಕೆ ಕಂತುಗಳ ಮೂಲಕ ಅವಕಾಶ ಕೊಟ್ಟರೆ ತುಂಬಬಹುದು. ೩೭ ಕೋಟಿರೂಪಾಯಿಗಳನ್ನು ಈಗಾಗಲೇ ಬಿಟ್ಟುಕೊಟ್ಟೆವು. ನೇಕಾರರಿಗೆ ೪೧ ಲಕ್ಷ ಬಿಡುವುದರಲ್ಲಿ ತೊಂದರೆಯೇನೂ ಆಗುವುದಿಲ್ಲ, ಕಷ್ಟದಲ್ಲಿರತಕ್ಕ ಜನರಿಗೆ ಅನುಕೂಲ ಮಾಡಿಕೊಡಬೇಕು. ಆದುದರಿಂದ ೪೧ ಲಕ್ಷ ಸೂಟಿಯನ್ನು ಬಿಡಬೇಕು ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಮೇಲೆ ಪವರ್‌ಲೂಂಗೆ ವಿದ್ಯುಚ್ಛಕ್ತಿ ತೊಂದರೆಯಾಗಿದೆ, ಯೂನಿಟ್ ಲಿಮಿಟ್‌ನ್ನು ಹಾಕಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಬೆಳಗಾಂ ಜಿಲ್ಲೆಗೆ ಬಂದಾಗ ಪವರ್‌ಲೂಂ ಮೇಲಿರತಕ್ಕ ವಿದ್ಯುಚ್ಛಕ್ತಿ ಲಿಮಿಟ್‌ನ್ನು ಎಕ್ಸಂಪ್ಷನ್ ಮಾಡುತ್ತೇವೆ ಎಂದು ಸ್ಪಷ್ಟವಾದ ಮಾತನ್ನು ಹೇಳಿದರು

ಆ ಪ್ರಕಾರ ಪೇಪರ್‌ನಲ್ಲಿ ಬಂತು, ಅದನ್ನು ತಿಳಿದುಕೊಂಡ ನೇಕಾರರು ವಿದ್ಯುಚ್ಛಕ್ತಿಯಿಂದ ನಡೆಸುವಂಥ ಮಗ್ಗಗಳಿಗೆ ಲಿಮಿಟ್ ಇಲ್ಲ ಎನ್ನುವ ದೃಷ್ಟಿಯಿಂದ ನೇಕಾರರು ಸಾಕಷ್ಟು ವಿದ್ಯುಚ್ಛಕ್ತಿ ಉಪಯೋಗಿಸಿಕೊಂಡು ಕೆಲಸ ಮಾಡಿದ್ದಾರೆ. ಆದರೆ ಈಗ ೧೦೦ ರೂಪಾಯಿ ತುಂಬುವ ಕಡೆ ೪೦೦ ರೂಪಾಯಿ ದಂಡ ತುಂಬಬೇಕಾದ ಪರಿಸ್ಥಿತಿ ನೇಕಾರರಿಗೆ ಬಂದಿದೆ. ಮಾನ್ಯ ವಿದ್ಯುತ್ ಸಚಿವರೂ ಕೂಡ ಇಲ್ಲೇ ಇದ್ದಾರೆ, ಅವರ ಗಮನಕ್ಕೆ ನಾನು ತಂದಿದ್ದೇನೆ. ಆದರೆ ಈವರೆಗೆ ಕ್ರಮ ತೆಗೆದುಕೊಂಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಬೆಳಗಾಂ ಜಿಲ್ಲೆಗೆ ಬಂದಾಗ ಪವರ್‌ಲೂಂಗೆ ಎಕ್ಸಂಪ್‌ಷನ್ ಕೊಡುತ್ತೇವೆ ಎಂದು ಹೇಳಿದ್ದರು. ಅದು ಪೇಪರ್‌ನಲ್ಲಿ ಬಂತು. ಆ ತಾರೀಖಿನಿಂದ ಎಕ್ಸಂಪ್‌ಷನ್ ಕೊಡಬೇಕು. ಈಗ ನೇಕಾರರಿಗೆ ಅದನ್ನು ಕೊಡಲಿಕ್ಕೆ ಆಗುವುದಿಲ್ಲ. ಸಾವಿರಾರು ಲಕ್ಷಾಂತರ ಮಂದಿಗೆ ತೊಂದರೆ ಬಂದಿದೆ. ಬೆಳಗಾಂ ಜಿಲ್ಲೆಗೆ ಮಾನ್ಯ ಮುಖ್ಯ ಮಂತ್ರಿಗಳು ಯಾವ ತಾರೀಖಿಗೆ ಬಂದರೋ ಆವತ್ತಿನಿಂದ ಎಕ್ಸಂಪ್‌ಷನ್ ಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ನನಗೆ ಸಾಕಷ್ಟು ಅವಧಿಕೊಟ್ಟು ಮಾತನಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).— ಮಾನ್ಯ ಅಧ್ಯಕ್ಷರೇ, ಕೈಗಾರಿಕೆ ಮತ್ತು ಸಣ್ಣ ಉದ್ದಿಮೆಯ ಬಗ್ಗೆ ಸುಮಾರು ೧೭೭ ಕೋಟಿ ರೂಪಾಯಿಯ ಹಣದ ಬೇಡಿಕೆಯನ್ನು ಮಾನ್ಯ ಪಟೇಲ್‌ರವರು ಕೇಳುತ್ತಿದ್ದಾರೆ. ಈ ಹಣವನ್ನು ಕೊಡುವುದಕ್ಕೆ ಮುಂಚಿತವಾಗಿ ಇದರ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳಬೇಕು. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿ ಬಗ್ಗೆ ಮಾನ್ಯ ಶ್ರೀನಿವಾಸ್‌ರವರು ಹೇಳಿದ್ದಾರೆ. ಅದರ ಡಾಕ್ಯುಮೆಂಟನ್ನು ನಮ್ಮ ಹತ್ತಿರ ಕಳಿಸಿದ್ದಾರೆ. ಅದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಕೆಲವು ಮುಖ್ಯವಾದಂತಹ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಆಡಿಟ್ ರಿಪೋರ್ಟ್‌ನಲ್ಲಿ ಶ್ರೀ ಕೆ. ಬಿ. ಹರಿಹರನ್‌ವರು ಬಹಳ ಚೆನ್ನಾಗಿ ಪ್ರಶ್ನೆ ಮಾಡಿದ್ದಾರೆ. ಈ ಸದನದಲ್ಲಿ ಅನೇಕ ಸಲ ಕಮಿಟಿ ಫಾರ್ಮೇಷನ್ ಮಾಡಬೇಕು. ಎನ್‌ಕ್ವೈರಿ ಮಾಡಿಸಬೇಕು. ಸಂಬಂಧಪಟ್ಟ ಅಧಿಕಾರಿಗಳಿಗೆ ಆಕ್ಷನ್ ತೊಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಅಲ್ಲಿದ್ದಂತಹ ಕಾರ್ಮಿಕರು, ಕಾರ್ಖಾನೆ ಸಂಘಟನೆಗಳೂ ಕೂಡ ಪ್ರಧಾನ ಮಂತ್ರಿಯವರಿಗೆ ಪತ್ರಗಳನ್ನು ಬರೆಸಿದ್ದಾರೆ. ಅದರ ಪ್ರತಿಯನ್ನು ನಮ್ಮ ಪಕ್ಷಕ್ಕೆ ಕಳಿಸಿದ್ದರು. ಈ ಇಂಡಸ್ಟ್ರೀಸ್ ಇಲಾಖೆ ಬಹಳ ಮುಖ್ಯವಾದುದು. ತಾವು ಇಂಥ ಸುಮಾರು ೨೦–೨೫ ಕಾರ್ಖಾನೆಗಳನ್ನು ನೋಡಿಕೊಳ್ಳುತ್ತಿದ್ದೀರಿ. ಯಾವುದೇ ಒಂದು ರಾಷ್ಟ್ರದ ಅಭ್ಯುದಯವನ್ನು ಅಳೆಯಬೇಕಾದರೆ ಆ ದೇಶದಲ್ಲಿದ್ದಂತಹ ಇಂಡಸ್ಟ್ರೀಸ್‌ಗಳು ಮತ್ತು ಉದ್ದಿಮೆಗಳು, ಆ ನಂತರ ಸಮಾಜವಾದವನ್ನು ನೋಡಿ ಅಳೆಯಬೇಕಾಗಿತ್ತು. ಆ ಸಮಾಜವಾದದ ಅರ್ಥದ ನೀತಿಯ ಮೇಲೆ ಭರವಸೆಯನ್ನು ಇಟ್ಟುಕೊಂಡು ಬಹಳ ವರ್ಷಗಳಿಂದ ದುಡಿದಂತಹ ವ್ಯಕ್ತಿ ತಾವು. ನನಗೆ ತಮ್ಮ ಮೇಲೆ ದೊಡ್ಡ ಅಭಿಮಾನವಿದೆ. ಈ ಸಮಾಜವಾದದ ವ್ಯವಸ್ಥೆಯಲ್ಲಿ ಈ ಒಂದು ಕಾರ್ಖಾನೆಗಳು ಯಾವ ಪ್ರಕಾರವಾಗಿ ಪಬ್ಲಿಕ್ ಸೆಕ್ಟರ್ ಅನ್ನಿಸಿಕೊಳ್ಳುತ್ತಿವೆ ? ಈ ಪಬ್ಲಿಕ್ ಸೆಕ್ಟರ್ ಮಾಡಬೇಕಾದಂತಹ ಕೆಲಸ ಪ್ರಾಫಿಟ್. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಇರುವಂತಹ ಕೆಲವು ಇಂಡಸ್ಟ್ರೀಸ್‌ಗಳನ್ನು ಬಿಟ್ಟರೆ. ಬೇರೆ ಎಲ್ಲಾ ಕಾರ್ಖಾನೆಗಳಲ್ಲಿ ಹೆಚ್ಚು ಪ್ರಾಫಿಟ್ ಇಲ್ಲ. ಇದನ್ನು ಪ್ರೈವೇಟ್ ಸೆಕ್ಟರ್‌ಗಳಿಗೆ ಹೋಲಿಸಿದಾಗ. ನಮಗಿಂತ ಅವರು ಬಹಳ ಪ್ರಾಫಿಟ್ ಮಾಡಿಕೊಳ್ಳುತ್ತಿದ್ದಾರೆ. ಪಬ್ಲಿಕ್ ಸೆಕ್ಟರ್‌ಗಳೂ ಬೆಳೆಯಬೇಕೆಂದು ನಮ್ಮ ಭಾವನೆ. ಆ ಪಬ್ಲಿಕ್ ಸೆಕ್ಟರ್‌ಗಳೊಂದಿಗೆ ಪ್ರೈವೇಟ್ ಸೆಕ್ಟರ್‌ಗಳು ಕಾಂಪಿಟೇಷನ್ ಮಾಡುವಾಗ ಜಾಬ್ ಓರಿಯೆಂಟೆಡ್ ಫಿಲಾಸಫಿ ಇಟ್ಟುಕೊಂಡಿರುವಲ್ಲಿ ಇದರಿಂದ ಎಷ್ಟು ಜನರಿಗೆ ಕೆಲಸ ಕೊಡುವುದಕ್ಕೆ ಸಾಧ್ಯ. ಒಂದು ರಾಜ್ಯದ ಜವಾಬ್ದಾರಿ ತಮ್ಮ ಮೇಲೆ ಬರುತ್ತದೆ. ನಮ್ಮ ರಾಜ್ಯದಲ್ಲಿ ವಿದ್ಯಾವಂತರಾದವರಿಗೆ ಟೆಕ್ನೀಷಿಯನ್ಸ್‌ಗಳಿಗೆ ಇಂಜಿನಿಯರ್ಸ್‌ಗಳಿಗೆ ಅದಷ್ಟು ಮಟ್ಟಿಗೆ They consider more employment in the State sector.

ಪ್ರೈವೇಟ್ ಸೆಕ್ಟರ್‌ನ ಅವರು ಎಷ್ಟು ಚೆನ್ನಾಗಿ ಪ್ಲಾನಿಂಗ್ ಮೆಥಡ್‌ಅನ್ನು ಪ್ಲಿಮೆಂಟ್ ಮಾಡುತ್ತಾರೆ. ಹಾಗೂ ಯಾವ ರೀತಿಯಾಗಿ ಇಂಡಸ್ಟ್ರೀಫ್ರೇಮ್ ವರ್ಕ್ ಇಡಬೇಕು, ಯಾವ ಚೌಕಟ್ಟಿನಲ್ಲಿ ಅವರು ನೋಡಿಕೊಳ್ಳುತ್ತಾರೆ, ಯಾರ್ಯಾರಿಗೆಎಂಪ್ಲಾಯ್‌ಮೆಂಟ್ ಕೊಡುತ್ತಾರೆ ಮುಂತಾದವನ್ನೆಲ್ಲಾ ನೋಡಬೇಕು. their main motto

is to get more production and to get more profit. ಈ ಒಂದು ವ್ಯವಸ್ಥೆಯಲ್ಲಿ ಇಂಡಸ್ಟ್ರೀಯನ್ನು ನೋಡಿಕೊಳ್ಳಬಹುದು. ನಮ್ಮ ಕರ್ನಾಟಕದಲ್ಲಿ ಇಂಡಸ್ಟ್ರೀಸ್‌ಗಳ ಬೆಳವಣಿಗೆಯನ್ನು ನೋಡಬೇಕಾದರೆ, ನಮ್ಮ ಹತ್ತಿರವಿರುವಂತಹ ಅಗ್ರಿಕಲ್ಚರ್ ಔಟ್‌ಪುಟ್ ಕೂಡ ಈ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟಿದ್ದು. ತಾವು ಇದರಲ್ಲಿ ಅಂದರೆ ಆನ್ಯುಯಲ್ ರಿಪೋರ್ಟ್‌ನಲ್ಲಿ ಹೇಳಿದ್ದೀರಿ. Annual Report 1985-86 The industrial growth in the State during the recent past has been quite encouraging, thanks to the progressive industrial policy adopted by the State Government during 1983. ಎಂದು ಜನತಾ ಸರ್ಕಾರ ಬಂದ ನಂತರ ತಾವು ಈ ಇಂಡಸ್ಟ್ರೀ ಪಾಲಿಸಿಯನ್ನು ಚೇಂಜ್ ಮಾಡಿದ್ದೀರಿ. ಪ್ರತಿ ತಿಂಗಳಿಗೆ ಒಂದು ಸಾವಿರ ಇಂಡಸ್ಟ್ರೀಗಳನ್ನು ಹಳ್ಳಿ ಕಡೆಗಳಲ್ಲಿತರಬೇಕೆಂದು ಹೇಳುತ್ತಿದ್ದೀರಿ. ವಿಲೇಜ್ ಲೆವೆಲ್‌ನಲ್ಲಿ ಇಂಡಸ್ಟ್ರೀಗಳು ಬೆಳೆಯಬೇಕು ಹಾಗೂ ಅವುಗಳಿಗೆ ಸವಲತ್ತುಗಳನ್ನು ಕೊಡಬೇಕು. ಕೆಲವು ಸೆಲ್ಫ್ ಎಂಪ್ಲಾಯೆಂಟ್ ಸ್ಕೀಮ್‌ಗಳನ್ನು ಹಾಗೂ ಬೇರೆ ಬೇರೆ ಸ್ಕೀಮ್‌ಗಳಾದ ಡಿ. ಆರ್. ಡಿ. ಎಸ್. ಸ್ಕೀಮ್‌ಗಳನ್ನು ಇಂಪ್ಲಿಮೆಂಟ್ ಮಾಡಿದ್ದೀರಿ. The thrust on Small Scale industries has been further intensified and the number of industries registered during the past three years have shown phenomenal growth as could be seen from the following tables. ಇದರಲ್ಲಿ ಏನು ಹೇಳಿದ್ದೀರಿ. ೧೯೮೩-೮೪ ರಲ್ಲಿ ೭೫೭೮ ಯೂನಿಟ್ ಇದೆ. ಎಂಪ್ಲಾಯ್‌ಮೆಂಟ್ ೪೫.೩೭೯, ಇನ್‌ವೆಸ್ಟ್‌ಮೆಂಟ್ ೫,೫೨೧.೪೮ ಲಕ್ಷ. ಅದೇ ಪ್ರಕಾರ ೧೯೮೪-೮೫ ರಲ್ಲಿ ಹೇಳಿದ್ದೀರಿ ೧೧,೬೦೬ ಯೂನಿಟ್, ಎಂಪ್ಲಾಯ್‌ಮೆಂಟ್ ೫೫,೮೪೯ ಇನ್‌ವೆಸ್ಟ್‌ಮೆಂಟ್ ಮಾಡಿರುವುದು ೬,೨೨೪,೩೧. ೧೯೮೫-೮೬ ರಲ್ಲಿ ನಂಬರ್ ಆಫ್ ಯೂನಿಟ್ಸ್ ೮೩೨೩ ಡಿಸೆಂಬರ್ ೧೯೮೫ ರವರೆಗೆ, ಎಂಪ್ಲಾಯ್‌ಮೆಂಟ್‌ಗೆ ೪,೦೫೧, ಅದಕ್ಕೆ ಖರ್ಚು ಮಾಡಿರುವುದು ೬,೦೨೧.೨೫ ಲಕ್ಷ ನನಗನ್ನಿಸುತ್ತದೆ ಇದು ಪ್ರಿಂಟಿಂಗ್ ಮಿಸ್ಟೇಕ್ ಇರಬಹುದೆಂದು.

ಶ್ರೀ ಆರ್. ವಿ. ದೇಶಪಾಂಡೆ— ಪ್ರಿಂಟಿಂಗ್ ಮಿಸ್ಟೇಕ್ ಆಗಿದೆ. ಅದು ೫೦,೫೧೧.

ಶ್ರೀ ಕೆ. ಬಿ ಶಾಣಪ್ಪ.— ತಿಂಗಳಿಗೆ ಒಂದು ಸಾವಿರ ಇಂಡಸ್ಟ್ರೀಸ್‌ಗಳನ್ನು ಹಳ್ಳಿಗಳ ಕಡೆಗಳಲ್ಲಿ ಮಾಡುತ್ತೇವೆಂದು ಏನು ಹೇಳುತ್ತೀದ್ದಿರಿ ಅದರಲ್ಲಿ ನನಗೆ ಕಾನ್ಫಿಡೆನ್ಸ್ ಇಲ್ಲ. ನೀವು ಇದರಲ್ಲಿ ಯಶಸ್ವಿಯಾಗುತ್ತೀರೆಂಬ ಭರವಸೆ ನನಗಿಲ್ಲ ತಾವು ಈ ಇಂಡಸ್ಟ್ರೀ ಖಾತೆಯನ್ನು ತೆಗೆದುಕೊಂಡ ನಂತರ ಇಂಡಸ್ಟ್ರಿ ಪಾಲಿಸಿ ಬಗ್ಗೆ ಆದಷ್ಟು ಮಟ್ಟಿಗೆ ಸೆಟ್‌ರೈಟ್ ಮಾಡಿದ್ದೀರಿ. ನಮ್ಮ ರಾಜ್ಯದ ವತಿಯಿಂದ ನಡೆಯುತಕ್ಕಂತಹ ಪ್ರತಿಯೊಂದು ಇಂಡಸ್ಟ್ರೀಸ್‌ಅನ್ನು ಪ್ರಾಫಿಟ್‌ನಲ್ಲಿ ತೊಡಗಿಸುತ್ತೀರೆಂಬ ಭರವಸೆ ನನಗಿದೆ. ಅದರಲ್ಲಿ ವೆಂಚರ್ ಇದೆ. ಆದರ ಬಗ್ಗೆ ಹೇಳಬೇಕಾದರೆ ಒಂದು ಸಣ್ಣ ವಿಷಯವನ್ನು ತಮ್ಮ ಮುಂದೆ ಹೇಳಬೇಕಾಗುತ್ತದೆ. ಜಾರ್ಜ್ ಬರ್ನಾಡ್ ಷಾರವರು ಹೇಳುತ್ತಾರೆ "ಒನ್ಲಿ ಫೂಲ್ ಕ್ಯಾನ್ ವಿನ್‌ಎ ವಿಕ್ಟೋರಿಯಾ ಕಾಸ್" ಅದೇ ಪ್ರಕಾರ ಒಂದು ಪ್ರಯತ್ನ ನಿಮ್ಮದು. ಮೀಡಿಯಂ ಇಂಡಸ್ಟ್ರೀ, ದೊಡ್ಡ ದೊಡ್ಡ ಇಂಡಸ್ಟ್ರೀಗಳಲ್ಲಿ ನಡೆಯುವಂತಹ ಕರಪ್ಷನ್ ಅನ್ನು ಹಾಗೂ ನಾನ್ ಪ್ರಾಫಿಟ್ ಇಂಡಸ್ಟ್ರೀಗಳನ್ನೆಲ್ಲಾ ಸೆಟ್‌ರೈಟ್ ಮಾಡುತ್ತೇವೆಂದು ಈ ಇಲಾಖೆಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡಿದ್ದೀರಿ. ಆ ಪ್ರಕಾರದ ಒಂದು ವ್ಯವಸ್ಥೆ ಆಗಕೂಡದು. ನೀವು ಇದರಲ್ಲಿ ಯಶಸ್ವಿಯಾಗಬೇಕು. ಇದರಲ್ಲಿ ಬೇಕಾದಷ್ಟು ತೊಂದರೆ ಇರಬಹುದು. ಅದನ್ನು ತಾವು ಕೇಳಿದ್ದೀರಿ. ನಮ್ಮ ರಾಜ್ಯದ ಇಂಡಸ್ಟ್ರೀಗಳು ಪ್ರಾಫಿಟ್‌ನಲ್ಲಿ ಬರುತ್ತದೆಂದು ನನಗೆ ಭರವಸೆ ಇದೆ. ಈ ವ್ಯವಸ್ಥೆಯಲ್ಲಿ ತಾವು ಹೋಗುವಾಗ, ತಾವೇ ಹೇಳಿದ ಹಾಗೆ ಎನ್. ಜಿ. ಇ. ಎಫ್ ಹಾಗೂ ಇತರ ಕಡೆಗಳಲ್ಲಿ ಐ. ಎ. ಎಸ್. ಅಧಿಕಾರಿಗಳಿಗೆ ಇಂಡಸ್ಟ್ರೀಸ್‌ಗಳನ್ನು ನಡೆಸುವುದಕ್ಕೆ ಕೊಡುವುದಿಲ್ಲವೆಂದು ಹೇಳಿದ್ದೀರಿ. ಆದಷ್ಟು ಮಟ್ಟಿಗೆ ಈ ಪೀರಿಯಡ್‌ನಲ್ಲಿ ರೆಕ್ಟಿಫೈ ಮಾಡಿಕೊಳ್ಳಿ. ಟೆಕ್ನೋಕ್ರಾಟ್ಸ್ ಇದ್ದಾರೆ. ಇಂಡಸ್ಟ್ರೀಯನ್ನು ನಡೆಸಬೇಕಾದರೆ ತಜ್ಞರು ಬೇಕು, ಇಂಜಿನಿಯರ್ಸ್ ಬೇಕು, ಅಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಿದ್ದೀರಿ ಎಂದು ಭರವಸೆ ನನಗಿದೆ. ಆ ಹಾದಿಯಲ್ಲಿ ಮುನ್ನಡೆಯಬೇಕು. ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಹೇಳಬೇಕಾದರೆ, ಇದು ಒಂದು ದೊಡ್ಡ ಸಾಹಸದ ಕೆಲಸ. ನಮ್ಮ ರಾಜ್ಯದ ಸಣ್ಣ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಬೇಕಾದಂತಹ ಒಂದು ವ್ಯವಸ್ಥೆ, ಆತನಿಗೆ ಬೇಕಾದಂತಹ ಕರೇಜ್ ಅನ್ನು ಒದಗಿಸಿ ಕೊಡಬೇಕು. ಹೊಸದಾಗಿ ಬಂದಂತಹ ಡಿಪ್ಲೋಮಾ ಹೋಲ್ಡರ್‌ಗಳಿಗೆ ಸೆಲ್ಫ್ ಎಂಪ್ಲಾಯಂಮೆಂಟ್ ಸ್ಕೀಮಿನಲ್ಲಿ ಇಂಡಸ್ಟ್ರೀಸ್‌ಗಳನ್ನು ಹಾಕಲು ಏನು ಅನುವು

ಮಾಡಿಕೊಟ್ಟಿದ್ದೀರಿ, ಅವನು ಅದರಲ್ಲಿ ನಿಲ್ಲಬೇಕು. ನಿಂತು ಅದರಲ್ಲಿ ಅವನು ಉತ್ಪಾದನೆ ಮಾಡಿದಂತಹ ವಸ್ತುವನ್ನು ಮಾರಾಟಕ್ಕೆ ತೆಗೆದುಕೊಂಡು ಹೋಗಬೇಕು. ಇದು ಬಹಳ ದೊಡ್ಡ ಜವಾಬ್ದಾರಿ ಕೆಲಸವಾಗಿದೆ. ಇದು ಬಹಳ ಕಷ್ಟದ ಕೆಲಸ, ತಾವು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೀರಿ. ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಹಾಕಿದ್ದೀರಿ ಮತ್ತು ಎಷ್ಟು ಜನರಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ. ಯಾವ ಯಾವ ನಮೂನೆಯ ಕೈಗಾರಿಕೆಗಳನ್ನು ಕೊಟ್ಟಿದ್ದೀರಿ ಅದರ ಬಗ್ಗೆ ಇಲ್ಲಿ ವಿಶ್ಲೇಷಣೆ ಮಾಡಿಲ್ಲ. ನನ್ನ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದಲೂ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಕಾಮನ್ ಷಡ್ ಮಾಡುತ್ತಿದ್ದೀರಿ. ಅವುಗಳಲ್ಲಿ ಹಳ್ಳಿಯಲ್ಲಿರುವಂಥ ಕುಂಬಾರನಿಗಾಗಲೀ, ಕಮ್ಮಾರರಿಗಾಗಲೀ ಎಷ್ಟು ಕೊಟ್ಟಿದ್ದೀರಿ ಎನ್ನುವ ಅಂಕಿ ಸಂಖ್ಯೆಗಳು ಇಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ಕೈಗಾರಿಕೆಗಳ ಬಗ್ಗೆ ತರಬೇತಿಯನ್ನು ಕೊಡುತ್ತಿದ್ದಾರೆ. ನಮ್ಮಲ್ಲಿ ಎ ಸಿ ಸಿ ಎನ್ನುವ ದೊಡ್ಡ ಸಂಸ್ಥೆ ಇದೆ. ಸಣ್ಣ ಕೈಗಾರಿಕೆಗಳಲ್ಲಿ ಉತ್ಪಾದನೆ ಮಾಡತಕ್ಕವರು ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಬೇಕಾದಂಥ ನಟ್, ಬೋಲ್ಟ್ ಫೌಂಡರಿಗೆ ಬೇಕಾದಂಥ ಎಕ್ವಿಪ್‌ಮೆಂಟುಗಳನ್ನು ಮಾಡುತ್ತಿದ್ದಾರೆ. ತಾನು ಉತ್ಪಾದನೆ ಮಾಡುವಂಥ ವಸ್ತುಗಳನ್ನು ಮಾರ್ಕೆಟ್ಟಿಗೆ ತಂದರೆ, ದೊಡ್ಡ ದೊಡ್ಡ ಕಾರ್ಖಾನೆಯವರು ತಯಾರು ಮಾಡುವಂಥ ವಸ್ತುಗಳೊಂದಿಗೆ ಸ್ಪರ್ಧೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಸರ್ಕಾರದವರು ಅವರು ತಯಾರು ಮಾಡುವಂಥ ವಸ್ತುಗಳನ್ನು ಮಾರಾಟ ಮಾಡುವ ಬಗ್ಗೆ ಗ್ಯಾರಂಟಿ ಕೊಟ್ಟಿಲ್ಲ. ಸ್ವಂತ ಉದ್ಯೋಗ ಮಾಡತಕ್ಕವರಿಗೆ ೬ ತಿಂಗಳು ಬಂದರೆ ಅನುಕೂಲವಾಗುತ್ತದೆ. ಇವರಿಗೆ ಸರ್ಕಾರ ಮತ್ತು ಬ್ಯಾಂಕುಗಳು ಹಣಕಾಸಿನ ನೆರವನ್ನು ಒದಗಿಸಬೇಕು. ಅಲ್ಲದೆ, ಸ್ವಂತ ಉದ್ಯೋಗ ಮಾಡುವಂಥ ಅಭ್ಯರ್ಥಿ ಸ್ವತಃ ೨೫ ಭಾಗ ಹಣವನ್ನು ಬಂಡವಾಳ ಹಾಕಬೇಕು. ಈ ಹಣ ಕೂಡಿಡುವುದಕ್ಕೆ ಅವನು ಬಹಳ ಕಷ್ಟಪಡಬೇಕಾದ ಪರಿಸ್ಥಿತಿ ಇದೆ. ಬಂಧುಗಳ ಹತ್ತಿರ ಮತ್ತು ಸ್ನೇಹಿತರ ಹತ್ತಿರ ಕಲೆಕ್ಟ್ ಮಾಡಿ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ, ಎಸ್ಟಾಬ್ಲಿಷ್‌ಮೆಂಟ್ ಮಾಡುವುದರೊಳಗೆ ೨೫ ಪರ್ಸೆಂಟ್ ಹಣ ಖರ್ಚಾಗುತ್ತದೆ. ಸರ್ಕಾರ ಮತ್ತು ಬ್ಯಾಂಕಿನವರು ನೂರು ಪರ್ಸೆಂಟ್ ಹಣವನ್ನು ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಂಥ ಒಂದು ವ್ಯವಸ್ಥೆ ಮಾಡದೇ ಹೋದರೆ, ಸಾಲ ಸೋಲ ಮಾಡಿ ಕೊನೆಗೆ ಸಿಕ್ ಇಂಡಿಸ್ಟ್ರೀಸ್ ಆಗಿ ಹೋಗುತ್ತವೆ. ಇನ್ನು ಸ್ವಂತ ಉದ್ಯೋಗಕ್ಕಾಗಿ ೨೫,೦೦೦ ರೂಪಾಯಿಗಳ ಸಾಲವನ್ನು ಕೊಡುವಂಥ ಯೋಜನೆ ಮೇರೆಗೆ ಇದುವರೆಗೆ ೧೦೦೦ ಫಲಾನುಭವಿಗಳಿಗೆ ಕೊಡಲಾಗಿದೆಯೆಂದು ಹೇಳಿದ್ದೀರಿ. ಕಳೆದ ಎರಡು ವರ್ಷದಿಂದ ಲೀಡ್ ಬ್ಯಾಂಕ್‌ಗಳು ಕೊಡುತ್ತಿದ್ದಾರೆ. ನಾನು ಸ್ವಂತ ಉದ್ಯೋಗ ಮಾಡುವಂಥ ಅಭ್ಯರ್ಥಿಗಳ ಎರಡು ಬ್ಯಾಚ್ ಕಳುಹಿಸಿದ್ದೆನು, ಬ್ಯಾಂಕ್ ಮ್ಯಾನೇಜರು ಅವರಿಗೆ ಸಹಾಯ ಮಾಡಿಲ್ಲ. ಹಣ ಕೊಡುವುದಿಲ್ಲವೆಂದು ಹೇಳಿಕಳುಹಿಸಿದ್ದಾರೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಮತ್ತು ಕೆನರಾ ಬ್ಯಾಂಕ್‌ಗೆ ಕಳುಹಿಸಿಕೊಡಲಾಗಿದೆ. ಅವರು ಹಣ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಇದರಿಂದ ಶಾಸಕರಿಗೆ ತಲೆಬೇನೆಯಾಗಿದೆ, ಡಿ. ಡಿ. ಸಿ. ಮೀಟಿಂಗ್‌ನಲ್ಲಿ ಈ ವಿಷಯ ಬರುತ್ತಲೇ ಇರುತ್ತವೆ. ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಕರ್‌ಪ್ಷನ್ ನಡೆಯುತ್ತಿದೆ, ಫಲಾನುಭವಿಗಳ ಪಟ್ಟಿ ತಯಾರು ಮಾಡಬೇಕಾದರೆ, ೨-೩ ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ, ಇದರಲ್ಲಿ ೬ ಸಾವಿರ ರೂಪಾಯಿ ಸಬ್ಸಿಡಿ ಸಿಗುತ್ತವೆ. ಇದು ಹೋದರೆ ಹೋಗುತ್ತದೆಂದು ಹಣ ಕೊಡುವಂಥ ಒಂದು ವ್ಯವಸ್ಥೆ ಇದೆ. ಸರ್ಕಾರ ಯಾವ ಉದ್ದೇಶಕ್ಕಾಗಿ ಈ ಒಂದು ಸವಲತ್ತು ಕೊಟ್ಟಿದೆಯೋ ಅದಕ್ಕೆ ಸರಿಯಾಗಿ ಉಪಯೋಗವಾಗುತ್ತಿಲ್ಲ. ನೋಡುವುದಕ್ಕೆ ಅಂಕಿ ಸಂಖ್ಯೆಗಳು ಚೆನ್ನಾಗಿ ಕಾಣುತ್ತವೆ. ಇಂಥ ಒಂದು ಯೋಜನೆಗಳಿಗೆ ಉತ್ತೇಜನ ಕೊಡುವ ಬದಲು ರಾಜ್ಯದ ಅಭಿವೃದ್ಧಿಗಾಗಿ ಹಣ ಉಪಯೋಗಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಪೊಲ್ಯೂಷನ್ ಬೋರ್ಡು ಮಾಡಿದ್ದೀರಿ, ಇವತ್ತು ಸಿಮೆಂಟ್ ದೂಳಿನಿಂದ ಬೆಳೆಗಳಿಗೆ ತುಂಬಾ ಹಾನಿಯಾಗುತ್ತಿದೆ. ವರ್ಷದ ೩೬೫ ದಿವಸವೂ ಕೂಡ ಕಾರ್ಖಾನೆಗಳು ನಡೆಯುತ್ತಿವೆ. ಇಂಥ ಕಾರ್ಖಾನೆಗಳನ್ನು ತಪ್ಪದೆ ಮುಚ್ಚಿಸಬೇಕು. ಇವತ್ತು ಗುಲ್ಬರ್ಗ ಜಿಲ್ಲೆಯಲ್ಲಿ ೨೩-೨೪ ಕೈಗಾರಿಕೆಗಳು ಬರುತ್ತಿವೆ. ವಾತಾವರಣವನ್ನು ಕೆಡಿಸದಂಥ ಮತ್ತು ಆರೋಗ್ಯವನ್ನು ಕೆಡಿಸದಂಥ ಕಾರ್ಖಾನೆಗಳಿಗೆ ಲೈಸೆನ್ಸ್ ಕೊಡಬೇಕು, ಇವುಗಳ ಬಗ್ಗೆ ಒಂದೇ ರೀತಿಯ ಮಾನದಂಡವನ್ನು ಇಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೇ, ವಾಣಿಜ್ಯ ಹಾಗೂ ಕೈಗಾರಿಕೆ ಇಲಾಖೆಯ ವರದಿಯನ್ನು ನೋಡಿದರೆ ಸಣ್ಣ ಕೈಗಾರಿಕೆಗಳಿಗೆ ಪ್ರತಿವರ್ಷ ಹೂಡತಕ್ಕ ಬಂಡವಾಳದಿಂದ ಹಿಡಿದು ಪ್ರತಿಯೊಂದು ಬಾಬಿನಲ್ಲಿಯೂ ಕಡಿಮೆಯಾಗುತ್ತಾ ಹೋಗಿದೆ ; ಇದನ್ನು ಸರಿಪಡಿಸುವುದಲ್ಲದೆ, ಸಣ್ಣ ಕೈಗಾರಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಬೆಳವಣಿಗೆ ಮಾಡುವುದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಯೋಜನೆಗಳನ್ನು ಸಿದ್ಧಗೊಳಿಸಬೇಕು.

೬-೦೦ ಪಿ.ಎಂ.

ಆಮೇಲೆ ರಾಜ್ಯ ಸರ್ಕಾರದ ಕಂಪೆನಿಗಳೇನಿವೆ ಅವುಗಳ ಬಗ್ಗೆ ನೋಡಿದಾಗ ನಮಗೆ ಅನ್ನಿಸುತ್ತದೆ : ಜೆ. ಹೆಚ್. ಪಟೇಲರು ಎಫಿಶಿಯೆಂಟ್ ಮಿನಿಸ್ಟ್ರು. ಇವರ ಕಾಲದಲ್ಲೂ ಕೂಡ ಈ ಗತಿ ಬಂತಲ್ಲ ಎಂದು ಯೋಚನೆ ಮಾಡುತ್ತೇವೆ ಒಂದೊಂದೇ ವಿಮರ್ಶೆ ಮಾಡುವುದಾದರೆ ೧೧ನೇ ಐಟಂ ಪೇಜ್ ೧೫ರಲ್ಲಿ ನೋಡಿದರೆ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಯಲ್ಲಿ ನಮಗೆ ನಷ್ಟ ಬಂದಿರುವುದು ೩೩ ಕೋಟಿ, ಜೊತೆಗೆ ಕರ್ನಾಟಕ ಇಂಪ್ಲಿಮೆಂಟ್ಸ್‌ನಲ್ಲಿ ನಮಗೆ ನಷ್ಟ ಬಂದಿರುವುದು ೧.೪೦ ಲಕ್ಷ. ಅದೇ ರೀತಿ ಬೇರೆ ಕೆಲವು ಇವೆ. ಇವರೇನೋ ಬಹಳ ಬುದ್ಧಿವಂತರು. ಇವರ ಆಫೀಸರ್ಸ್ ಏನಿದ್ದಾರೆ ಅವರೂ ಕೂಡ ಬಹಳ ಬುದ್ಧಿವಂತರಂತೆ ಕಾಣುತ್ತಿದ್ದಾರೆ. ಏಕೆಂದರೆ ಎಲ್ಲೆಲ್ಲೂ ಒಂದೇ ಒಂದು ಮಾತು ಹೇಳುತ್ತೇನೆ. ಯು.ಸಿ. ಎಂದು ಹಾಕಿಬಿಟ್ಟಿದ್ದಾರೆ ಅಂದರೆ ಅಂಡರ್ ಕಂಪೈಲೇಷನ್, ಆಮೇಲೆ ಯು.ಎ. ಎಂದು ಹಾಕಿದರು ಅಂದರೆ ಅಂಡರ್ ಆಡಿಟ್ ಎಂದು ಕೊಟ್ಟುಬಿಟ್ಟರು. ಅವರು ಉಪಾಯವಾಗಿ ಯಾರಾದರೂ ಫಿಗರ್ ಮೇಲೆ ಪ್ರಶ್ನೆಗಿಶ್ನೆ ಕೇಳಿಬಿಟ್ಟಾರು ಎಂದು ತಪ್ಪಿಸಿಕೊಂಡುಬಿಟ್ಟಿದ್ದಾರೆ. ಜೆ. ಹೆಚ್. ಪಟೇಲರು ಅವರಿಗೆ ಬುದ್ಧಿ ಹೇಳಿ ಸ್ಟ್ಯಾಟಿಸ್ಟಿಕ್ಸ್ ಕೊಡುವುದಕ್ಕೆ ಮತ್ತು ಕಂಪೈಲ್ ಮಾಡುವುದಕ್ಕೆ ನಿಮಗೇನಾದರೂ ಆಗದೇ ಇದ್ದರೆ ಕೆಲಸ ಏಕೆ ಮಾಡಬೇಕು ನಿಮಗೆ ಸಂಬಳ ಏಕೆ ಕೊಡಬೇಕು ಎಂದು ಹೇಳಿ ಮರ್ಯಾದೆಯಾಗಿ ಮನೆಗೆ ಹೋಗಿ ಒಂದು ಕಡೆ ಕುಳಿತುಕೊಳ್ಳಬೇಕು. ಆಡಿಟ್ ಮಾಡಿಸಿಕೊಳ್ಳುವ ಶಕ್ತಿ ಇದ್ದರೆ ಆ ಆಫೀಸರ್‌ಗಳನ್ನು ನೀವು ಏನು ಆಫೀಸರ್ಸ್, ಕೆಲಸ ಏನು ಮಾಡುತ್ತಿದ್ದೀರಿ ಎಂದು ಕೇಳಬೇಕು. ವರ್ಷಕ್ಕೊಂದು ಸಲ ಬರುವ ಬಜೆಟ್‌ನಲ್ಲಿ ಸ್ಟ್ಯಾಟಿಸ್ಟಿಕ್ಸ್ ಬರುತ್ತದೆ. ಆಗಲೂ ಸ್ಟ್ಯಾಟಿಸ್ಟಿಕ್ಸ್ ಕೊಡುವುದಕ್ಕೆ ಆಗದ ನಿರ್ಲಕ್ಷ್ಯ ಅಧಿಕಾರಿಗಳಿದ್ದರೆ ಅವರು ಯಾರೇ ಇರಲಿ, ಐಎಎಸ್ ಕೇಡರ್ ಆದರೆ ಆ ಕೇಡರಿಗೇ ಅವಮಾನ. ಕೆ.ಎ.ಎಸ್. ನವರಿದ್ದರೆ ಹೇಳುವುದಕ್ಕೆ ಆಗುವುದಿಲ್ಲ. ನಿಜವಾಗಿಯೂ ಇಂಥ ಒಂದು ಪರಿಸ್ಥಿತಿಗೆ ಅಧ್ಯಕ್ಷರು ಪಟೇಲರನ್ನು ಬಿಡಬಾರದಾಗಿತ್ತು. ಅವರಿಗೆ ಸ್ವಲ್ಪ ಬುದ್ಧಿ ಹೇಳಬೇಕು.

ನಿಜವಾಗಿಯೂ ಕೂಡ ಅಪ್ರಿಶಿಯೇಟ್ ಮಾಡುವುದೆಂದರೆ, ಐಟಂ, ೧, ೨, ೩, ೪, ೫, ಅಂದರೆ ಮೈಸೂರು ಲ್ಯಾಂಪ್ಸ್, ಮೈಸೂರು ಮಿನರಲ್ಸ್ ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್. ಆದರೆ ಎನ್.ಜಿ.ಇ.ಎಫ್. ಲಿಮಿಟೆಡ್‌ನಲ್ಲಿ ೨ ಪರ್ಸೆಂಟ್ ಕೊಟ್ಟಿದ್ದಾರೆ. ನನಗೆ ಎಲ್ಲಾ ಹೇಳಲು ಸಾಕಷ್ಟು ಟೈಮಿಲ್ಲ, ಇದೊಂದು ಕರ್ಮಕಾಂಡ. ಜ್ಯುಡಿಶಿಯಲ್ ಎನ್‌ಕ್ವಯರಿ ಆಗಬೇಕಾಗಿತ್ತು. ಹಾಗೇನಾದರೂ ಆದರೆ ಅಲ್ಲಿರುವ ಆಫೀಸರುಗಳೆಲ್ಲ ಮನೆಗೆ ಹೋಗುತ್ತಾರೆ ಅಥವಾ ಜೈಲಿಗೆ ಹೋಗಬೇಕಾಗುತ್ತದೆ. ಅಂಥ ಪರಿಸ್ಥಿತಿ ಇದೆ. ಇಂಥವರನ್ನು ಏಕೆ ಬಿಟ್ಟಿದ್ದಾರೋ ಪಟೇಲರು. ಅವರೂ ಯೋಚನೆ ಮಾಡಬೇಕು.

ಇನ್ನು ಚಿಕ್ಕ ಇಂಡಸ್ಟ್ರಿ ಬಗ್ಗೆ ಹೇಳುವುದಾದರೆ ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕಂಪೆನಿ ಎಂದು ಏನಿದೆ ಇದು ನಮ್ಮ ಜಿಲ್ಲೆಯವರೇ ಸ್ಥಾಪನೆ ಮಾಡಿದ್ದು. ಇದೊಂದು ಪ್ರಿಸ್ಟೀಜಿಯಸ್ ಕಂಪೆನಿ ಎಂದು ಹೇಳಿದರು. ಈ ಕಂಪೆನಿ ಬಗ್ಗೆ ಆಫೀಸರ್ಸ್ ಒಂದು ಮೆಮೊರ್ಯಾಂಡಮ್ ಕೊಟ್ಟಿದ್ದರು. ಅಲ್ಲಿಯ ಯೂನಿಯನ್ನೂ ಒಂದು ಕೊಟ್ಟಿದ್ದರು. ಕಾರಣ ಏನೆಂದರೆ ಪವರ್ ಸಪ್ಲೈ ಸರಿಯಾಗಿಲ್ಲ, ಜೊತೆಗೆ ಕ್ಯಾಪಿಟಲ್ ಇನ್‌ಕ್ರೀಸ್ ೭೭ ಕೋಟಿ ಆಗಬೇಕಾಗಿದೆ. ಇನ್‌ಟರೆಸ್ಟ್ ರೇಟ್ಸ್ ವೇವ್ ಮಾಡಬೇಕಾಗಿದೆ ಎಂಬ ಕಾರಣಗಳು. ಇವುಗಳನ್ನೆಲ್ಲಾ ಗಮನಿಸಿ ಪಟೇಲರು ಒಂದು ಪ್ರೆಸ್ಟೀಜ್ ಇಷ್ಯೂ ಮೇಲೆ ಕೂತು ಕೊಳ್ಳಬಾರದು. ಆವಾಗಲೇ ಅಲೆಂಬಿಕ್ ಗ್ಲಾಸ್ ಬಗ್ಗೆ ಹೇಳಿದರು. ನಾನು ಯಾರಿಗೂ ಇನ್‌ಕ್ರೀಸ್ ಮಾಡುವುದಿಲ್ಲ ಎಂದು. ಇದು ಅನ್ಯಾಯ. ಹಾಗೆ ವಿಐಎಸ್‌ಎಲ್‌ಗೂ ಇನ್‌ಕ್ರೀಸ್ ಮಾಡುವುದಿಲ್ಲ ಎಂದರು. ನಿಜವಾಗಿಯೂ ಇದು ನಮ್ಮ ಪ್ರೆಸ್ಟೀಜಿಯಸ್ ಇಂಡಸ್ಟ್ರಿ. ಎಲ್ಲೂ ಇಂಡಸ್ಟ್ರಿ ಇಲ್ಲದೇ ಇದ್ದಾಗ ವಿಐಎಸ್‌ಎಲ್ ಪ್ರಾರಂಭವಾಯಿತು, ಚೆನ್ನಾಗಿ ನಡೆದುಕೊಂಡು ಬಂದಿದೆ, ಅದಕ್ಕೆ ಮುಖ್ಯವಾಗಿ ವಿದ್ಯುತ್ ಸಪ್ಲೈ ಮಾಡುತ್ತಿಲ್ಲ. ಆದ್ದರಿಂದ ವಿದ್ಯುತ್ತನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಎಕನಾಮಿಕಾ ಸರ್ವೆ ಆಫ್ ಕರ್ನಾಟಕದಲ್ಲಿ ೧೯೮೫-೮೬ರಲ್ಲಿ ಇಂಡಸ್ಟ್ರಿ ಬಗ್ಗೆ ಕೊಟ್ಟಿರುವುದು ನೋಡಿದರೆ ನಮಗೆ ಅರ್ಥವಾಗುತ್ತದೆ. ಇದು ಸರಿಯಾಗಿಲ್ಲ.

"The total investment in the State including Central Goverument direct investment and private sector investment is anticipated to increase from about Rs. 2008 crores in 1984-85 to Rs. 2075 crores in 1985-86."

The rate of inflation will be Rs. 69 crores.

ಈಗಿರುವ ಇನ್‌ಫ್ಲೇಷನ್ ರೇಟು ೧೨ ಪರ್ಸೆಂಟ್. ಅದನ್ನು ೪.೫ ಮಾಡಿಕೊಳ್ಳಲಿ.

"This marks 4.1 per cent increase. Investment in the current year forms 24 per cent of the State Income."

ಇದು ನಿಜವಾಗಿಯೂ ಕೂಡ ಸರಿಯಾದ ಪರಿಸ್ಥಿತಿಯಲ್ಲ. ನಮ್ಮ ಪಾಪ್ಯುಲೇಷನ್ ರೇಟೇ ೨.೫ ಪರ್ಸೆಂಟ್ ಇದೆ. ಇದರಲ್ಲಿ ನೀವು ಏನು ನ್ಯಾಯ ಮಾಡಿದ ಹಾಗಾಗುತ್ತದೆ. Similarly, the tempo of industrial development has somewhat suffered during the current year due to the shortage of power. During the first 6 months, nearly seven tho thousand small scale industrial units have been added and the progress is higher by 23 per cent compared to that of 1984-85. ನಾನು ಹೇಳುವುದು ಟೆಂಪೋ ಆಫ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಹ್ಯಾಸ್ ಸಫರ್ಡ್ ಎಂದು ಸ್ಪಷ್ಟವಾಗಿ ಅವರು ಒಪ್ಪಿಕೊಂಡಿದ್ದಾರೆ. ಅದನ್ನು ಗಮನಿಸಬೇಕು. ಇಂಡಸ್ಟ್ರಿಯಲ್ ಪ್ರೊಡಕ್ಷನ್ ಬಗ್ಗೆ ನೋಡಿದರೂ ಕೂಡ ಮೈನಸ್ ಸೈಡೇ ಇದೆ. Further in Table 8.1, the production of selected industries and minerals in the State has been given. According to which, the variation in production for 1985-86 over 1984-85 in Aluminium was 33.79%. Iron and Steel (a) Pig Iron minus 42.67%, Steel Ingots minus 15.28%, Vanaspati-minus 34.46% and even Cigarettes-minus 16.37%. ಈ ರೀತಿ ಮೈನಸ್ಸೇ ಇದೆ. ಆಮೇಲೆ ವನಸ್ಪತಿ ಮೈನಸ್ಸು. ಈವನ್ ಸಿಗರೇಟ್, ಅದೇನೋ ನಂಬರ್ ಇನ್ ಮಿಲಿಯನ್ಸ್ ೧೬.೩೭-ಅದಕ್ಕೋಸ್ಕರವೇ ಬ್ಲಾಕ್ ಮಾರ್ಕೆಟ್ ಆಗಿದೆ ಎಂದು ಕಾಣುತ್ತದೆ ಎರಡು ರೂ. ಸಿಗರೇಟ್ ಪ್ಯಾಕಿಗೆ ೩ ರೂ. ಕೊಡಬೇಕು. ನಾನು ಸಿಗರೇಟ್ ಸೇದುವುದಿಲ್ಲ. ಎಲ್ಲ ಮೈನಸ್ಸೇ. ಇದು ನಿಜವಾಗಿಯೂ ಒಳ್ಳೆಯ ದಾರಿಯಲ್ಲಿ ನಡೆಯುತ್ತಿಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕು.

ಇನ್ನು ಜಾಯಿಂಟ್ ಸ್ಟಾಕ್ಸ್ ಕಂಪೆನೀಸ್-ಇಲ್ಲಿ ಕೂಡ ನೋಡಿದರೂ ಎಲ್ಲ ಮೈನಸ್ಸೇ ಇದೆ. ಪ್ರೈವೇಟ್ ಕಂಪೆನೀಸ್‌ದು ಮೈನಸ್ ೪.೮೯ ಈ ರೀತಿ ನೋಡುತ್ತಾ, ನೋಡುತ್ತಾ ಹೋದರೆ ನಮ್ಮ ಮಾನ್ಯ ಪಟೇಲರು ಇದಕ್ಕೆ ಅವಕಾಶ ಕೊಡಬಾರದಾಗಿತ್ತು ಇದನ್ನು ಸರಿಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಏಕೆಂದರೆ ಶಾಣಪ್ಪನವರು ಹೇಳಿದ ಹಾಗೆ ನಮ್ಮ ದೇಶದ ಅಭಿವೃದ್ಧಿ ನೋಡುವುದು ಉದ್ದಿಮೆಗಳಲ್ಲಿ 24% of the entire investment is in industry. ದುಡ್ಡು ಬರದೇ ಏನೂ ಇಲ್ಲ. ಸೆಂಟ್ರಲ್ ಗವರ್ನಮೆಂಟ್‌ನವರು ಬೇರೆಯವರಿಂದ ಕಡಿಮೆ ಏನೋ ಕೊಟ್ಟಿದ್ದಾರೆ. ಇದರ ಬಗ್ಗೆ ಪ್ರೊಟೆಸ್ಟ್ ಮಾಡಿ ಜಾಸ್ತಿ ಪಡೆಯಬೇಕು. ಕರ್ನಾಟಕಕ್ಕೆ ಇಂಡಸ್ಟ್ರೀಯ ಬಗ್ಗೆ ಒಳ್ಳೆಯ ಹೆಸರಿದೆ, ಅದನ್ನು ಕೆಡಿಸಬಾರದೆಂದು ಪ್ರಾರ್ಥಿಸುತ್ತೇನೆ.

ಸಭಾಧ್ಯಕ್ಷರೇ, ಕೋಲಾರ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ಇಂಡಸ್ಟ್ರಿಯಲಿ ಫಾರ್ವರ್ಡ್ ಎಂದು ಮಾಡಿದ್ದಾರೆ. ಅದೇನು ಬೇಸಿಸ್ಸೋ ಅರ್ಥವಾಗುತ್ತಿಲ್ಲ. ಅಲ್ಲಿ ಒಂದೂ ಮೇಜರ್ ಇಂಡಸ್ಟ್ರಿ ಇಲ್ಲ. ಆದ್ದರಿಂದ ಕೋಲಾರ ಜಿಲ್ಲೆಯನ್ನು ಬ್ಯಾಕ್‌ವಾರ್ಡ್ ಏರಿಯಾ ಎಂದು ಘೋಷಿಸಿದರೆ ೧೫ ಪರ್ಸೆಂಟ್ ಸಬ್ಸಿಡಿಯಾದರೂ ಸಿಗುತ್ತದೆ ಹಾಗೆಯೇ ಕೋಲಾರ ಜಿಲ್ಲೆಗೆ ಒಂದೂ ಮೇಜರ್ ಇಂಡಸ್ಟ್ರಿ ಇಲ್ಲ. ಆದ್ದರಿಂದ ಬಿಇಎಂಎಲ್‌ನವರ.

ಟಿಪನ್ ಮಾಡಬೇಕೆಂದಿರುವ ಡೀಸೆಲ್ ಇಂಜಿನ್ ಯೂನಿಟ್ಟನ್ನು ಕೋಲಾರಕ್ಕೇ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಖಾದಿ ಬೋರ್ಡುಗಳ ವಿಚಾರ ಸ್ವಲ್ಪ ಹೇಳುತ್ತೇನೆ. ಇದರಲ್ಲಿ ಬಹಳ ಹೆಗ್ಗಣಗಳುಂಟು ಸ್ವಲ್ಪ ದಿವಸಗಳ ಹಿಂದೆ ದೇಶಪಾಂಡೆಯವರೂ ನಾನೂ ಕೋಲಾರದಲ್ಲಿ ಯಾವುದೋ ರಿವ್ಯೂ ಮಾಡುತ್ತಿದ್ದೆವು. ಆಗ ಈ ಖಾದಿಬೋರ್ಡಿನ ಮುಖ್ಯಾಧಿಕಾರಿಯನ್ನು ಎಷ್ಟು ಕಲೆಕ್ಷನ್ ಆಗಿದೆ ಎಂದು ಕೇಳಿದ್ದಕ್ಕೆ ೪೦ ಸಾವಿರ ಎಂದರು. ಹಾಗಾದರೆ ಒಟ್ಟು ಕೊಟ್ಟಿರುವ ಸಾಲ ಎಷ್ಟು ಎಂದದಕ್ಕೆ ೮೦ ಲಕ್ಷ ಎಂದರು, ಶೇಕಡಾ ೫ ಪರ್ಸೆಂಟ್ ರಿಕವರಿ ಆದಂತಾಯಿತ್ತು. ಈ ಖಾದಿ ಬೋರ್ಡುಗಳನ್ನು ಸುಲಿಯುವುದಕ್ಕಾಗಿ ಕೆಲವರು ಪುಡಾರಿಗಳು ಖಾದಿ ಬೋರ್ಡ್‌ ಹತ್ತಿರ ಹೋಗುವುದು ಯಾವುದೋ ಒಂದು ಇಂಡಸ್ಟ್ರಿ ಎಂದು ಹೇಳಿಕೊಂಡು ನಾನು, ನನ್ನ ಮಗ, ಹೆಂಡತಿ, ಮಗಳು ಇವರನ್ನೇ ಷೇರು ಹೋಲ್ಡರ್ ಎಂದು ಮಾಡಿಕೊಂಡು ಹಣ ದೋಚುತ್ತಿದ್ದಾರೆ. ಆದರೆ ಅಲ್ಲಿ ಯಾವ ಕೈಗಾರಿಕೆಯೂ ಇರುವುದಿಲ್ಲ. ಆ ಹಣದಲ್ಲಿ ಲಾಭ ಬಂದರೆ ಅವರದು. ನಷ್ಟವಾದರೆ ಖಾದಿಬೋರ್ಡ್‌ದು. ಈ ರೀತಿ ಖಾದಿಬೋರ್ಡುಗಳು ಕೆಲವು ಜನಗಳಿಗೆ ರಿಹ್ಯಾಬಿಲಿಟೇಷನ್ ಸೆಂಟರ್ಸ್ ಆಗಿಬಿಟ್ಟಿವೆ. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಶುಗರ್ ಇಂಡಸ್ಟ್ರಿ ಬಗ್ಗೆ ಹೇಳುವುದಾದರೆ, ಶುಗರ್ ಡೈರೆಕ್ಟರೇಟ್ ಮಾಡಿದ್ದಾರೆ. ಅದು ಬೆಂಗಳೂರಿನಲ್ಲಿದೆ ಇದರ ಬಗ್ಗೆ ಪವರ್ಸ್ ಜಿಲ್ಲಾಧಿಕಾರಿಗಳವರಿಗೆ ಇತ್ತು. ನಮ್ಮ ಸ್ನೇಹಿತರು ಹೇಳಿದಹಾಗೆ ಬೀದರ್ ಜಿಲ್ಲೆಯಲ್ಲಿ ೧೨ ಖಂಡಸಾರಿ ಶುಗರ್ ಫ್ಯಾಕ್ಟರಿಗಳು ಇವೆ. ಮೊದಲು ಜಿಲ್ಲಾಧಿಕಾರಿಗಳವರ ಹತ್ತಿರ ಪವರ್ಸ್ ಇದ್ದಾಗ ಅವರಿಗೆ ತೊಂದರೆ ಇರಲಿಲ್ಲ. ಈಗ ಅವರಿಗೆ ತೊಂದರೆ ಯಾಗುತ್ತದೆ. ಅವರು ಬೆಂಗಳೂರಿಗೆ ಓಡಿ ಬರಬೇಕಾಗುತ್ತದೆ. ಜಿಲ್ಲಾಧಿಕಾರಿಗಳವರಿಗೆ ಇದ್ದ ಪವರ್ಸ್‌ನ್ನು ತೆಗೆದುಕೊಳ್ಳುವುದು ಬೇಡ. ನೀವು ಬೇಕಾದರೆ ಓವರ್‌ಆಲ್ ಸೂಪರ್‌ವಿಷನ್ ಮಾಡಿ. ಎಲ್ಲಾ ಪವರ್ಸ್‌ನ್ನು ಶುಗರ್ ಡೈರೆಕ್ಟರೇಟ್‌ನವರು ಇಟ್ಟುಕೊಳ್ಳುವುದು, ಅದರಿಂದ ತೊಂದರೆ ಯಾಗುವುದು ಬೇಡ.

ಇನ್ನು ರೇಷ್ಮೆ ವಿಚಾರವಾಗಿ ಹೇಳುವುದಾದರೆ, ರೇಷ್ಮೆ ಖಾತೆಯನ್ನು ಹೊಂದಿರುವ ರಾಮಯ್ಯ ನವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ದುರಾದೃಷ್ಟವಶಾತ್ ನಮ್ಮ ಜಿಲ್ಲೆಯಲ್ಲಿ ಯಾವ ಕೆಲಸವನ್ನೂ ತೆಗೆದುಕೊಳ್ಳುತ್ತಿಲ್ಲ. ಭಾರತ ದೇಶದಲ್ಲಿ ಶೇಕಡಾ ೭೦ ರಷ್ಟು ರೇಷ್ಮೆಯನ್ನು ಉತ್ಪಾದಿಸಿದರೆ, ಕರ್ನಾಟಕದಲ್ಲಿ ಉತ್ಪಾದನೆಯಾಗತಕ್ಕ ರೇಷ್ಮೆಯಲ್ಲಿ ಶೇಕಡ ೫೦ ರಷ್ಟು ರೇಷ್ಮೆಯನ್ನು ಕೋಲಾರ ಜಿಲ್ಲೆ ಒಂದರಲ್ಲೇ ಉತ್ಪಾದಿಸಲಾಗುತ್ತಿದೆ. ಇಷ್ಟಿದ್ದರೂ ನಮ್ಮ ಜಿಲ್ಲೆಗೆ ಒಂದು ಸಿಲ್ಕ್ ಫಿಲೇಚರ್‌ನ್ನು ಸಹ ಕೊಡದಿರುವುದನ್ನು ಖಂಡಿಸಬೇಕಾಗಿದೆ. ನಮ್ಮಲ್ಲಿ ಒಂದು ಫಿಲೇಚರ್ ಸಹ ಇಲ್ಲ. ನಮ್ಮಲ್ಲಿ ರೋಗರಹಿತ ಮೊಟ್ಟೆಗಳು ಸಿಗುತ್ತಿಲ್ಲ. ಚಿಕ್ಕಬಳ್ಳಾಪುರದಲ್ಲಿ ಮೊಟ್ಟೆಯನ್ನು ಉತ್ಪಾದನೆ ಮಾಡತಕ್ಕ ಗ್ರೈನೇಜ್ ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯ ಎಲ್ಲಾ ತಾಲ್ಲೂಕಿಗಳಿಗೂ ಹುಳು ಸಾಕಣೆ ಕೇಂದ್ರ ಬೇಕು. ವರ್ಲ್ಡ್ ಬ್ಯಾಂಕಿನ ಸ್ಕೀಮ್‌ನಲ್ಲಿ ಹಣವಿದೆ. ಎಲ್ಲಿ ರೇಷ್ಮೆಗೂಡು ಮಾರ್ಕೆಟ್ ಬೇಕಾಗಿಲ್ಲ ಅಂತಹ ಕಡೆ ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು ಕಟ್ಟುತ್ತಿದ್ದಾರೆ. ಎಲ್ಲಿ ಮಹಾನುಭಾವರು ಇರುತ್ತಾರೆ, ಮತ್ತು ಶಿಫಾರಸ್ಸು ಮಾಡುತ್ತಾರೆ ಅಂತಹ ಕಡೆ ಬಿಲ್ಡಿಂಗ್‌ಗಳು ಬರುತ್ತವೆ. ಕಂಟ್ರಾಕ್ಟರು ಗಳಿಗಾದರೂ ಒಳ್ಳೆಯದಾಗಲಿ ಎಂದು ಕೇಳಿದವರಿಗೆ ಬಿಲ್ಡಿಂಗ್‌ಗಳನ್ನು ಕೊಡುತ್ತಾರೆ. ನಮ್ಮ ಕೋಲಾರ ಜಿಲ್ಲೆಯ ೧೧ ತಾಲ್ಲೂಕುಗಳಲ್ಲಿ ಮಾರ್ಕೆಟ್ ಕಟ್ಟಿ ಕೊಡಬೇಕು ಮೂರು ಕಡೆ ಮಾತ್ರ ಮಾರ್ಕೆಟ್ ಅನುಕೂಲವಿದೆ. ಇನ್ನು ಎಂಟು ತಾಲ್ಲೂಕುಗಳಲ್ಲಿ ಆ ವ್ಯವಸ್ಥೆಯಾಗಿಲ್ಲ. ಹಣ ಇರುವುದರಿಂದ ಹಣವನ್ನು ರಿಲೀಸ್ ಮಾಡಿ. ಶೇಕಡ ೨ ರಷ್ಟು ಹಣವನ್ನು ಮಾರ್ಕೆಟ್ ಕಟ್ಟಡ ಕ್ಕೋಸ್ಕರ ಕಲೆಕ್ಟ್ ಮಾಡುತ್ತಾರೆ. ನೀವು ಆ ಹಣವನ್ನು ರೈತರಿಗೆ ವಾಪಸ್ಸು ಕೊಡಬೇಕು. ೪೦ ಕೋಟಿ ರೂಪಾಯಿ ಶೇಖರಣೆಯಾಗಿದೆ. ರೈತರ ಅನುಕೂಲಕ್ಕಾಗಿ ಹಣವನ್ನು ಕಲೆಕ್ಟ್ ಮಾಡಿ, ಅದರ ಬಗ್ಗೆ ಯೋಚನೆಯನ್ನೆ ಮಾಡುತ್ತಿಲ್ಲ. ಈ ತರಹ ಮಾನ್ಯ ರಾಮಯ್ಯನವರು ಏತಕ್ಕೆ ಮಾಡು ತ್ತಾರೋ ನನಗೆ ಗೊತ್ತಿಲ್ಲ. ನಮ್ಮ ಜಿಲ್ಲೆಗೆ ಒಂದು ಸಿಲ್ಕ್ ಫಿಲೇಚರ್ ಕೊಡಬೇಕು. ಕೋಲಾರ ಜಿಲ್ಲೆಯ ಪ್ರತಿಯೊಂದು ತಾಲ್ಲೂಕುಗಳಲ್ಲೂ ರೇಷ್ಮೆ ಮಾರ್ಕೆಟ್ ಕಟ್ಟಿಸಿ ಕೊಡಬೇಕು. ಇದರ ಬಗ್ಗೆ ವೈಯಕ್ತಿಕವಾಗಿ ಅಫೀಶಿಯಲ್ ಆಗಿ ಬಹಳ ಸಾರಿ ಹೇಳಿದ್ದೇನೆ. ರೋಗರಹಿತ ಮೊಟ್ಟೆ ಸಿಗುತ್ತಿಲ್ಲ. ರೈತರಿಗೆ ಗ್ರೈನೇಜ್ ಮೊಟ್ಟೆ ಸಿಗುತ್ತಿಲ್ಲ. ಒಂದು ಬೆಳೆ ಕೆಟ್ಟು

ಹೋದರೆ ರೈತ ಒಂದು ವರ್ಷ ಸುಧಾರಿಸಿಕೊಳ್ಳಬೇಕಾಗುತ್ತದೆ. ರೋಗರಹಿತ ಮೊಟ್ಟೆಯನ್ನು ರೇಷ್ಮೆ ಬೆಳೆಗಾರರಿಗೆ ಕೊಡಿಸುವುದಕ್ಕೆ ಮಾನ್ಯ ಮಂತ್ರಿಗಳು ಶ್ರದ್ಧೆಯಿಂದ ಪ್ರಯತ್ನ ಮಾಡಬೇಕು. ಮಾರ್ಜಿನಲ್ ಫಾರ್ಮರ್‍ಸ್ ಏನಿದ್ದಾರೆ ಅವರು ಶೇಕಡಾ ೫೦ರಷ್ಟು ರೇಷ್ಮೆಯನ್ನು ಬೆಳೆಯುತ್ತಾರೆ. ಅವರು ಬಾವಿ ಮಾಡಿಕೊಳ್ಳುವುದಕ್ಕೆ ಸಬ್ಸಿಡಿ ಕೊಡಬೇಕು, ಒಂದು ತಾಲ್ಲೂಕಿಗೆ ಎರಡು ಶೆಡ್‌ಗಳನ್ನು ಕೊಡುತ್ತಿದ್ದಾರೆ. ಅದೊಂದು ದೊಡ್ಡ ವ್ಯಾಜ್ಯ ಆಗುತ್ತದೆ. ೨೦ ಸಾವಿರ ರೈತರು ಇದ್ದರೆ ಅವರಿಗೆ ಎರಡು ಶೆಡ್‌ಗಳನ್ನು ಕೊಟ್ಟರೆ ಅವರು ಹೇಗೆ ಮಾಡಬೇಕು ? ೪೦ ಕೋಟಿ ರೂಪಾಯಿ ಏನಿದೆ ಅದರಲ್ಲಿ ರೈತರಿಗೆ ಚಂದ್ರಿಕೆಗಳನ್ನು ಒದಗಿಸಿಕೊಡಬೇಕು. ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಇಂಡಸ್ಟ್ರೀಸ್ ಬಗ್ಗೆ ನಮ್ಮ ಡ್ಯೂಟಿಯಲ್ಲಿ ಫೇಲಾಗಿದ್ದಾರೆಂದು ಹೇಳಬೇಕಾಗುತ್ತದೆ. ಏಕೆಂದರೆ ಚೈನಾ ಸಿಲ್ಕ್ ಬಂದು ಕರ್ನಾಟಕದಲ್ಲಿ ರೇಷ್ಮೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಬೆಲೆಯ ಬಗ್ಗೆ ಕೇಂದ್ರ ಸರ್ಕಾರದವರು ನಮಗೆ ಮೋಸ ಮಾಡಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗಿದೆ. ಅದರ ಬಗ್ಗೆ ಸಹ ಸರ್ಕಾರ ಯೋಚನೆ ಮಾಡಬೇಕು. ಗಂಗಾ ಕಲ್ಯಾಣ ಯೋಜನೆಯಿಂದ ರೈತರಿಗೆ ಸಬ್ಸಿಡಿ ರೂಪದಲ್ಲಿ ಕೊಳವೆ ಬಾವಿಗಳನ್ನು ಮಾಡಿಸಿಕೊಡಬೇಕು. Transport ನಲ್ಲಿ Exploitations ಆಗುತ್ತಿದೆ. ರೇಷ್ಮೆಗೂಡನ್ನು ಮಾರ್ಕೆಟ್‌ಗೆ ತೆಗೆದುಕೊಂಡು ಹೋಗಬೇಕಾದರೆ ತುಂಬಾ ತೊಂದರೆಯಾಗಿದೆ. ಮಾನ್ಯ ಮಂತ್ರಿಗಳು ನಮ್ಮಲ್ಲಿಗೆ ಬಂದಾಗ ಹೇಳಿದ್ದೇವೆ. ವ್ಯಾನುಗಳನ್ನು ಒದಗಿಸಿಕೊಡಬೇಕು. ಕೋಲಾರ ಜಿಲ್ಲೆಯ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನವನ್ನು ಕೊಡಬೇಕು. ರೈತರು ಬದುಕಬೇಕು, ಅವರು ಬದುಕದಿದ್ದರೆ ಯಾರೂ ಕೂಡ ಉದ್ಧಾರವಾಗುವುದಿಲ್ಲ. ರೇಟು ಕೂಡ ಜಾಸ್ತಿ ಮಾಡಬೇಕು, ಇಷ್ಟು ಹೇಳಿ ನಾನು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಸಂಖ್ಯೆ ೫, ೭ ಮತ್ತು ೮ ಇವುಗಳ ಬಗ್ಗೆ ಮಾನ್ಯ ಹಿರಿಯ ಸದಸ್ಯರುಗಳು ಸಾಕಷ್ಟು ಸಲಹೆಗಳನ್ನು ಕೊಟ್ಟು ಇರುವಂತಹ ನ್ಯೂನ್ಯತೆಗಳನ್ನು ಎತ್ತಿ ತೋರಿಸಿದ್ದಾರೆ. ನಾನು ಮಾನ್ಯ ಸದಸ್ಯರು ಹೇಳಿರುವ ವಿಷಯಗಳನ್ನು ಬಿಟ್ಟು ಬೇರೆ ಎರಡು ಅಭಿಪ್ರಾಯಗಳನ್ನು ಹೇಳುತ್ತೇನೆ. ಇರುವಂತಹ ಮತ್ತು ಅದನ್ನು ಯಾವ ರೀತಿ ಸರಿಪಡಿಸಿಕೊಳ್ಳಬೇಕೆಂಬ ಬಗ್ಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಕೈಗಾರಿಕಾ ಮಂತ್ರಿಗಳಲ್ಲಿ ತಮ್ಮ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ ಬೆಂಗಳೂರು ನಗರದಲ್ಲಿರತಕ್ಕ ಸಾರ್ವಜನಿಕ ಉದ್ದಿಮೆಗಳು ಏನಿವೆ ಅದರಲ್ಲಿರತಕ್ಕ ಮೇಲಾಧಿಕಾರಿಗಳು ಕಾರ್ಖಾನೆಗಳಿಗೆ ಬೇಕಾದಂತಹ ಬಿಡಿ ಭಾಗಗಳನ್ನು ತಯಾರಿಸುವುದು ಮತ್ತಿತರ ಕೆಲಸವನ್ನು ಬೇರೆಯವರ ಕಡೆ ಮಾಡಿಸುತ್ತೇವೆಂದು ಹೇಳಿ ಅವರೇ ಸ್ವಂತವಾಗಿ ತಯಾರು ಮಾಡುತ್ತಿದ್ದಾರೆ. ಅಂತಹವರ ಒಂದು ಪಟ್ಟಿಯನ್ನು ನೋಡುವುದಾದರೆ, ಈ ಅಧಿಕಾರಿಗಳು ಕಾರ್ಖಾನೆಯ ಅಭಿವೃದ್ಧಿಯನ್ನು ಚಿಂತನೆ ಮಾಡದೆ ತಮ್ಮ ಸ್ವಾರ್ಥದಲ್ಲಿ ಮುಳುಗಿದ್ದಾರೆ. ಯಾವುದೇ ಸಾರ್ವಜನಿಕ ಉದ್ದಿಮೆ ತೆಗೆದುಕೊಂಡರೂ ಅಲ್ಲಿ ಬಿಡಿ ಭಾಗಗಳು ಇನ್ನಿತರ ಕೆಲಸ ಕಾರ್ಯಗಳು ಆಗಬೇಕಾಗಿದ್ದರೆ, ೫೦೦ ರೂಪಾಯಿ ೬೦೦ ರೂಪಾಯಿ ಕೆಲಸವನ್ನು ಫ್ಯಾಕ್ಟರಿಯಲ್ಲಿ ಮಾಡಿಸಿ ೧೦ ಸಾವಿರ ರೂಪಾಯಿಗಳಿಗೆ ಹೊರಗಡೆ ಮಾಡಿಸಲಾಗಿದೆಯೆಂದು ಲೆಕ್ಕಕ್ಕೆ ತೋರಿಸಿ ಹಣವನ್ನು ಮಾಡುವಂತಹ ವ್ಯವಸ್ಥಿತವಾದ ಕುತಂತ್ರ ನಡೆಯುತ್ತಿದೆ, ಇದನ್ನು ಪರಿಶೀಲನೆ ಮಾಡಿ ತಾವು ಸರಿಮಾಡಿದರೆ ಸ್ವಲ್ಪ ಉತ್ತಮವಾಗಬಹುದು. ಸಾರ್ವಜನಿಕ ಉದ್ದಿಮೆಗಳ ನೂರಾರು ಗೆಸ್ಟ್‌ಹೌಸ್‌ಗಳಿವೆ. ಈ ಗೆಸ್ಟ್‌ಹೌಸ್‌ಗಳು ಅಧಿಕಾರಿಗಳ ಮತ್ತು ರಾಜಕಾರಣಿಗಳ ವ್ಯವಹಾರ ಮಾಡುವಂತಹ ಅವ್ಯವಹಾರ ಕೇಂದ್ರಗಳು ಆಗಿವೆಯೆಂದು ನನ್ನ ಭಾವನೆ. ಸಾರ್ವಜನಿಕ ಉದ್ದಿಮೆಗಳ ಅಧಿಕಾರಿಗಳು ಹೋಟೆಲುಗಳಲ್ಲಿ ತಂಗಿ ಅದರ ಬಿಲ್‌ನ್ನು ಸರ್ಕಾರ ಕೊಟ್ಟರೆ ಏನೂ ಲಾಸ್ ಆಗುವುದಿಲ್ಲ. ಅವ್ಯವಹಾರವನ್ನು ಮಾಡುವಂತಹ ಗೆಸ್ಟ್‌ಹೌಸ್‌ಗಳನ್ನು ಮುಚ್ಚಿಸುವುದಕ್ಕೆ ಪ್ರಯತ್ನ ಮಾಡಿದರೆ ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆಂದು ನನ್ನ ಭಾವನೆ. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಸಾರ್ವಜನಿಕ ಉದ್ದಿಮೆಗಳ ಕಾರುಗಳ ಮೇಲೆ ಇಂತಹ ಉದ್ದಿಮೆಯ ಬೋರ್ಡ್, ನಿಗಮಕ್ಕೆ ಸಂಬಂಧಪಟ್ಟ ಕಾರು ಎಂದು ಬರೆಸಲಾಗಿತ್ತು. ಈಗ ಕಾರು ಯಾವುದು ಎಂದು ಗೊತ್ತಾಗುವುದಿಲ್ಲ. ಬೋರ್ಡ್‌ಗಳನ್ನು ಅಳಿಸಿ ಹಾಕಿದ್ದಾರೆ. ಈಗ ಆ ಕಾರನ್ನು ಯಾವ ಕೆಲಸಕ್ಕೆ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ಕೆಲವು ರಾಜಕಾರಿಣಿಗಳು ಫೋನ್ ಮಾಡಿದ ತಕ್ಷಣ ಕಾರು ಬರುತ್ತದೆ. ತಮ್ಮ ಸ್ವಂತಕ್ಕೆ ವಿಹಾರಕ್ಕೆ ರಾಜಕಾರಿಣಿಗಳು ಮತ್ತು ಅಧಿಕಾರಿಗಳು ಉಪಯೋಗಿಸಿಕೊಳ್ಳುವುದಕ್ಕೋಸ್ಕರ

ಬೋರ್ಡ್‌ಗಳನ್ನು ಅಳಿಸಿ ಕಾರುಗಳ ದುರುಪಯೋಗ ವ್ಯವಸ್ಥಿತವಾಗಿ ನಡೆಯುತ್ತಿದೆ. ಕಾರುಗಳ ದುರುಪಯೋಗವಾಗುವುದನ್ನು ನಿಲ್ಲಿಸುವುದಕ್ಕೆ ಮಾನ್ಯ ಮಂತ್ರಿಗಳು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ಹೊಸದಾಗಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡುವಂತಹ ಶಕ್ತಿ ಸರ್ಕಾರಕ್ಕೆ ಇಲ್ಲ. ಕರ್ನಾಟಕ ರಾಜ್ಯದಲ್ಲಿರುವ ಪ್ರಖ್ಯಾತವಾದ ವಿ.ಎಸ್.ಐ.ಎಲ್. ಮತ್ತು ಎಂ.ಪಿ.ಎಂ. ಇವುಗಳನ್ನು ಉಳಿಸಿಕೊಳ್ಳುವುದಕ್ಕೆ ಮಂತ್ರಿಗಳು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ವಾರ್ಷಿಕ ವರದಿ ೧೯೮೫–೮೬ರಲ್ಲಿ ಪುಟ ೧೭ರಲ್ಲಿ ಈ ರೀತಿ ಹೇಳಿದ್ದಾರೆ :

"ವರದಿಯ ವರ್ಷದಲ್ಲಿ ಪ್ರಮುಖ ಕಂಪನಿಯಾದ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ನಿಯಮಿತವು ಕೆಳಕಂಡ ಕಾರಣಗಳಿಂದಾಗಿ ನಷ್ಟವನ್ನು ಅನುಭವಿಸಿದೆ.

ಅ. ಹೆಚ್ಚುವರಿ ವಿದ್ಯುತ್ ಕಡಿತದಿಂದಾಗಿ ಸಾಮರ್ಥ್ಯಕ್ಕಿಂಥ ತೀವ್ರ ಕಡಿಮೆಯಾದ ಉತ್ಪಾದನೆ ಮತ್ತು ವಿದ್ಯುತ್ ದರದಲ್ಲಿ ಹೆಚ್ಚಳ

ಆ. ಮಾರುಕಟ್ಟೆ ಹಿಂಜರಿತ

ಈ ತರಹ ಕೆಲವರು ಕಾರಣಗಳನ್ನು ವರದಿಯಲ್ಲಿ ಕೊಟ್ಟಿದ್ದಾರೆ. ಭದ್ರಾವತಿ ವಿಶ್ವೇಶ್ವರಯ್ಯ ಕಬ್ಬಿಣ ಕಾರ್ಖಾನೆಯ ವಿಚಾರ ನನಗೂ ಗೊತ್ತಿದೆ ಮತ್ತು ಮಾನ್ಯ ಪಟೇಲ್‌ರವರಿಗೂ ಗೊತ್ತಿದೆ. ವರದಿಯಲ್ಲಿ ಹೇಳಿರತಕ್ಕದ್ದು ಸತ್ಯಕ್ಕೆದೂರವಾದದ್ದು. ೩.೫ ಮಿಲಿಯನ್ ಯೂನಿಟ್ ಪವರ್ ಅನ್ನು ಸರೆಂಡರ್ ಮಾಡಿರುತ್ತಾರೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವ ಕಾಲಕ್ಕೆ ಸರಿಯಾದ ಮಾಹಿತಿಯನ್ನು ತರಿಸಿಕೊಂಡು ಹೇಳಬೇಕು. ಈಗ ವಿದ್ಯುತ್‌ಗೆ ತೊಂದರೆ ಇರುವಾಗ ಅಲ್ಲಿಗೆ ಕೊಟ್ಟ ವಿದ್ಯುತ್ ಅನ್ನು ಉಪಯೋಗಿಸಿಕೊಳ್ಳದೆ ಅಧಿಕಾರಿಗಳು ಏನು ಮಾಡುತ್ತಿದ್ದರು ? ಮಾರುಕಟ್ಟೆ ಹಿಂಜರಿತ, ಸಾಮರ್ಥ್ಯಕ್ಕಿಂಥ ತೀವ್ರ ಕಡಿಮೆಯಾದ ಉತ್ಪಾದನೆ ಎಂದು ಹೇಳತಕ್ಕವರು ಕೊಟ್ಟ ವಿದ್ಯುತ್ ಅನ್ನು ಉಪಯೋಗಿಸಿಕೊಂಡಿಲ್ಲ. ಒಂದೂವರೆ ಕೋಟಿ ರೂಪಾಯಿ ಸಂಬಳ ಕೊಡುತ್ತಿದ್ದಾರೆ. ಅದಕ್ಕೋಸ್ಕರ ಎರಡು ಯೂನಿಟ್‌ಗಳು ಕೆಲಸ ಮಾಡುತ್ತಿವೆ. ಅಲ್ಲಿರುವಂತಹ ಅಧಿಕಾರಿಗಳು ಯಾವುದೇ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ.

ಕಾರ್ಮಿಕರಲ್ಲಿ ಗೊಂದಲ ಪ್ರಾರಂಭವಾಗಿದೆ. ಕಾರ್ಮಿಕರ ಜೊತೆ ಒಳ್ಳೆಯ ಸಂಬಂಧ ಇಲ್ಲ. ೫,೦೦೦ ಜನ ಹೆಚ್ಚು ಇದ್ದಾರೆಂದು ಹೇಳುತ್ತಾರೆ. ಅಲ್ಲಿಂದ ತೆಗೆದು ಬೇರೆ ಕಡೆಗೆ ಹಾಕಿ ಆ ಕಾರ್ಖಾನೆಯನ್ನು ಉಳಿಸಿಕೊಳ್ಳುವ ಕಡೆ ತಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡದಿದ್ದರೆ ಆ ಕಾರ್ಖಾನೆ ಹೆಚ್ಚು ದಿವಸ ಉಳಿಯುವುದಿಲ್ಲ. ದಯಮಾಡಿ ತಾವು ಅದರ ಕಡೆ ಗಮನ ಕೊಡಿ. ಒಂದು ಕಾರ್ಖಾನೆಯ ಬಗ್ಗೆ ಬಹಳ ಸೂಚ್ಯವಾಗಿ ಹೇಳುವುದಾದರೆ, ಎಂ.ಪಿ.ಎಂ.ನ ಎಕ್ಸ್‌ಪ್ಯಾನ್ಸನ್‌ನ ಹೆಸರಿನಲ್ಲಿ ಯೂನಿಟ್ಟೊಂದನ್ನು ಪ್ರಾರಂಭ ಮಾಡುವಂತಹ ನೆಪದಲ್ಲಿ ಹತ್ತಾರು ಕೋಟಿ ರೂಪಾಯಿಗಳ ದುರುಪಯೋಗ ಮಾಡಿ, ಆ ಕಾರ್ಖಾನೆಯನ್ನು ಮುಳುಗಿಸುವ ವ್ಯವಸ್ಥೆ ಇದೆ. ಈ ಎಕ್ಸ್‌ಪ್ಯಾನ್ಸನ್‌ನ ೧೦೦ ಕೋಟಿ ರೂಪಾಯಿಗಳ ಅಂದಾಜನ್ನು ತೆಗೆದುಕೊಂಡು, ಅದರಲ್ಲಿ ಖರ್ಚುಮಾಡಿರುವುದರ ವಿವರಗಳನ್ನು ತೆಗೆದುಕೊಂಡರೆ ಹತ್ತಾರು ಕೋಟಿ ರೂಪಾಯಿಗಳವರೆಗೆ ದುರುಪಯೋಗವಾಗಿರುವ ಕೆಲವು ನಿದರ್ಶನಗಳು ಉಂಟು. ಬೇಕಾದರೆ ಹೆಚ್ಚು ಸಮಯವಿಲ್ಲ. ಅದರ ಪಟ್ಟಿಯನ್ನೇ ಕಳುಹಿಸಿ ಕೊಡುತ್ತೇನೆ. ದಯಮಾಡಿ ತಾವು ತನಿಖೆ ಮಾಡಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿರುವಂತಹ ವಿ.ಐ.ಎಸ್.ಎಲ್. ಹಾಗೂ ಎಂ.ಪಿ.ಎಂ. ಅನ್ನು ಉಳಿಸುವ ದೃಷ್ಟಿಯಿಂದ ತಾವು ಕೆಲಸ ಮಾಡಬೇಕು. ನಮ್ಮ ಜಿಲ್ಲಾ ಮಂತ್ರಿಗಳೂ ಕೂಡ ತಾವು ಆಗಿದ್ದೀರಿ. ಇದು ನಮ್ಮ ಜಿಲ್ಲೆಯ ಗೌರವದ ಪ್ರಶ್ನೆ. ಅಂತಹ ಕಾರ್ಖಾನೆಗಳನ್ನು ಉಳಿಸಿಕೊಳ್ಳುವ ಕೆಲಸವನ್ನು ತಾವು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಪಟ್ಟಿ ನನ್ನಲ್ಲಿದೆ. ಅನಿವಾರ್ಯವಾಗಿ ಅದನ್ನು ಇಲ್ಲಿ ಹೇಳಲೇಬೇಕಾಗಿದೆ. ಗೌರ್ನಮೆಂಟ್ ಟೂಲ್ ರೂಮ್ ಸೆಂಟರ್ ಅಂತ ಇದೆ. ನಿಜ, ಮೊದಲು ಇದು ಲಕ್ಷಾಂತರ ರೂಪಾಯಿಗಳ ಲಾಸ್‌ನಲ್ಲಿತ್ತು. ಅಲ್ಲಿರುವ ನೌಕರರು ಹಾಗೂ ಅಧಿಕಾರಿಯ ಪ್ರಾಮಾಣಿಕ ಪ್ರಯತ್ನದಿಂದ ಒಂದು ಕೋಟಿ ರೂಪಾಯಿಗಳವರೆಗೆ ಲಾಭ ಬರುವ

ಸ್ಥಿತಿಗೆ ಬಂತು. ಅದೂ ನಿಜ. ಅಂತಹ ಕಡೆಯೂ ಕೂಡ ವ್ಯವಸ್ಥಿತವಾಗಿ ಯಾವ ರೀತಿ ಮೋಸ ನಡೆಯುತ್ತಿದೆ ? ಯಾವ ರೀತಿ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ, ಎನ್ನುವುದಕ್ಕೆ ೨-೩ ನಿದರ್ಶನಗಳನ್ನು ಹೇಳಬೇಕಾಗಿದೆ. ನೈಜೀರಿಯಾದವರು ಕಿಂಕೋ ಕಾರ್ಖಾನೆಯಲ್ಲಿ ತಯಾರು ಮಾಡುವಂತಹ ಕೆಲವು ಉಪಕರಣಗಳಿಗೆ ಆರ್ಡರನ್ನು ಕೊಟ್ಟರು. ಅದನ್ನು ಅಲ್ಲಿರತಕ್ಕಂತಹ ಒಬ್ಬ ಅಧಿಕಾರಿ ಏನು ಮಾಡಿದ್ದಾರೆಂದರೆ ಅದನ್ನು ಜಿ.ಟಿ.ಡಿ.ಸಿ.ಗೆ ವರ್ಗಾಯಿಸಿದರು. ಮೊದಲು ಆ ಆರ್ಡರ್‌ನ ಕಂಡೀಷನ್ ಏನು ಇತ್ತು ಎಂದರೆ, ೯ ಪರ್ಸೆಂಟ್ ಹಾಟ್ ಡೈಸ್ ಸ್ಟೀಲನ್ನು ಉಪಯೋಗಿಸಿ ಮಾಡಿಕೊಡಿ ಎಂಬುದಾಗಿ ಅವರು ಆರ್ಡರ್ ಕೊಟ್ಟಿದ್ದರು. ಅದನ್ನು ೫ ಪರ್ಸೆಂಟ್‌ನ ಕ್ರೋಮಿಯೋ ಸ್ಟೀಲ್ ಮೆಟೀರಿಯಲ್ಸ್‌ನ್ನು ಉಪಯೋಗ ಮಾಡಿ ಅಲ್ಲಿಗೆ ಆ ಉಪಕರಣವನ್ನು ಕಳುಹಿಸಿಕೊಟ್ಟಿದ್ದಾರೆ. ಯಾರು ಪರ ರಾಷ್ಟ್ರದವರು ೯ ಪರ್ಸೆಂಟ್ ಹಾಟ್ ಡೈಸ್ ಸ್ಟೀಲನ್ನು ಉಪಯೋಗ ಮಾಡಬೇಕೆಂದು ಹೇಳಿದ್ದಾರೋ, ಅದರ ಬದಲು ೫ ಪರ್ಸೆಂಟ್ ಕ್ರೋಮಿಯೋ ಸ್ಟೀಲ್ ಮೆಟೀರಿಯಲ್‌ನ್ನು ಉಪಯೋಗ ಮಾಡಿ ಅವರಿಗೆ ದ್ರೋಹ ಮಾಡಿದ್ದಾರೆ. ಈ ರೀತಿ ಮಾಡಿದರೆ ಹೊರ ರಾಷ್ಟ್ರಗಳಲ್ಲಿ ನಮ್ಮ ಬಗ್ಗೆ ಇರುವಂತಹ ರೆಪ್ಯುಟೇಷನ್ ಉಳಿಯುತ್ತದೆಯೇ. ಇದು ದೇಶ ದ್ರೋಹ ಆಗುವುದಿಲ್ಲವೇ ? ನಮ್ಮ ಬಗ್ಗೆ ಅವರಿಗೆ ಇರುವಂತಹ ಗೌರವಕ್ಕೆ ಧಕ್ಕೆ ಬರುವುದಿಲ್ಲವೇ ? ಈ ರೀತಿ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿರುವ ಅಧಿಕಾರಿಗಳು ಬಹಳಷ್ಟು ಕಡೆ ತಾಂತ್ರಿಕ ಸಲಹೆಗಾರರಾಗಿದ್ದಾರೆ. ಹೊರದೇಶಗಳಿಗೆ ಅವರು ಹೋದಾಗ ಅವರ ಕಾರ್ಖಾನೆಯ ವ್ಯವಹಾರ ಮಾಡಿಕೊಂಡು ಬರುತ್ತಾರೆ. ಇವರೇ ತಾಂತ್ರಿಕ ಸಲಹೆಗಾರರು. ಅಲ್ಲಿ ಎಲ್ಲ ವ್ಯವಹಾರ ಮುಗಿಸಿಕೊಂಡು ಬರುತ್ತಾರೆ. ಅಂತಹ ಅಧಿಕಾರಿಗಳು ಬಹಳಷ್ಟು ಜನ ಇದ್ದರೂ, ಒಬ್ಬರ ಹೆಸರನ್ನು ನಾನು ಇಲ್ಲಿ ಅನಿವಾರ್ಯವಾಗಿ ಹೇಳಲೇಬೇಕಾಗಿದೆ. ಶ್ರೀ ಪಾರ್ಥಸಾರಥಿಯವರ ಟಿ.ಎ. ಡಿ.ಎ. ಒಂದು ವರ್ಷದಲ್ಲಿ ೩ ಲಕ್ಷ ರೂಪಾಯಿಗಳನ್ನು ಮಾಡಿದ್ದಾರೆಂಬ ಅಂದಾಜು ಇದೆ. ಯಾವ್ಯಾವುದಕ್ಕೆ ಎಷ್ಟೆಷ್ಟು ಖರ್ಚಾಗಿದೆ ಎಂಬುದನ್ನು ನೋಡಬೇಕಾಗಿದೆ. ಅವರಿಗೆ ಸಂಬಳ ಬೇಕಾಗಿಲ್ಲ. ಗೌರವ ಸಂಭಾವನೆ ಎಂಬುದಾಗಿ ಒಂದು ರೂಪಾಯಿಯನ್ನು ಮಾತ್ರ ಪಡೆಯುತ್ತಿದ್ದಾರೆಂದು ಕೇಳಿದ್ದೇನೆ. ಅವರು ಬೇರೆ ರೀತಿಯಲ್ಲಿ ದುರುಪಯೋಗ ಮಾಡುತ್ತಿರುವುದರ ಬಗ್ಗೆ ವಿವರಗಳು ನನ್ನಲ್ಲಿವೆ. ಅದೇ ರೀತಿ ಇನ್ನೊಬ್ಬ ಅಧಿಕಾರಿ ಎಲ್. ಜಿ. ಬಾಲಕೃಷ್ಣ ಎಂಬುದಾಗಿ ಇದ್ದಾರೆ, ಅವರು ಹೈದರಾಬಾದ್‌ನ ಎಲೆಕ್ಟ್ರಾನಿಕ್ ಲಿಮಿಟೆಡ್‌ನ ತಾಂತ್ರಿಕ ಸಲಹೆಗಾರರೂ ಕೂಡ ಆಗಿದ್ದಾರೆ. ಜಿ.ಟಿ.ಡಿ.ಸಿ.ಯಿಂದ ಆರ್ಡರ್‌ಗಳನ್ನು ತರಿಸುತ್ತಾರೆ. ಮತ್ತೆ ಇವರು ಆರ್ಡರ್ ಕೊಡುವಾಗ ಲೆಕ್ಕ-ಬುಕ್ಕ ಏನೂ ಇಲ್ಲ. ಒಂದು ಲಕ್ಷ ರೂಪಾಯಿಗಳ ಬೆಲೆ ಬಾಳುವಂತಹದ್ದನ್ನು ೫೦ ಸಾವಿರ ರೂಪಾಯಿಗಳಿಗೆ ಆರ್ಡರ್ ಕೊಡುತ್ತಾರೆ. ಅವರಿಗೆ ಸಂಬಳ ಬೇಡ. ಈ ರೀತಿಯ ವ್ಯವಹಾರಗಳಿಂದ ಸಾಕಷ್ಟು ಹಣ ದುರುಪಯೋಗವಾಗುತ್ತಿರುವುದಕ್ಕೆ ಸಾಕಷ್ಟು ನಿದರ್ಶನಗಳು ಇವೆ. ಒಬ್ಬರ ಹೆಸರನ್ನು ಹೇಳುವುದರಿಂದ ಉಳಿದವರು ಎಚ್ಚರದಿಂದಿರಬೇಕು ಎಂಬುದಾಗಿ ಹೇಳುತ್ತಿದ್ದೇನೆ. ಈ ರಾಜ್ಯದಲ್ಲಿ ಇಂತಹ ಜನರನ್ನು ನೋಡುವವರಿದ್ದಾರೆ. ಇಂತಹವರ ಬಗ್ಗೆ ಗಮನಕೊಟ್ಟು ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಹೆಬ್ಬಾಳ್‌ನ ಒಬ್ಬ ವ್ಯಕ್ತಿಯಿಂದ ಅಂದರೆ ಕರ್ನಾಟಕ ಇಂಜಿನೀಯರಿಂಗ್ ಎಂಬ ಸಂಸ್ಥೆಯೊಂದಿದೆ. ಅವರಿಂದ ಕಡಿಮೆ ಮಟ್ಟದ ಕೆಲವು ಅಸನ ಸಾಮಗ್ರಿಗಳನ್ನು ತರಿಸಿಕೊಂಡು ಲಕ್ಷಾಂತರ ರೂಪಾಯಿಗಳ ವ್ಯವಹಾರ ಮಾಡಿದ್ದಾರೆ. ಇದು ಆದ ಮೇಲೆ ಇವರಿಗೆ ಉಪಕಾರ ಮಾಡಿದ ಪರಿಣಾಮವಾಗಿ ಡೈರೆಕ್ಟರ್ ಆಗಿರುವಂತಹ ಶ್ರೀ ಪಾರ್ಥಸಾರಥಿಯವರು ರಾಜಮಹಲ್ ವಿಲಾಸ್ ೨ನೇ ಹಂತದಲ್ಲಿ ಎರಡು ಎಕರೆ ಜಮೀನನ್ನು ಪಡೆದಿದ್ದಾರೆ. ಇತ್ತೀಚೆಗೆ ಇವರು ಹೊರ ದೇಶಕ್ಕೆ ಹೋಗಿದ್ದಾಗ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟು ೬ ತಿಂಗಳ ಹಿಂದೆ ವೈರ್ ಏರೋಜನ್ ಮಿಷನ್‌ನ್ನು ಖರೀದಿ ಮಾಡಿದ್ದಾರೆ. ಇತ್ತೀಚಿನ ದಿವಸಗಳಲ್ಲಿ ಆಧುನಿಕ ಮಿಷನ್ ಅದು. ಅದರ ಕಂಪ್ಯೂಟರ್ ಮೆದುಳನ್ನೇ ಹೆಗ್ಗಣಗಳು ಪೂರ್ತಿಯಾಗಿ ಕಡಿದು ಹಾಕಿವೆ. ೨೫ ಲಕ್ಷ ರೂಪಾಯಿಗಳ ಮೇಶಿನ್ ಮೂಲೆಗುಂಪಾಗಿ ಬಿದ್ದಿದೆ. ಆ ಮಿಷನ್‌ನ್ನು ಹಾಳಾಗುವುದಕ್ಕೆ ಅಲ್ಲಿರುವಂತಹ ಇನ್ನೊಬ್ಬ ಅಧಿಕಾರಿ ಕಾರಣ. ಅವರು ಪ್ರಭಾವಿ ಮಾಜಿ ರಾಜಕಾರಿಣಿ, ಜವಾಬ್ದಾರಿ ರಾಜಕಾರಿಣಿಯ ಬೆಂಬಲ ಇರುವುದರಿಂದ ಅವರ ಮೇಲೂ ಕ್ರಮ ತೆಗೆದುಕೊಳ್ಳುವುದಕ್ಕಾಗಿಲ್ಲ. ಮತ್ತೆ ಶ್ರೀ ಪಾರ್ಥಸಾರಥಿಯವರ ಮೇಲೂ ಕ್ರಮ ತೆಗೆದು ಕೊಳ್ಳಲಿಕ್ಕಾಗಿಲ್ಲ ಅಲ್ಲಿ ಈ ರೀತಿಯ ಭ್ರಷ್ಟಾಚಾರ ಅವ್ಯಾಹತವಾಗಿ ನಡೆಯುತ್ತಿದೆ. ಅಲ್ಲಿರುವಂತಹ

ಅಧಿಕಾರಿಗಳು ಹೊರಗಡೆ ಸಣ್ಣಪುಟ್ಟ ಕಾರ್ಖಾನೆಗಳನ್ನು ಅವರ ಮಕ್ಕಳ ಹೆಸರಿನಲ್ಲಿ, ಹೆಂಡತಿ ಹೆಸರಿನಲ್ಲಿ, ಮಾವನ ಹೆಸರಿನಲ್ಲಿ, ಅಕ್ಕನ ಹೆಸರಿನಲ್ಲಿ ಮತ್ತು ಅಣ್ಣ-ತಮ್ಮಂದಿರ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ. ಅಲ್ಲಿಂದಲೇ ಎಲ್ಲಾ ಕಚ್ಚಾ ಸಾಮಗ್ರಿಗಳನ್ನು ತರಿಸಿಕೊಳ್ಳುವಂತಹದ್ದು. ಎಲ್ಲ ಆರ್ಡರ್‌ಗಳನ್ನು ಅಲ್ಲಿಗೇ ಕೊಟ್ಟು ಇಲ್ಲೇ ಮಾಡಿದ್ದೇವೆಂದು ಹೇಳಿ ಪೇಮೆಂಟ್ ಮಾಡುವಂತಹದ್ದು ಈ ರೀತಿಯ ಅವ್ಯವಹಾರ ಅಲ್ಲಿರುವುದರಿಂದ, ಅಲ್ಲಿರುವಂತಹ ಅಧಿಕಾರಿಗಳು ಈ ಮಟ್ಟಕ್ಕೆ ಇಳಿದಾಗ, ಅಲ್ಲಿರುವಂತಹ ಸಾಮಾನ್ಯ ನೌಕರರು ಪ್ರಾಮಾಣಿಕವಾಗಿರಬೇಕು ಎಂದು ಹೇಗೆ ಅಪೇಕ್ಷೆ ಮಾಡುವುದಕ್ಕಾಗುತ್ತದೆ ? ಕೊನೆಯ ಪಕ್ಷ ಶ್ರೀ ಜೆ. ಎಚ್. ಪಟೇಲ್‌ರವರು ಅಧಿಕಾರವನ್ನು ವಹಿಸಿಕೊಂಡಂತಹ ಸಂದರ್ಭದಲ್ಲಾದರೂ ಈ ರೀತಿಯ ನ್ಯೂನತೆಗಳು ಏನು ಇವೆ, ಅವುಗಳನ್ನು ಸರಿಪಡಿಸುವ ಸಲುವಾಗಿ ಕಾರ್ಖಾನೆಗಳಿಗೆ ತಾವು ಹೋಗಬೇಕು. ಹೋದಂತಹ ಸಂದರ್ಭದಲ್ಲಿ ಅಧಿಕಾರಿಗಳನ್ನು ಪಕ್ಕದಲ್ಲಿಟ್ಟು ಅಲ್ಲಿರುವ ಪ್ರಾಮಾಣಿಕ ನೌಕರರನ್ನು ಕರೆದು ಇಲ್ಲಿ ಏನು ನಡೆಯುತ್ತಿದೆ ಎಂಬುದಾಗಿ ಕೇಳಿದಾಗ ಬಹಳಷ್ಟು ಸತ್ಯ ಸಂಗತಿ ನಿಮಗೆ ಅವರು ಹೇಳುತ್ತಾರೆ. ಅಲ್ಲಿರುವಂತಹ ನ್ಯೂನತೆಗಳು ನಿಮ್ಮ ಗಮನಕ್ಕೆ ಬಂದ ತಕ್ಷಣ ಅವುಗಳನ್ನು ಸರಿಪಡಿಸುವ ಕಡೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕಾಗುತ್ತದೆ.

ಇನ್ನು ಎನ್. ಜಿ. ಇ. ಎಫ್. ನಲ್ಲಿ ಮೊದಲು ಶ್ರೀ ಮುತ್ತಣ್ಣನವರು ಇದ್ದಾಗ ಅವರು ಪ್ರಾಮಾಣಿಕವಾಗಿ ಕೆಲಸ ಮಾಡಿ, ಒಳ್ಳೆಯ ಸ್ಥಿತಿಗೆ ತಂದಿದ್ದರು. ಇವತ್ತು ಅಲ್ಲಿಗೆ ಬೇರೊಬ್ಬ ಅಧಿಕಾರಿಯನ್ನು ಹಾಕಿದ್ದೀರಿ. ಆ ಒಂದು ಪರಿಣಾಮವಾಗಿ ಎನ್, ಜಿ. ಇ. ಎಫ್. ಕಾರ್ಖಾನೆ ಸಿಕ್ ಇಂಡಸ್ಟ್ರೀಸ್ ಆಗುವಂತಹದ್ದು ನಿಶ್ಚಿತ. ಅಧಿಕಾರಿಗಳು ಬಹಳ ಬುದ್ಧಿವಂತರು ಇದ್ದಾರೆ. ಆ ಕಾರ್ಖಾನೆಯನ್ನು ಉಳಿಸುವ ಕಡೆ ಅವರ ಬುದ್ಧಿವಂತಿಕೆ ಖರ್ಚಾಗದೆ ಇವತ್ತು ಈ ಸ್ಥಿತಿಗೆ ಕಾರ್ಖಾನೆ ಬಂದಿದೆ. ಶ್ರೀ ಸಚ್ಚಿದಾನಂದ ಮೂರ್ತಿಯವರು ಇದ್ದಂತಹ ಸಂದರ್ಭದಲ್ಲಿ ವೆಸ್ಟ್ ಜರ್ಮನಿಯವರು ಒಂದು ಡೆಲಿಗೇಷನ್ ಬಂದಿತ್ತು. ಆ ಸಂದರ್ಭದಲ್ಲಿ ಎನ್.ಜಿ.ಇ.ಎಫ್. ಬಗ್ಗೆ ಎಂತಹ ಗೌರವ ಇಟ್ಟುಕೊಂಡಿದ್ದಾರೆ ಎಂಬುದಕ್ಕೆ ಅವರು ಬಂದಿದ್ದಾಗ ಆ ಬಗ್ಗೆ ಒಂದು ವಾಕ್ಯವನ್ನು ಬರೆದಿದ್ದಾರೆ :—

> An average worker in N.G.E.F. is nowhere inferior to a german technician "

ಈ ರೀತಿ ಜರ್ಮನಿಯವರು ಅಪ್ರಿಸಿಯೇಟ್ ಮಾಡಿ ಹೋಗಿರುವಂತಹ ಎನ್.ಜಿ.ಇ.ಎಫ್. ಇವತ್ತು ಈ ಒಂದು ಹೀನ ಸ್ಥಿತಿಗೆ ಬಂದಿದೆ. ಬುದ್ಧಿವಂತ ಅಧಿಕಾರಿಗಳೆಂದು ಯಾರನ್ನು ನೀವು ನಂಬಿ ಕಳುಹಿಸಿಕೊಡುತ್ತೀರಿ, ಅವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೆ, ಅಲ್ಲಿರುವ ಅಧಿಕಾರಿಗಳನ್ನು ಅಲ್ಲಿರುವಂತಹ ಕಾರ್ಮಿಕರನ್ನು ಕಾನ್ಫಿಡೆನ್ಸಿಗೆ ತೆಗೆದುಕೊಂಡು ಅಲ್ಲಿರುವಂತಹ ಕಾರ್ಖಾನೆಯನ್ನು ಉಳಿಸಬೇಕು, ಆ ಒಂದು ಉದ್ದಿಮೆಯನ್ನು ನಡೆಸಬೇಕೆಂಬುದು ಪ್ರಯತ್ನ ಮಾಡುತ್ತಿಲ್ಲ ಉದ್ದೇಶಪೂರ್ವಕವಾಗಿ ಒಂದೇ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಇನ್ನೂ ಬಹಳಷ್ಟು ಹೆಸರು ಇವೆ. ಇದರಲ್ಲಿ ಪ್ರಾಮಾಣಿಕ ಪ್ರಶ್ನೆ ಅಡಕವಾಗಿದೆ. ಇಂತಹ ಒಂದು ವಿಶೇಷ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಕೂಡ ಸರಿ ಇಲ್ಲ. ರಾಜ್ಯದಲ್ಲಿ ಭೀಕರ ಬರಗಾಲ ಬೇರೆ. ಒಳ್ಳೆಯ ಕೆಲಸವನ್ನು ಮಾಡಬೇಕು. ಕೆಲವು ಕಾರ್ಖಾನೆಗಳನ್ನು ಹಿಂದಿನವರು ಪ್ರಾರಂಭ ಮಾಡಿದ್ದಾರೆ. ಅಂತಹ ಕಾರ್ಖಾನೆಗಳನ್ನು ಉಳಿಸುವ ಕಡೆ ಪ್ರಾಮಾಣಿಕ ಪ್ರಯತ್ನವನ್ನು ಅಲ್ಲಿರುವಂತಹ ಅಧಿಕಾರಿಗಳು ಮಾಡಬೇಕು. ಹಿಂದಿನವರು ಮಾಡಿರುವಂತಹ ಕಾರ್ಖಾನೆಗಳಲ್ಲಿರುವಂತಹ ಅಧಿಕಾರಿಗಳು ಹೀನ ಮಟ್ಟಕ್ಕೆ ಇಳಿಯಬಾರದು. ಅಲ್ಲಿರುವಂತಹ ಕಾರ್ಮಿಕರು ಹೀನ ಮಟ್ಟಕ್ಕೆ ಇಳಿಯಬಾರದು. ಇವರಿಬ್ಬರೂ ಸೇರಿ ಆ ಕಾರ್ಖಾನೆಗಳನ್ನು ಉಳಿಸುವ ಕಡೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ವಿನಂತಿಸುತ್ತೇನೆ. ನಿರುದ್ಯೋಗ ಪದವೀಧರರುಗಳಿಗೆ ಸ್ವಯಂ ಉದ್ಯೋಗ ಯೋಜನೆಯಲ್ಲಿ ೨೫,೦೦೦ ರೂಪಾಯಿಗಳನ್ನು ಕೊಡುವ ಒಂದು ಯೋಜನೆ ಇದೆ. ನಿಮ್ಮ ಸಾಧನೆಯ ಪ್ರಕಾರ ೧೯೮೩-೮೪ರಲ್ಲಿ ೧೨,೦೦೦ ಜನರಿಗೆ ಸಹಾಯವನ್ನು ಕೊಟ್ಟಿದ್ದೇವೆಂದು ತಿಳಿಸಿದ್ದೀರಿ. ನಂತರ

೧೯೮೪-೮೫ರಲ್ಲಿ ೧೨.೮೭೦ ಜನರಿಗೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ನಂತರ ಈ ವರ್ಷ ೧೨,೪೦೦ ಟಾರ್ಗೆಟ್ ಇದೆ ಎಂಬುದಾಗಿ ತಿಳಿಸಿದ್ದೀರಿ. ಆದರೆ ಅರ್ಜಿಗಳು ಬಂದಿರುವಂತಹವುಗಳು ೫೭,೦೦೦ ಎಂಬುತಾಗಿ ಹೇಳಿದ್ದೀರಿ. ಇದು ತುಂಬಾ ಉಪಯುಕ್ತವಾಗಿರುವಂತಹದ್ದು. ಇದರ ಸಂಖ್ಯೆಯನ್ನು ಜಾಸ್ತಿ ಮಾಡಿ ಹೆಚ್ಚು ಜನರಿಗೆ ಅನುಕೂಲವಾಗಬೇಕು. ೨೫ ಸಾವಿರ ಎಂಬುದಾಗಿ ಹೇಳಿದಾಗ

ದಯಮಾಡಿ ಅದರ ಪಟ್ಟಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ. ಈ ರೀತಿ ಕಳೆದ ಮೂರು ವರ್ಷಗಳಿಂದ ಮಂಜೂರು ಆಗಿರುವಂತಹ ಸಂಖ್ಯೆಯಲ್ಲಿ ಶೇಕಡಾ ೫೦ರಷ್ಟು ಅಲ್ಲಿರುವ ಅಧಿಕಾರಿಗಳಿಗೋಸ್ಕರ ಖರ್ಚು ಮಾಡಿದ್ದಾರೆ. ೨೫,೦೦೦ ರೂ.ಗಳ ಸಹಾಯವನ್ನು ತೆಗೆದುಕೊಳ್ಳಬೇಕಾದರೆ, ೫ ಸಾವಿರ, ೩ ಸಾವಿರ ಹಾಗೂ ೨ ಸಾವಿರ ಲಂಚ ಕೊಡಬೇಕಾಗುತ್ತದೆ. ಜೊತೆಗೆ ಕೊಟ್ಟ ರೀತಿಯಲ್ಲಿ ಕೊಡುತ್ತಾರೆ. ಪ್ರಾಮಾಣಿಕವಾಗಿ ಮುಂದೆ ಬರಬೇಕೆಂದು ಪ್ರಯತ್ನ ಮಾಡಿದರೂ ಪೂರ್ಣವಾಗಿ ಅವರಿಗೆ ೨೫,೦೦೦ರೂ. ತಲುಪುವುದಿಲ್ಲ. ಇದಕ್ಕೋಸ್ಕರ ಕೇಂದ್ರ ಸರ್ಕಾರ ೨೫ ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದಾರೆ. ಈ ಯೋಜನೆಯಡಿಯಲ್ಲಿ ಹಣವನ್ನು ಕೊಡಬೇಕಾದರೆ ಬ್ಯಾಂಕಿನ ಅಧಿಕಾರಿಗಳು ಹಿಂದೆ-ಮುಂದೆ ನೋಡುತ್ತಾರೆ. ಇದರ ಕಡೆ ಮಂತ್ರಿಗಳು ಗಮನಹರಿಸಬೇಕು.

ಇನ್ನು ರೇಷ್ಮೆ ಇಲಾಖೆ. ರೇಷ್ಮೆ ಇಲಾಖೆ ಬಗ್ಗೆ ನಾನು ಹೇಳುವುದಿಲ್ಲ. ಮಾನ್ಯ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ. ಶಿಕಾರಿಪುರ ತಾಲ್ಲೂಕು, ನಿಮ್ಮ ಅಧಿಕಾರಿಗಳು ಹೇಳುವ ಪ್ರಕಾರ ರೇಷ್ಮೆಗೆ ತುಂಬಾ ಅನುಕೂಲವಾದುದು ಎಂಬುದಾಗಿ ಹೇಳುತ್ತಿದ್ದಾರೆ. ಅಲ್ಲಿ ಫಲವತ್ತಾದ ಭೂಮಿ ಇದೆ. ಇದನ್ನು ರೇಷ್ಮೆಗೆ ಉಪಯೋಗ ಮಾಡಿಕೊಳ್ಳಬೇಕೆಂದು ಎಕ್ಸ್‌ಪರ್ಟ್ಸ್ ಹೇಳಿದ್ದಾರೆ. ನಿಮಗೆ ಬೇಕಾದಂತಹ ಎಲ್ಲ ಸಹಕಾರವನ್ನು ಕೊಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ತಮ್ಮಂತಹ ಪ್ರಾಮಾಣಿಕ ಮಂತ್ರಿಗಳು ಇರುವಂತಹ ಸಂದರ್ಭದಲ್ಲಿ ಇದರ ಕಡೆ ಗಮನ ಕೊಡಬೇಕು. ಸಣ್ಣ ಕೈಗಾರಿಕೆಗಳ ಮಂತ್ರಿಗಳ ಬಗ್ಗೆ ನನಗೆ ಬಹಳ ಗೌರವ. ಅವರು ಯುವಕರು ಇದ್ದಾರೆ, ಪ್ರಾಮಾಣಿಕರು ಇದ್ದಾರೆ, ಒಳ್ಳೆಯ ಕೆಲಸಮಾಡಬೇಕೆಂಬ ಉತ್ಸಾಹದಿಂದಿದ್ದಾರೆ. ಇಂತಹ ನ್ಯೂನತೆಗಳನ್ನು ನಿಮ್ಮ ಗಮನಕ್ಕೆ ತಂದಾಗ ಅದನ್ನು ಸರಿಪಡಿಸುವ ಕಡೆ ಗಮನ ಕೊಟ್ಟಾಗ ಮಾತ್ರ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಉಳಿಯುತ್ತವೆ. ಈ ರೀತಿಯ ನ್ಯೂನತೆಗಳನ್ನು ಒಂದೊಂದು ಸಂದರ್ಭದಲ್ಲೂ ನಿಮಗೆ ವಿವರಗಳನ್ನು ಕೊಡುತ್ತೇವೆ. ಅವುಗಳನ್ನು ತೆಗೆದುಕೊಂಡು ಯಾರ ಮುಲಾಜಿಗೂ ಬಗ್ಗದೆ ತಪ್ಪು ಮಾಡಿದವರನ್ನು ಸದೆ ಬಡಿಯುವ ಪ್ರಯತ್ನ ಮಾಡಿದಾಗ ಮಾತ್ರ ಕಾರ್ಖಾನೆಗಳು ಉಳಿಯುತ್ತವೆ ಎನ್ನುವ ಮಾತನ್ನು ಹೇಳುತ್ತಾ, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೬-೩೦ ಪಿ.ಎಂ.

ಶ್ರೀ ಜಿ. ರಾಮಕೃಷ್ಣ (ಕಮಲಾಪುರ).—ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ ಕೈಗಾರಿಕಾ ಇಲಾಖೆಯ ಮೇಲೆ ಬಹಳಷ್ಟು ಮಂದಿ ಸದಸ್ಯರು ತಮ್ಮ ವಿಚಾರಗಳನ್ನು ಇಟ್ಟಿದ್ದಾರೆ. ನಾನು ಸ್ವಲ್ಪ ಸಮಯದಲ್ಲಿ ನನ್ನ ಕೆಲವು ವಿಚಾರಗಳನ್ನು ಇಡಬಯಸುತ್ತೇನೆ. ಸ್ವಯಂ ಉದ್ಯೋಗಕ್ಕಾಗಿ ಪ್ರತಿಯೊಬ್ಬರಿಗೆ ೨೫ ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಸರ್ಕಾರ ಯೋಜನೆಯನ್ನು ಹಾಕಿಕೊಂಡಿದೆ. ಆದರೆ ಈ ವರ್ಷದಲ್ಲಿ ೧೨೪೦೦ ಜನರಿಗೆ ಆಗುವಷ್ಟು ಹಣವನ್ನು ಮಾತ್ರ ಇಟ್ಟಿದ್ದಾರೆ. ಈಗಾಗಲೇ ೫೭ ಸಾವಿರ ಅರ್ಜಿಗಳು ಬಂದಿವೆ ಎಂದು ತಿಳಿದುಬಂದಿದೆ. ಡಿ.ಐ.ಸಿ.ಯವರಿಗೆ ಅರ್ಜಿಕೊಟ್ಟ ಮೇಲೆ ಸಂದರ್ಶನಕ್ಕೆ ಕರೆಯುತ್ತಾರೆ. ಸಂದರ್ಶನ ಆದಮೇಲೆ ೧೨೪೦೦ ಜನರನ್ನು ಮಾತ್ರ ಆರಿಸುತ್ತಾರೆ. ಆರಿಸಿದಂಥ ಜನರನ್ನು ಬ್ಯಾಂಕಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಕಳುಹಿಸುತ್ತಾರೆ. ಆ ೧೨೪೦೦ ಜನರ ಪೈಕಿ ಕೇವಲ ೫ ಪರ್ಸೆಂಟ್ ಜನರಿಗೂ ಸಾಲ ಸಿಗುವುದಿಲ್ಲ. ಡಿ.ಐ.ಸಿ.ಯ ಟೆಸ್ಟ್‌ನಲ್ಲಿ ಪಾಸ್ ಆದ ಹುಡುಗರಿಗೆ ಎಷ್ಟು ಕೋಟಾ ಇತ್ತೋ ಅದರ ಪ್ರಕಾರ ಕೊಟ್ಟಿದ್ದೇವೆ. ೧೨ ಸಾವಿರ ಜನರಿಗೂ ಸಾಲ ಕೊಡಬೇಕೆಂದು ಇಲ್ಲ, ನಮ್ಮಲ್ಲಿ ಎಷ್ಟಿದೆಯೋ ಅಷ್ಟನ್ನು ಕೊಡುತ್ತೇವೆ. ಅವರು ಎಷ್ಟು ಸೆಲೆಕ್ಟ್ ಮಾಡಿದರೆ ಆದು ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ ಬ್ಯಾಂಕಿನವರು. ಡಿ.ಐ.ಸಿ. ಸಂದರ್ಶನದಲ್ಲಿ ಆಯ್ಕೆಯಾದ ಹುಡುಗರಿಗೆ ಸಾಲ ಕೊಡುತ್ತೇವೆಂದು ಸರ್ಕಾರ ವಾಗ್ದಾನ ಮಾಡಿದೆ. ಆದರೆ ಬ್ಯಾಂಕಿನಲ್ಲಿ ಸಾಲ ಸಿಕ್ಕುತ್ತಿಲ್ಲ. ಎಷ್ಟು ಸಾಲ ಸಿಗುತ್ತದೋ ಅಷ್ಟು ಜನರನ್ನು ಆಯ್ಕೆ ಮಾಡಬೇಕೆಂದು ಡಿ.ಐ.ಸಿ.ಯವರಿಗೆ ಮಿತಿಯನ್ನು ಗೊತ್ತು ಮಾಡಬೇಕು, ಇಲ್ಲದಿದ್ದರೆ ಇವರು ಆಯ್ಕೆ ಮಾಡಿ ಕಳುಹಿಸಿದಷ್ಟು ಜನಕ್ಕೆ ಬ್ಯಾಂಕಿನಲ್ಲಿ ಸಾಲ ಸಿಗತಕ್ಕ ವ್ಯವಸ್ಥೆ ಆಗಬೇಕು. ಆದರೆ ಈಗ ಏನಾಗಿದೆ ಎಂದರೆ ಡಿ.ಐ.ಸಿ.ಯಿಂದ ಆಯ್ಕೆ ಮಾಡಿ ಕಳುಹಿಸತಕ್ಕ ಅಭ್ಯರ್ಥಿಗಳ ಸಂಖ್ಯೆ ಹೆಚ್ಚು, ಬ್ಯಾಂಕಿನಲ್ಲಿ ಸಾಲ ಸಿಕ್ಕುವ ಸಂಖ್ಯೆ ಕಡಿಮೆ. ಇವರು ಆಯ್ಕೆ ಮಾಡಿದ ಶೇಕಡ ೫೦ರಷ್ಟು ಮಂದಿಗೂ ಬ್ಯಾಂಕಿನಲ್ಲಿ ಸಾಲ ಸಿಕ್ಕುತ್ತಿಲ್ಲ ಎಂಬ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಎಷ್ಟು ಜನ ಆಯ್ಕೆ ಆಗಿರುತ್ತಾರೋ ಅಷ್ಟು ಜನರಿಗೆ ಕಡ್ಡಾಯವಾಗಿ ಸಾಲ ಕೊಡುವಂತೆ ಆದೇಶ ನೀಡಬೇಕು. ಡಿ.ಐ.ಸಿ.ಯವರಿಗೆ ಎಷ್ಟು ಜನರನ್ನು

ಆಯ್ಕೆ ಮಾಡಿಕೊಟ್ಟರೆ ಸಾಲ ಸಿಗುತ್ತದೆಂಬ ಭಾವನೆ ಇರುವುದಿಲ್ಲ. ದಯವಿಟ್ಟು ಸರ್ಕಾರ ಬ್ಯಾಂಕಿನವರಿಗೆ ಆ ರೀತಿ ಸೂಚನೆ ಕೊಡಬೇಕೆಂದು ಕೇಳಿಕೊಳುತ್ತೇನೆ.

ಸ್ಪೆಷಲ್ ಕಾಂಪೊನೆಂಟ್ ಸ್ಕೀಂನಲ್ಲಿ ಕೆಲವೊಂದು ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಐ.ಆರ್.ಡಿ. ಕಾರ್ಯಕ್ರಮದ ಪ್ರಕಾರ ೪೦ ಸಾವಿರ ಕುಟುಂಬಗಳು ಬಡತನದ ರೇಖೆಯನ್ನು ದಾಟಿ ಹೋಗುವಂತೆ ಮಾಡಿದೆ ಎಂದು ಹೇಳುತ್ತಾರೆ. ಬಡತನ ರೇಖೆಯಿಂದ ಮೇಲೆ ಹೋಗುವಂತೆ ಮಾಡಬೇಕೆಂದು ಆಜ್ಞೆ ಮಾತ್ರ ಇದೆ. ಅದು ಕಾರ್ಯರೂಪಕ್ಕೆ ಬಂದ ಹಾಗೆ ಇಲ್ಲ. ಅವರು ಯಾವ ಸ್ಥಾನಕ್ಕೆ ಬಂದಿದ್ದಾರೆ, ಸಾಲ ತೆಗೆದುಕೊಂಡ ಮೇಲೆ ಏನಾದರೂ ಮಾಡುತ್ತಿದ್ದಾರೆಯೆ ಎಂಬುದನ್ನು ನೋಡಬೇಕು. ೪೦ ಸಾವಿರ ಜನ ಬಡತನ ರೇಖೆಯಿಂದ ಮುಂದೆ ಹೋಗಿದ್ದಾರೆಂಬುದು ಸರಿಯಾದುದಲ್ಲ. ಸರ್ಕಾರ ಎಷ್ಟೋ ಜನರಿಗೆ ಸಾಲ ಕೊಟ್ಟಿರುತ್ತದೆ. ಆದರ ಉಪಯೋಗ ಸರಿಯಾಗಿ ಆಗದೆ ಇದ್ದರೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಕೊಟ್ಟ ಸಾಲದಿಂದ ಪ್ರಯೋಜನ ಆಗಿದೆಯೋ ಇಲ್ಲವೇ ಎಂಬ ಅಂಕಿ ಅಂಶಗಳನ್ನು ಕೂಡ ಒದಗಿಸಿದರೆ ಅನುಕೂಲವಾಗುತ್ತದೆ. ವಿವಿದೋದ್ದೇಶ ಸಹಕಾರ ಸಂಘಗಳು ಪ್ರತಿಯೊಂದು ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಇವೆ, ಅವುಗಳ ಮುಖಾಂತರ ಜನಸಾಮಾನ್ಯರು ಸಾಲ ತೆಗೆದುಕೊಳ್ಳುತ್ತಾರೆ. ಎಲ್ಲ ಕಡೆ ಇಂಥ ಸಂಸ್ಥೆಗಳಲ್ಲಿ ಅವ್ಯವಹಾರಗಳು ಇವೆ. ಜನರಿಂದ ಅರ್ಜಿ ತೆಗೆದುಕೊಳ್ಳುತ್ತಾರೆ, ಸಾಲ ಮಂಜೂರ್ ಮಾಡುತ್ತೇವೆಂದು ಹೇಳುತ್ತಾರೆ. ಅವರಿಗೆ ಒಂದೂವರೆ ಸಾವಿರ ರೂಪಾಯಿ ಮಂಜೂರ್ ಮಾಡಿದರೆ ಅದರಲ್ಲಿ ೫೦೦ ರೂಪಾಯಿ ಕೊಡುವುದಿಲ್ಲ. ಚಪ್ಪಲಿ ಮಾಡುವವನು ೫೦೦ ರೂಪಾಯಿ ಸಾಲಕ್ಕೆ ಅರ್ಜಿ ಹಾಕಿದ್ದರೆ ಅವನಿಗೆ ಪೆಟ್ಟಿಗೆ ಮತ್ತು ಚಪ್ಪಲಿ ಮಾಡುವ ಸಾಮಾನುಗಳನ್ನು ಕೊಟ್ಟರು, ಅವನ್ನು ಕೊಳ್ಳಲು ಕೈಗೆ ಹಣ ಕೊಡಲಿಲ್ಲ. ಅವರು ಕೊಟ್ಟ ಪೆಟ್ಟಿಗೆಯನ್ನು ಅದು ನಮಗೆ ಬೇಡವೆಂದು ಅಲ್ಲೇ ಬಿಟ್ಟು ಹೋದರು. ಇದನ್ನು ತಾವು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೂ ನನ್ನ ಜಿಲ್ಲೆ ಸಂಬಂಧಪಟ್ಟ ಹಾಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ, ಗುಲ್ಬರ್ಗ ಜಿಲ್ಲೆಯಲ್ಲಿ ಸಿಮೆಂಟ್ ಕಾರ್ಖಾನೆಗಳು ಹೆಚ್ಚಾಗಿ ಸಣ್ಣ ಮತ್ತು ದೊಡ್ಡ ಪ್ರಮಾಣದಲ್ಲಿ ಬರುತ್ತಿವೆ. ದೊಡ್ಡ ಪ್ರಮಾಣದಲ್ಲಿ ಬರತಕ್ಕ ಕಾರ್ಖಾನೆಗಳು ಇದ್ದಾಗ ಸಣ್ಣ ಪ್ರಮಾಣದ ಕಾರ್ಖಾನೆಗಳು ಲಾಭ ಪಡೆಯತಕ್ಕ ಸಂದರ್ಭ ಉದ್ಭವಿಸುವುದಿಲ್ಲ. ಆದ್ದರಿಂದ ಸಣ್ಣ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳು ಏನಿವೆ ಅವುಗಳನ್ನು ಸರ್ಕಾರ ತೆಗೆದುಕೊಂಡು ನಡೆಸಿದರೆ ಅವು ನಡೆಯುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಸಣ್ಣ ಕಾರ್ಖಾನೆಗಳು ಕೆಲವೇ ದಿನಗಳಲ್ಲಿ ಮುಳುಗಿ ಹೋಗುತ್ತವೆ. ಗುಲ್ಬರ್ಗ ಜಿಲ್ಲೆಯಲ್ಲಿ ಸಿಮೆಂಟ್ ಇಂಡಸ್ಟ್ರಿ ಬಿಟ್ಟು ಇನ್ನೊಂದು ಇಂಡಸ್ಟ್ರಿ ಇಲ್ಲ. ಹಿಂದೆ ಸ್ಟೀಫನ್ ಅವರು ಮಂತ್ರಿಗಳಾಗಿದ್ದಾಗ ನಮ್ಮ ಜಿಲ್ಲೆಗೆ ಒಂದು ಟೆಲಿಫೋನ್ ಇಂಡಸ್ಟ್ರಿಯನ್ನು ಕೊಡಿ ಎಂದು ಕೇಳಿದ್ದೆವು. ಅದು ಇಲ್ಲಿಯವರೆಗೆ ಆಗಿಲ್ಲ. ಸರ್ಕಾರ ಅಲ್ಲಿ ಒಂದು ಟೆಲಿಫೋನ್ ಇಂಡಸ್ಟ್ರಿಯನ್ನು ಹಾಕಿದರೆ ಬೇಕಾದಷ್ಟು ಜನರಿಗೆ ಅನುಕೂಲವಾಗುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿ ಶಹಬಾದ್ ಸ್ಟೋನ್ ಏನಿದೆ ಅದು ದೇಶದ ಮೂಲೆ ಮೂಲೆಗೆ ಹೋಗುತ್ತದೆ. ಆ ಶಹಬಾದ್ ಸ್ಟೋನ್ ಅನ್ನು ತೆಗೆಯತಕ್ಕ ಜನರು, ಆ ಗಣಿಯಲ್ಲಿ ಕೆಲಸ ಮಾಡತಕ್ಕ ಜನರು ಬಡವರಿದ್ದಾರೆ, ಅವರು ಕೂಲಿಕಾರರು. ಅದು ಸಣ್ಣ ಪ್ರಮಾಣದ ಉದ್ದಿಮೆ. ಅದರ ಮೇಲೆ ಇವರು ಟ್ಯಾಕ್ಸ್ ಹಾಕಿದ್ದಾರೆ. ಗಣಿಯಲ್ಲಿ ಕೆಲಸ ಮಾಡತಕ್ಕವರ ಮೇಲೆ ತೆರಿಗೆ ಹಾಕಿದ್ದಾರೆ. ಆ ಒಂದು ತೆರಿಗೆಯನ್ನು ತೆಗೆದರೆ ಆ ಕೆಳವಟ್ಟದ ಜನರಿಗೆ ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಸಿಮೆಂಟ್ ಗೋಡೌನ್‌ಗಳು ಇವೆ. ಜಿಲ್ಲಾ ಕೈಗಾರಿಕಾ ಗೋಡೌನ್‌ನಿಂದ ಸರಬರಾಜು ಮಾಡತಕ್ಕ ಸಿಮೆಂಟ್ ಕೆಲಸಕ್ಕೆ ಬಾರದ ಸಿಮೆಂಟ್ ಆಗಿದೆ. ತೂಕ ಮಾಡಿದರೆ ಒಂದು ಚೀಲಕ್ಕೆ ೪–೫ ಕೆ.ಜಿ. ಕಡಿಮೆ ಇರುತ್ತದೆ. ದಯಮಾಡಿ ಅಲ್ಲಿ ಏನು ವ್ಯವಹಾರ ನಡೆದಿದೆ ಅದನ್ನು ಸರ್ಕಾರ ನೋಡಬೇಕೆಂದು ಹೇಳುತ್ತೇನೆ. ಈಗಾಗಲೇ ಶಾಣಪ್ಪನವರು ಹೇಳಿದ ಹಾಗೆ ನಮ್ಮಲ್ಲಿ ಬಹಳಷ್ಟು ಸಿಮೆಂಟ್ ಕಾರ್ಖಾನೆಗಳು ಇವೆ. ಅವುಗಳಿಂದ ಬರತಕ್ಕ ಧೂಳು ಶಹಬಾದ್ ಭಾಗಕ್ಕೆ ಮಾತ್ರವಲ್ಲ ಇಡೀ ಗುಲ್ಬರ್ಗ ಜಿಲ್ಲೆಯನ್ನೇ ತುಂಬಿ ಹೋಗುತ್ತಿದೆ. ಆದರಿಂದ ಬೆಳೆಗೆ ಮಾತ್ರವಲ್ಲ ಮನುಷ್ಯರಿಗೆ ಕೂಡ ಅನಾನುಕೂಲವಾಗಿದೆ. ವೈದ್ಯರ ವರದಿ ಪ್ರಕಾರ ಆ ಧೂಳು ಶ್ವಾಸೋಚ್ವಾಸದಲ್ಲಿ ಹೋಗುವುದರಿಂದ ಟಿ.ಬಿ. ಆಗುವ ಸಂದರ್ಭ ಇದೆ. ಇದು ಬಹಳ ಕೆಟ್ಟ ಧೂಳು ಎಂದು ಇದೆ. ಗುಲ್ಬರ್ಗದಲ್ಲಿರತಕ್ಕ ಜನ ಮತ್ತು ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕ ಜನರು ಧೂಳನ್ನು ನಿಯಂತ್ರಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಮಾನ್ಯ ಸ್ನೇಹಿತರು ಹೇಳಿದ ಹಾಗೆ ಶಹಬಾದ್ ಮತ್ತು ಸೇಡಂ ಮಾತ್ರವಲ್ಲ ಇಡೀ ಗುಲ್ಬರ್ಗ ಜಿಲೆಯನ್ನೇ ಆವರಿಸಿಕೊಂಡಿದೆ. ಸರ್ಕಾರ ಅದನ್ನು ನಿಯಂತ್ರಿಸಿದರೆ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ.

ಆ ಧೂಳು ಬೆಳೆ ಮೇಲೆ ಬಿದ್ದರೆ ಬಹಳ ಅನಾಹುತವಾಗುತ್ತದೆಂದು ಶಾಣಪ್ಪನವರು ಆಗಲೇ ಹೇಳಿದರು. 24 ತಾಸು ಕಾರ್ಖಾನೆ ನಡೆಯುವುದರಿಂದ ಅಷ್ಟು ಕಾಲವು ಧೂಳು ಬೆಳೆ ಮೇಲೆ ಬೀಳುತ್ತಿರುತ್ತದೆ. ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ ಎನ್ನದೆ ನಿರಂತರವಾಗಿ ಬೀಳುತ್ತಿರುತ್ತದೆ. ಆದ್ದರಿಂದ, ದಯಮಾಡಿ ಸರ್ಕಾರ ಇದನ್ನು ತೀವ್ರವಾಗಿ ನಿಯಂತ್ರಿಸಬೇಕೆಂದು ಮತ್ತೊಮ್ಮೆ ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಬೇರೆ ಜಿಲ್ಲೆಗಳಲ್ಲಿ ಬೇಕಾದಷ್ಟು ಕಾರ್ಖಾನೆಗಳನ್ನು ಸ್ಥಾಪಿಸಿದ್ದೀರಿ. ಆದರೆ ನಮ್ಮ ಜಿಲ್ಲೆಯಲ್ಲಿ ಸಿಮೆಂಟ್ ಕಾರ್ಖಾನೆಯನ್ನು ಬಿಟ್ಟು ಬೇರೆ ಇಲ್ಲ. ನಮ್ಮಲ್ಲಿ, ಎನ್.ಜಿ.ಎಫ್. ಯೂನಿಟ್, ಮೈಸೂರ್ ಕ್ರೋಮೈಟ್ ಕಂಪನಿ, ಕರ್ನಾಟಕ ಸಾಬೂನು ಮತ್ತು ಶುದ್ಧೀಕರಣ ಕಾರ್ಖಾನೆಯ ಯೂನಿಟ್ ಅನ್ನು ತೆಗೆದರೆ ಅಲ್ಲಿಯ ಜನರಿಗೆ ಅನುಕೂಲವಾಗುತ್ತದೆ. ಸರ್ಕಾರ ನಮ್ಮ ಜಿಲ್ಲೆಗೆ ಬಹಳಷ್ಟು ಮಹತ್ವ ಕೊಡಬೇಕು. ಏತಕ್ಕೆ ಹೇಳುತ್ತಿದ್ದೇನೆಂದರೆ. ಅದು ಈ ಸಾರಿ ಎಲ್ಲಕ್ಕಿಂತಲೂ ತೀವ್ರವಾಗಿ ಬರಗಾಲಕ್ಕೆ ತುತ್ತಾದ ಪ್ರದೇಶವಾಗಿದೆ. ಆದ್ದರಿಂದ ಅಲ್ಲಿ ಕೆಲವೊಂದು ಕಾರ್ಖಾನೆಗಳನ್ನಾದರೂ ತೆರೆದರೆ ಅಲ್ಲಿಯ ಜನರಿಗೆ ಬಹಳ ಅನುಕೂಲವಾಗುತ್ತದೆ. ಬರಗಾಲಕ್ಕೆ ತುತ್ತಾದ ಜನ ಬೇರೆ ಜಿಲ್ಲೆಗೆ ವಲಸೆ ಹೋದವರೂ ಇದ್ದಾರೆ. ಇದರ ಬಗ್ಗೆ ಲಕ್ಷ್ಯ ಕೊಟ್ಟು ಕಾರ್ಖಾನೆಗಳನ್ನು ತೆರೆಯುತಕ್ಕ ಮನಸ್ಸು ಮಾಡಬೇಕೆಂದು ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಜಿ. ಚನ್ನಪ್ಪ (ಮಾಗಡಿ).—ಸಭಾಧ್ಯಕ್ಷರೇ, ಈ ದಿವಸದ ಬೇಡಿಕೆಯಾದಂಥ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಬಗ್ಗೆ ಈಗಾಗಲೇ ಮಾತನಾಡಿರತಕ್ಕಂಥ ಅನೇಕ ಜನ ನಮ್ಮ ಸಹೋದ್ಯೋಗಿಗಳು ಹೆಚ್ಚಿನ ಕೈಗಾರಿಕೆಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನೂ ಹೆಚ್ಚಿಗೆ ಏನೂ ವಿಷಯವನ್ನು ಮಾತನಾಡುವುದಕ್ಕೆ ಹೋಗದೆ ನಾನು ರೇಷ್ಮೆ ಬೆಳೆಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಮಾತ್ರ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಕೈಗಾರಿಕೆ ಉದ್ದಿಮೆಯಲ್ಲಿ ಹೆಚ್ಚಿಗೆ ಕೈಗಾರಿಕೆಗಳನ್ನು ತೆಗೆದುಕೊಳ್ಳತಕ್ಕಂಥದರ ಬದಲು ಗೃಹ ಕೈಗಾರಿಕೆಗಳಿಗೆ ಹೆಚ್ಚಿನ ಒಂದು ಆದ್ಯತೆ ಕೊಟ್ಟರೆ ಹೆಚ್ಚಿನ ಜನಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಹೆಚ್ಚಿನ ರೀತಿಯಲ್ಲಿ ಗೃಹ ಕೈಗಾರಿಕೆಗಳನ್ನು ಹೆಚ್ಚಿಗೆ ಹೆಚ್ಚಿಗೆ ಸ್ಥಾಪನೆ ಮಾಡಿದರೆ ಬಂಡವಾಳವನ್ನು ಹೆಚ್ಚಿಗೆ ಹೂಡುವ ಅವಕಾಶ ಇರುವುದಿಲ್ಲ. ಹೆಚ್ಚಿನ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಗಾಂಧೀಜಿಯವರು ಸಹಾ ಹೇಳುತ್ತಿದ್ದರು. ಪುಸ್ತಕದಲ್ಲಿ ಹೇಳಿರತಕ್ಕಂಥದ್ದನ್ನು ಕೇಳಿ ತಿಳಿದುಕೊಂಡಿದ್ದೇವೆ. ಹೆಚ್ಚಿಗೆ ಕಾರ್ಖಾನೆಗಳು ಬಂದರೆ ವಾಯು ನೈರ್ಮಲ್ಯವು ಕೂಡ ಕೆಡತಕ್ಕಂಥ ಸನ್ನಿವೇಶ ಇದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕಾರ್ಖಾನೆಗಳನ್ನು ಹೆಚ್ಚಿನ ಮಟ್ಟದಲ್ಲಿ ಕಟ್ಟುವುದರಿಂದ ಹವಾಮಾನ ಕೆಡುವುದು ಅಲ್ಲದೆ ಜನಗಳಿಗೆ ಹೆಚ್ಚಿಗೆ ಆ ಪ್ರದೇಶದಲ್ಲಿ ನೆಲೆಸಿರುವವರಿಗೆ ರೇಷನ್, ಸೌದೆ, ವಿದ್ಯುಚ್ಛಕ್ತಿ ಇಂಥ ಸೌಕರ್ಯಗಳನ್ನು ಒದಗಿಸತಕ್ಕಂಥದ್ದೂ ಕೂಡ ಕಷ್ಟವಾಗುತ್ತದೆ. ಅದೇ ಗೃಹ ಕೈಗಾರಿಕೆಗಳಿಗೆ ಹೆಚ್ಚಿನ ಒಂದು ಆದ್ಯತೆ ಕೊಡುವುದಾದರೆ ಅವರು ಒಂದು ಕಡೆ ನೆಲೆಸತಕ್ಕಂಥ ಅವಕಾಶ ಇರುವುದಿಲ್ಲ. ಎಲ್ಲೆಲ್ಲಿ ಇರುತ್ತಾರೋ ಅಂಥ ಮನೆಗಳಲ್ಲಿಯೇ ಈ ಕೈಗಾರಿಕೆಯನ್ನು ಮಾಡಿಕೊಡುವುದಾದರ ಹೆಚ್ಚಿನ ಸೌಲಭ್ಯವನ್ನು ಕೊಟ್ಟಂತಾಗುತ್ತದೆ. ಆದ್ದರಿಂದ ಇನ್ನು ದೇಶದಲ್ಲಿ ಬೃಹತ್ ನೀರಾವರಿಗಿಂತ ಸಣ್ಣ ನೀರಾವರಿ ಮಾಡಿದರೆ ಹೆಚ್ಚಿನ ಸೌಲಭ್ಯ ಕೊಡುವುದಕ್ಕೆ ಎಷ್ಟು ಸಾಧ್ಯವೋ ಹಾಗೆಯೇ ಸಣ್ಣ ನೀರಾವರಿ ಕಾಮಗಾರಿಗಳನ್ನು ಮತ್ತು ಗೃಹ ಕೈಗಾರಿಕೆಗಳನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಿದರೆ ಎಲ್ಲಾ ಜನಗಳಿಗೂ ಒಂದು ಉದ್ಯೋಗವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಮತ್ತು ಹೆಚ್ಚಿನ ಸಹಾಯವನ್ನೂ ಕೂಡ ನೀಡಿದಂತಾಗುತ್ತದೆ,

ನಾನು ರೇಷ್ಮೆ ಬೆಳೆಗಾರರ ಪ್ರದೇಶದಿಂದ ಬಂದಿರತಕ್ಕಂಥವನು. ಆದ್ದರಿಂದ ದೇಶದಲ್ಲಿ ರೇಷ್ಮೆ ಎಲ್ಲಾ ಭಾಗದಿಂದಲೂ ಬೆಳೆಯುತ್ತಾರೆ. ಬಿತ್ತನೆ ರೇಷ್ಮೆ ಬೆಳೆಯತಕ್ಕಂಥದ್ದು ಕೇವಲ ಎರಡು ತಾಲ್ಲೂಕುಗಳಲ್ಲಿ ಮಾತ್ರ, ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಮತ್ತು ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿ ಬಿತ್ತನೆ ಬೀಜ ಬೆಳೆಯತಕ್ಕಂಥ ಎರಡು ತಾಲ್ಲೂಕುಗಳಿಗೂ ಹೆಚ್ಚಿನ ಆದ್ಯತೆಯನ್ನು ಕಲ್ಪಿಸಿಕೊಡಬೇಕಾಗಿದೆ. ಶ್ರೀಮಾನ್ ರಾಮಯ್ಯನವರು ಮಂತ್ರಿಯಾದ ಮೇಲೆ ಅನೇಕ ಬದಲಾವಣೆಗಳಾಗಿವೆ. ಹೆಚ್ಚಿನ ಸೌಕರ್ಯಗಳು ರೇಷ್ಮೆ ಬೆಳೆಗಾರರಿಗೆ ಸಿಕ್ಕಿದೆ, ಆ ಉದ್ಯೋಗದಲ್ಲಿ ಹೆಚ್ಚಿನ ಮಾಹಿತಿಯೂ ಸಹಾ ಸಿಕ್ಕಿದೆ. ಹೆಚ್ಚಿನ ರೀತಿಯಲ್ಲಿ ಸೌಲಭ್ಯವನ್ನು ಪಡೆದು ಉತ್ತಮವಾದಂಥ ಜೀವನವನ್ನು ನಡೆಸುವುದಕ್ಕೆ

ಸಹಕಾರಿಯಾಗಿದೆ. ಅವರೂ ಕೂಡ ಉತ್ತಮವಾದಂಥ ರೇಷ್ಮೆ ಬೆಳೆಗಾರರಾದ್ದರಿಂದ ರೇಷ್ಮೆ ಬೆಳೆಗಾರರ ಕಷ್ಟಸುಖಗಳನ್ನು ಅರಿತು ಇವತ್ತಿನ ದಿವಸ ಅವರಲ್ಲಿರುವಂಥ ಕುಂದುಕೊರತೆಗಳನ್ನು ನಿವಾರಣೆ ಮಾಡುವುದರಲ್ಲಿ ಸಹಕರಿಸಿ ಹೆಚ್ಚಿನ ರೀತಿಯಲ್ಲಿ ಈ ಒಂದು ಕುಂದು ಕೊರತೆಗಳನ್ನು ನಿವಾರಣೆ ಮಾಡಿಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅನೇಕ ವರ್ಷಗಳಿಂದಲೂ ಅನೇಕ ಕಟ್ಟಡಗಳೂ ಮೂಲೆಯಲ್ಲಿ ಬಿದ್ದಿದ್ದವು. ಅವುಗಳನ್ನು ಕಂಪ್ಲೀಟ್ ಮಾಡಿ ಮಾರ್ಕೆಟಿಂಗ್ ವ್ಯವಸ್ಥೆಯನ್ನೂ ಕೂಡ ಅವರು ಸಿದ್ಧ ಮಾಡಿಕೊಟ್ಟಿದ್ದಾರೆ.

ಇನ್ನು ಕುಣಿಗಲ್, ಹೆಬ್ಬೂರು, ದೊಡ್ಡಬಳ್ಳಾಪುರ ಈ ಎಲ್ಲಾ ಪ್ರದೇಶಗಳಲ್ಲಿ ಕೂಡ ಅನೇಕ ವರ್ಷಗಳಿಂದ ಬೇಡಿಕೆ ಇದ್ದಂತಹ ಮಾರ್ಕೆಟ್ ಕಟ್ಟಡಗಳನ್ನು ಪೂರೈಸಿ ಜನಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಮತ್ತು ಈ ಮಾರ್ಕೆಟ್ ವ್ಯವಸ್ಥೆ ಇಲ್ಲದೆ ಜನಗಳು ಹಳ್ಳಿಯಿಂದ ಗೂಡನ್ನು ತೆಗೆದುಕೊಂಡು ಬಂದು ಯಾರದೋ ಜಗಲಿಯ ಮೇಲೆ ಬಂದು ಕೂಡುತ್ತಿದ್ದರು. ಮಳೆ ಬಂದು, ಬಿಸಿಲಿನಿಂದ ಒಣಗಿ ಬಿತ್ತನೆಗೆ ನಾಲಾಯಕ್ ಆಗತಕ್ಕಂಥ ಸನ್ನಿವೇಶ ಇತ್ತು. ಅಂಥ ಸಂದರ್ಭದಲ್ಲಿ ಇವತ್ತು ಹೆಚ್ಚಿನ ಮುತುವರ್ಜಿಯನ್ನು ವಹಿಸಿ ಅವಕಾಶ ಇಲ್ಲದೇ ರೈತ ಬೆಳೆದಂಥ ಬೆಳೆಗೆ ಬೆಲೆ ಸಿಗಬೇಕೋ ಅದಕ್ಕೆ ಹೆಚ್ಚಿನ ಒಂದು ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಅವರು ಬಂದ ಮೇಲೆ ೧೦ ರೂಪಾಯಿ ಸಬ್ಸಿಡಿಯನ್ನು ಕೊಟ್ಟಿದ್ದಾರೆ. ಎಲ್ಲಿ ನಷ್ಟವಾಗುತ್ತಿತ್ತೋ, ಅಂಥ ನಷ್ಟವನ್ನು ಕೂಡಿಸಿಕೊಟ್ಟು, ಹೆಚ್ಚಿನ ಪ್ರೋತ್ಸಾಹ ಸಿಗುವಂತೆ ಮಾಡಿದ್ದಾರೆ, ಕರ್ನಾಟಕದಲ್ಲಿ ಮೈಸೂರು ರೇಷ್ಮೆ ಪ್ರಸಿದ್ಧಿಯನ್ನು ಪಡೆದಿತ್ತೋ ಆ ಒಂದು ಹೆಸರಿಗೆ ಕಳಂಕ ಬಾರದಂತೆ, ಹೆಚ್ಚಿನ ರೀತಿಯಲ್ಲಿ ನಶಿಸಿ ಹೋಗದಂತೆ ಉಪಯೋಗವಾಗುವುದಕ್ಕೆ ಏನು ಅವಕಾಶ ಬೇಕೋ ಅದಕ್ಕೆ ಸಹಕಾರಿಯಾಗಿ ಹತ್ತು ರೂಪಾಯಿ ಬೋನಸ್ಸನ್ನು ಕೂಡಾ ಅವರ ಕಾಲದಲ್ಲಿ ಮಂಜೂರು ಮಾಡಿಕೊಟ್ಟಿದ್ದಾರೆ. ಆದ್ದರಿಂದ ಹೆಚ್ಚಿಗೆ ಜನ ಬಡವರು ಲಾಭವನ್ನು ಪಡೆದು ಜೀವನ ಮಟ್ಟವನ್ನು ಉತ್ತಮಗೊಳಿಸುವುದಕ್ಕೆ ಸಹಾಯವಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇವತ್ತು ರೇರಿಂಗ್ ಸೆಂಟರ್‌ಸ್‌ಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಬೈವೋಲ್ಟಿನ್ ಎನ್ನತಕ್ಕಂಥ ಒಂದು ಹೊಸ ತಳಿಯನ್ನು ನಮ್ಮ ದೇಶದಲ್ಲಿ ಬೆಳೆಯುವುದಕ್ಕೆ ಹೆಚ್ಚಿನ ಮುತುವರ್ಜಿಯನ್ನು ವಹಿಸುತ್ತಿದ್ದಾರೆ. ಆದರೂ ಕೂಡ ಈ ಬೆಳೆಯನ್ನು ಸಾಕಷ್ಟು ರೀತಿಯಲ್ಲಿ ಬೆಳೆಯುವುದಕ್ಕಾಗುವುದಿಲ್ಲ. ಅದಕ್ಕೆ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ.ಒಂದು ತಜ್ಞರಒಂದುಕೊರತೆ ಇದೆ.ಕ್ಲೈಮ್ಯಾಟಿಕ್‌ಕಂಡೀಷನ್ ಕೂಡ ಅದಕ್ಕೆ ಸಹಕಾರಿಯಾಗಿಲ್ಲ ಎನ್ನತಕ್ಕಂತ ಮಾತನ್ನು ಇದರಲ್ಲಿ ಹೇಳಿದ್ದಾರೆ, ಬೈವೋಲ್ಟಿನ್ ಬೆಳೆಯನ್ನು ಬೆಳೆದರೆ ಹೆಚ್ಚಿನ ಒಂದು ಲಾಭ ಬರುತ್ತದೆ. ಹೆಚ್ಚಿನ ಬೇಡಿಕೆ ಇದೆ ಎಂದು ಎಲ್ಲರಲ್ಲೂ ಮಾಹಿತಿಯಾಗಿತ್ತು. ಆದರಲ್ಲಿ ಬೆಳೆಯುವುದಕ್ಕೆ ಹೋಗಿ ತಜ್ಞರ ಒಂದು ಸಹಾಯ ಇಲ್ಲದೆ ಕ್ಲೈಮ್ಯಾಟಿಕ್ ಕಂಡೀಷನ್ ಇಲ್ಲದೇ ಅನೇಕ ಸಂದರ್ಭಗಳಲ್ಲಿ ನಷ್ಟವಾಗುತ್ತಿತ್ತು.ಅದೂ ಕೂಡ ಸುಧಾರಣೆಯಾಗತಕ್ಕಂಥ ಪರಿಸ್ಥಿತಿಗೆ ಬಂದಿದೆ. ಇವತ್ತು ನಾಟಿ ರೇಷ್ಮೆ ಕಡ್ಡಿಗಳನ್ನು ಬೆಳೆದು ಹೆಚ್ಚಿನ ಲಾಭವನ್ನು ಸಂಪಾದನೆ ಮಾಡುವುದಕ್ಕೆ ಆಗದೇ ಇದ್ದಂತಹ ಸಂದರ್ಭದಲ್ಲಿ ಇವತ್ತಿನ ದಿವಸ ಬಹಳ ಉತ್ತಮವಾದಂತ ಕಡ್ಡಿ ತಳಿಗಳನ್ನು ತರಿಸಿಕೊಟ್ಟು ರೈತರಿಗೆ ಅದರಿಂದ ಹೆಚ್ಚಿನ ಲಾಭ ಬರುವಂತ ಕೆಲಸವನ್ನು ಶ್ರೀ ರಾಮಯ್ಯನವರ ಕಾಲದಲ್ಲಿ ಮಾಡಿದ್ದಾರೆ. ಈಗ ಇನ್ನೂ ಅನೇಕ ಕಾರ್ಯಗಳನ್ನು ಈ ರೇಷ್ಮೆ ಬಿತ್ತನೆ ಬೆಳೆಗಾರರಿಗೆ ಮಾಡಿಕೊಡಬೇಕಾದಂತದ್ದು ಇದೆ. ರೈತರು ಮಳೆಗಾಲದಲ್ಲಿ ರೇಷ್ಮೆಯನ್ನು ಹೆಚ್ಚಿನ ಮಟ್ಟದಲ್ಲಿ ಬೆಳೆದು ಮಾರ್ಕೆಟ್‌ಗೆ ತರುತ್ತಾರೆ. ಹೆಚ್ಚಿನ ಬೆಲೆ ಸಿಗುವುದಿಲ್ಲ. ಪ್ರತಿಯೊಬ್ಬರೂ ಕೂಡ ಎರಡು ತಾಲ್ಲೂಕುಗಳಲ್ಲಿ ಒಂದು ಅರ್ಧ ಎಕರೆ, ಮುಕ್ಕಾಲು ಎಕರೆ, ಈ ತರಹದಲ್ಲಿ ಬೆಳೆಯನ್ನು ಬೆಳೆಯುತ್ತಾರೆ. ಮಳೆಗಾಲದಲ್ಲಿ ಹೆಚ್ಚಿನ ಒಂದು ಬೆಳೆ ರೈತರಿಗೆ ಸಿಗುತ್ತಿಲ್ಲ. ಕೆಲವರು ಬೇಸಿಗೆ ಕಾಲದಲ್ಲಿ ಬಾವಿಗಳನ್ನು ತೆಗೆದು ಪಂಪ್ ಸೆಟ್‌ಗಳನ್ನು ಹಾಕಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ಕೇವಲ ಮೂರು ತಿಂಗಳಲ್ಲಿ ಅವರು ಒಂದು ವರ್ಷದಲ್ಲಿ ಒಂಭತ್ತು ತಿಂಗಳು ಪಡೆಯುಂದೇ ಇರತಕ್ಕಂಥದ್ದು ಕೇವಲ ಮೂರು ತಿಂಗಳಲ್ಲಿಯೇ ಲಾಭವನ್ನು ಪಡೆದು ಮಳೆಗಾಲದಲ್ಲಿ ಬೆಳೆಯನ್ನು ಬಿಡತಕ್ಕಂಥ ಪರಿಸ್ಥಿತಿ ಇದೆ. ಇಂಥ ಸಂದರ್ಭದಲ್ಲಿ ತಮ್ಮ ಮುಖೇನ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈ ಬಿತ್ತನೆ ಬೆಳೆಗಾರರ ಪ್ರದೇಶದ ಒಬ್ಬ ಪ್ರತಿನಿಧಿಯಾಗಿ ಕೇಳಿಕೊಳ್ಳತಕ್ಕಂಥದ್ದು ಏನೆಂದರೆ ರೈತರಿಗೆ ಹೆಚ್ಚಿನ ರೇಷ್ಮೆ ಬೆಳೆಗಾರರು ಬೋರ್ ವೆಲ್‌ಗಳನ್ನು ಹಾಕಿ ಮತ್ತು ಓಪನ್ ವೆಲ್‌ಗಳನ್ನು ಹಾಕಿ ೨೦ ಅಡಿ ೩೦ ಅಡಿ ತೆಗೆದರೂ ನೀರು ಸಿಗುತ್ತಿಲ್ಲ. ಅದಕ್ಕೆ ಸಬ್ಸಿಡಿ ಕೊಟ್ಟು ಬೋರ್‌ವೆಲ್‌ಗಳನ್ನು ಹಾಕಿ ಪಂಪ್‌ಸೆಟ್‌ಗಳನ್ನು ಹಾಕಿಸಿ ಅನುಕೂಲ ಮಾಡಿಕೊಡಬೇಕು. ಅವರು ಕೊಡತಕ್ಕಂಥ ಹಣಕ್ಕೆ ತರತಕ್ಕಂಥ ರೇಷ್ಮೆಯ ಬೆಲೆಯಿಂದ

ಕಂತಿನ ಮುಂಖಾಂತರ ಆ ಹಣವನ್ನು ಪಾವತಿ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಮತ್ತು ಅವರಿಗೆ ರೇರಿಂಗ್ ಹೌಸ್‌ಗಳನ್ನು ಹೆಚ್ಚಿಗೆ ಕಟ್ಟಿಸಿಕೊಡಬೇಕು. ಹೆಚ್ಚಿಗೆ ಹುಳವನ್ನು ಸಾಕುವು ದರಿಂದ ಇದರ ಅವಶ್ಯಕತೆ ಇದೆ. ರೇರಿಂಗ್ ಹೌಸ್‌ಗಳನ್ನು ಕಟ್ಟಿಸಿಕೊಟ್ಟು ಹೆಚ್ಚಿನ ಮಟ್ಟದಲ್ಲಿ ಸಬ್ಸಿಡಿ ಕೊಡಬೇಕು. ಇದನ್ನು ಬೆಳೆಯುತಕ್ಕಂತವರು ಶ್ರೀಮಂತರು ಯಾರೂ ಇಲ್ಲ.

ಈ ಉದ್ಯಮದಲ್ಲಿರತಕ್ಕಂಥವರು ಎಲ್ಲರೂ ಕಡುಬಡವರು. ತಮ್ಮ ಸಂಸಾರವನ್ನು ನೀಗಿ ಈ ಮನೆಯಲ್ಲಿ ಜೀವನ ಸಾಗಿಸುವಂಥ, ಶಕ್ತಿ ಇಲ್ಲದೇ ಇರತಕ್ಕಂಥ ಜನ ಹೆಚ್ಚಿನ ಮಟ್ಟದಲ್ಲಿ ರೇರಿಂಗ್ ಹೌಸ್‌ಗಳನ್ನು ಕೂಡ ಕಟ್ಟಿಸಿಕೊಡುವುದಕ್ಕೆ ಅವರಿಗೆ ಸಹಾಯ ಮಾಡಿ, ಈ ಮುಖಾಂತರ ಅವರ ಜೀವನ ಮಟ್ಟ ಉತ್ತಮಗೊಳ್ಳುವುದಕ್ಕೆ ಸಹಾಯ ಮಾಡಬೇಕು. ಮತ್ತು ಮಾರ್ಕೆಟಿಂಗ್ ಸವಲತ್ತುಗಳನ್ನು ಹೆಚ್ಚು ಮಾಡಿಕೊಡಬೇಕು. ರೇರಿಂಗ್ ಸೆಂಟರ್ಸ್‌ಗಳನ್ನು ಹೆಚ್ಚಿಗೆ ಮಾಡಿಕೊಡಬೇಕು. ತಜ್ಞರು ಒಂದು ಸಲಹೆ ಕೂಡ ಹೆಚ್ಚಿಗೆ ರೈತರಿಗೆ ಸಿಗುವ ರೀತಿಯಲ್ಲಿ ಮಾಡಿ ಈ ಬಿತ್ತನೆ ಪ್ರದೇಶದಲ್ಲಿರತಕ್ಕಂಥ ರೈತರಿಗೆ ಹೆಚ್ಚಿನ ಒಂದು ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಈ ಬೆಳೆ ಮೊದಲು ಅನೇಕ ರೋಗಗಳಿಂದ ಕೆಡುತ್ತಿತ್ತು. ರಾಮಯ್ಯನವರು ಬಂದಮೇಲೆ ಪ್ರತಿಯೊಂದು ಶಾಪೆಯನ್ನೂ ಕೂಡ ತಪಾಸಣೆ ಮಾಡಿದ್ದಾರೆ. ಅವರು ಚೆಕ್ ಮಾಡದೇ ಇರತಕ್ಕಂಥದ್ದು ಯಾವುದೂ ಇಲ್ಲ.

ಎಲ್ಲಿ ಹೋದರೂ ಕೂಡ ಬೆಳೆಯನ್ನು ನೋಡಿ ಗೂಡು ಬಿತ್ತನೆಗೆ ಯೋಗ್ಯವೇ ಅಲ್ಲವೇ ಎಂಬುದನು ಪರೀಕ್ಷೆ ಮಾಡಿ ಯೋಗ್ಯವಾಗಿರುವುದನ್ನು ಮಾತ್ರ ರೈತರಿಗೆ ಕೊಡಬೇಕು, ಇಲ್ಲದಿದ್ದರೆ ನಷ್ಟಕ್ಕೆ ನೀವು ಅಧಿಕಾರಿಗಳು ಜವಾಬ್ದಾರರಾಗಬೇಕಾಗುತ್ತದೆ ಎಂದು ಮಂತ್ರಿಗಳು ಕಟ್ಟುನಿಟ್ಟಾದ ಕ್ರಮ ಕೈಗೊಂಡಿರುವುದರಿಂದ ಇವತ್ತು ಏನು ರೋಗಕ್ಕೆ ತುತ್ತಾಗಿ ೧೫–೨೦ ದಿವಸ ಹುಳು ಸಾಕಿ ಕೊನೆಗೆ ಗೂಡು ಕಟ್ಟುವ ಸಂದರ್ಭದಲ್ಲಿ ಹಾಳಾಗಿ ತಿಪ್ಪೆಗೆ ಸುರಿಯುತ್ತಾ ಇದ್ದ ಪರಿಸ್ಥಿತಿ ಇತ್ತು. ಅಂಥದ್ದು ಇವತ್ತಿನ ದಿವಸ ೯೫ ಪರ್ಸೆಂಟ್ ಕಡಿಮೆಯಾಗಿದೆ ಎಂದರೆ ಅದು ಅತಿಶಯೋಕ್ತಿಯಾಗಲಾರದು. ಈ ಉದ್ಯಮದಲ್ಲಿ ವರ್ಷವರ್ಷೇ ಹೆಚ್ಚಿನ ಮಟ್ಟದಲ್ಲಿ ನಷ್ಟವಾಗಿದೆ ಎಂದು ಅಂಕಿಅಂಶದಲ್ಲಿ ಕೊಟ್ಟಿದ್ದಾರೆ. ಆದರೆ ಇವರು ಅಧಿಕಾರಕ್ಕೆ ಬಂದಮೇಲೆ ಅಂಕಿಅಂಶ ನೋಡಿದರೆ ೧೯೭೭–೮೩, ೧೯೮೦–೮೧ ಮತ್ತು ೧೯೮೩–೮೪, ೧೯೮೪–೮೫ನೇ ಸಾಲಿಗೆ ಹೋಲಿಕೆ ಮಾಡಿದರೆ ನಷ್ಟ ಕಡಿಮೆ ಆಗುತ್ತಾ ಬರುತ್ತಿದೆ. ಅಭಿವೃದ್ಧಿ ಕೂಡ ಕಾಣುತ್ತಿದೆ. ಈ ಇಲಾಖೆಗೆ ಈಗ ಕೊಟ್ಟಿರತಕ್ಕ ೧,೫೫೫ ಲಕ್ಷ ರೂಪಾಯಿ ಹಣ ಏನಿದೆ ಅದು ಸಾಲುವುದಿಲ್ಲ. ಇನ್ನೂ ಹೆಚ್ಚಿನ ಹಣ ಕೊಟ್ಟು. ಈ ಉದ್ದಿಮೆಗೆ ಹೆಚ್ಚಿನ ಉತ್ತೇಜನ ಕೊಟ್ಟು ಕರ್ನಾಟಕ ರೇಷ್ಮೆ, ಮೈಸೂರು ರೇಷ್ಮೆ ಏನು ಪ್ರಸಿದ್ಧಿಯನ್ನು ಹೊಂದಿದೆ ಅದರ ಉತ್ತೇಜನಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಹೆಚ್ಚು ತಟ್ಟೆಗಳನ್ನು, ಬುಟ್ಟಿಗಳನ್ನು, ಚಂದ್ರಿಕೆಗಳನ್ನು ಬಡರೈತರಿಗೆ ಹೆಚ್ಚಿಗೆ ಒದಗಿಸಿಕೊಡಬೇಕು. ಒಂದು ಚಂದ್ರಿಕೆ ಬೆಲೆ ೪೦–೫೦ ರೂಪಾಯಿ. ಒಂದು ತಟ್ಟೆ ಬೆಲೆ ೨೦–೨೫ ರೂಪಾಯಿಯಾಗಿದ್ದು ಬಡವರು ಅದನ್ನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಬಡವರಿಗೆ ಅದನ್ನು ಉಚಿತವಾಗಿ ದೊರಕಿಸಿಕೊಟ್ಟು ಈ ಉದ್ಯಮವನ್ನು ಉತ್ತಮಗೊಳಿಸುವುದಕ್ಕೆ ಬಿತ್ತನೆ ಪ್ರದೇಶದಲ್ಲಿ ಬೆಳೆಗಾರರಿಗೆ ಹೆಚ್ಚಿನ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಾ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರಿಗೆ.—ಮಾನ್ಯ ಶ್ರೀ ಆಚಾರ್ ಅವರು, ರಾಣಿಯವರು, ಇದಿನಬ್ಬನವರು, ಮತ್ತು ಮಲ್ಲಾರಿಗೌಡರು ಇನ್ನೂ ಮಾತನಾಡಬೇಕಾಗಿದೆ. ಎಲ್ಲರೂ ಐದು ನಿಮಿಷದಲ್ಲಿ ಮುಗಿಸಿದರೆ ಮುಗಿಸಬಹುದು.

ಶ್ರೀ ಜಿ. ಎಸ್. ಆಚಾರ್.—೧೦ ನಿಮಿಷ ಕೊಡಿ.

ಅಧ್ಯಕ್ಷರು.—೧೦ ನಿಮಿಷ ಕೊಡುವುದಿಲ್ಲ. ೫ ನಿಮಿಷದಲ್ಲಿ ಮುಗಿಸಿ. ಇಲ್ಲದಿದ್ದರೆ ನಾನು ಚರ್ಚೆಯನ್ನು ಮುಗಿಬಿಡುತ್ತೇನೆ. ೫ ನಿಮಿಷದಲ್ಲಿ ಮುಗಿಸಿ. ಯಾರೂ ಹೇಳದಿದ್ದುದನ್ನು ಹೇಳಿ.

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ವಾಣಿಜ್ಯ, ಕೈಗಾರಿಕೆ ಮತ್ತು ರೇಷ್ಮೆ ಇಲಾಖೆಯ ಬೇಡಿಕೆಗಳನ್ನು ಕೆಲವು ನ್ಯೂನತೆಗಳಿಗಾಗಿ ವಿರೋಧಿಸುತ್ತಿದ್ದೇನೆ. ಒಂದು ಸಾರಿ ಸರ್ಕಾರದ ಕಡೆಯಿಂದ ಘೋಷಣೆಯಾಯಿತು, ದಿವಸಕ್ಕೊಂದು ಕೈಗಾರಿಕೆ ಸ್ಥಾಪಿಸುತ್ತೇವೆ ಎಂದು. ಕರ್ನಾಟಕದ ಜನರಿಗೆ ಅತ್ಯಂತ ಸಂತೋಷವಾಯಿತು. ಆದರೆ ಸಾಧನೆ ಮಾತ್ರ ಬಹಳಷ್ಟು ಕಡಿಮೆ ಎಂದು ಹೇಳುವುದಕ್ಕೆ ಬಹಳ ವ್ಯಸನವಾಗುತ್ತದೆ. ಗ್ರಾಮೀಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು,

ಉದ್ದಿಮೆಗಳು ಬಹಳಷ್ಟು ಆಗಬೇಕಾಗಿದೆ. ಇದರ ಕುರಿತು ಸರ್ಕಾರ ಗಮನ್ನಹರಿಸಬೇಕು. ಐದು ನಿಮಿಷ ಮಾತ್ರ ಮಾತ ನಾಡಲು ಸಮಯ ಕೊಟ್ಟಿದ್ದರಿಂದ ಬಹಳ ವೇಗವಾಗಿ ನಾನು ಮಾತನಾಡುತ್ತಿದ್ದೇನೆ ಕೈಗಾರಿಕಾ ಉದ್ದಿಮೆಗಳು ಸ್ಥಾಪನೆಗೆ ಬೇಕಾದ ಸಿಂಗಲ್ ವಿಂಡೋ ಸಿಸ್ಟಂ ಎಂಬುದು ಬಹಳ ವರ್ಷದಿಂದ ಮಾತಾಗಿದೆ. ಆದರೆ ಇದು ಕಾರ್ಯರೂಪಕ್ಕೆ ಬರಲಿಲ್ಲ ಜಾಗ ಬೇಕು ಲೈಸೆನ್ಸ್ ಬೇಕು, ವಿದ್ಯುತ್ ಬೇಕು. ನೀರು ಬೇಕು ಹಣ ಬೇಕು. ಎಲ್ಲವನ್ನೂ ಒಂದೇ ಕಡೆಯಲ್ಲಿ ಒದಗಿಸಿದರೆ ಕೈಗಾರಿಕೆ ಯಶಸ್ವಿಯಾಗುತ್ತದೆ. ಇವುಗಳಿಗೆ ವಿವಿಧ ಇಲಾಖೆಗಳಿಗೆ ಇವತ್ತು ತಿರುಗಬೇಕಾದ ಪರಿಸ್ಥಿತಿ ಇದೆ. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೀರಿ. ಅದರ ಮೂಲಕ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಯೋಜನೆಯನ್ನು ಕೊಡುವಂಥ ಕಾರ್ಯಕ್ರಮ ಹಾಕಿದ್ದೀರಿ. ಹಾಗೆ ಕೊಡುವಾಗ ಸಾಧ್ಯವಾದ ಮಟ್ಟಿಗೆ ದುರ್ಬಲವರ್ಗದವರಾಗಿದ್ದು ಪ್ರಾಮಾಣಿಕರಾದ ಉತ್ಸಾಹಿ ವಿದ್ಯಾವಂತರಿಗೆ ಕೊಡಬೇಕಾಗಿತ್ತು. ಈಗ ಅದರ ಬದಲಾಗಿ ಶ್ರೀಮಂತರಿಗೆ, ಯಾರು ಇನ್‌ಫ್ಲುಯೆನ್ಸ್ ಮಾಡುವುದಕ್ಕೆ ಸಾಧ್ಯವಿದೆ ಅಂಥವರಿಗೆ ಲೈಸನ್ಸ್ ದೊರಕುತ್ತಿದೆ. ನಮ್ಮ ಜಿಲ್ಲೆಯಲ್ಲಿ ಅಂಥವರಿಗೆ ಸಿಕ್ಕಿದೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದಾಗ ದುರ್ಬಲರಿಗೇ ಕೊಡಬೇಕೆಂದು ಎಲ್ಲೂ ಇಲ್ಲ ಎಂದು ಹೇಳಿದರು. ಮುಂದಿನ ವರ್ಷಕ್ಕಾದರೂ ಇದರ ಬಗ್ಗೆ ತಿದ್ದುಪಡಿ ಮಾಡಬೇಕು. ಯಾವುದೇ ರೀತಿ ಅನ್ಯಾಯವಾಗಬಾರದು.

ಸರ್ಕಾರಿ ವಲಯದ ಕೈಗಾರಿಕೆಗಳು ಬಹಳ ನಷ್ಟದಲ್ಲಿದೆ. ಅದರ ಬಗ್ಗೆ ನಮಗೆ ಕೊಟ್ಟ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ವರದಿಯಲ್ಲಿದೆ. ಮಾನ್ಯ ಎಸ್. ಕೆ. ಕಾಂತಾ ಅವರ ಅಧ್ಯಕ್ಷತೆಯಲ್ಲಿರುವ ಸಮಿತಿ ಇದರ ಬಗ್ಗೆ ವಿಸ್ತೃತವಾದ ವರದಿಯನ್ನು ಕೊಟ್ಟಿದ್ದಾರೆ. ಮೈಸೂರು ಅಸಿಟೇಟ್ ಕೆಮಿಕಲ್ ಕಾರ್ಖಾನೆಯ ಷೇಡ್ ಅಫ್ ಷೇರ್ ಕ್ಯಾಪಿಟಲ್ ೪೨೧ ಲಕ್ಷ ರೂಪಾಯಿ ಇದ್ದರೆ ಅಕ್ಯುಮುಲೇಟೆಡ್ ಲಾಸ್ ೧೧೦೩ ಲಕ್ಷ. ಇದೇರೀತಿ ಎಲ್ಲ ಕಡೆ ಆಗಿದ್ದು ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಮೈಸೂರು ಟುಬ್ಯಾಕೊ ಕಂಪೆನಿ. ಇಂಪ್ಲಿಮೆಂಟ್ಸ್ ಕಂಪೆನಿ, ವಿಜ್ಞಾನ್ ಇಂಡಸ್ಟ್ರೀಸ್, ಎಲೆಕ್ಟ್ರಿಕಲ್ ಇಂಡಸ್ಟ್ರೀಸ್, ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಇದರಲ್ಲಿ ೪೭೫ ಲಕ್ಷ ರೂಪಾಯಿ ನಷ್ಟವಾಗಿದೆ ಕಳೆದ ವರ್ಷ ಮಾನ್ಯ ಸಚಿವರು ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ, ಹೊಸ ವಿಚಾರ ತಂದು ಲಾಭದಾಯಕವಾಗಿ ಉದ್ದಿಮೆಯನ್ನು ಮಾಡುವುದಕ್ಕೆ ಪ್ರಯತ್ನಿಸುತ್ತೇವೆ ಎಂದು ಹೇಳಿದ್ದರು. ಇದರ ಬಗ್ಗೆ ಏನಾಗಿದೆ ಎಂದು ಕೇಳುತ್ತೇನೆ. ಸಕ್ಕರೆ ಕಾರ್ಖಾನೆಗಳು ಕೂಡ ಸಾಕಷ್ಟು ಲಾಭದಲ್ಲಿಲ್ಲ ಎಂದು ಹೇಳುವುದಕ್ಕೆ ವ್ಯಸನವಾಗುತ್ತದೆ. ಅದು ಲಾಭದಲ್ಲಿ ಬರಬೇಕು. ಅದರಲ್ಲಿ ಡಿಸ್ಟಿಲರಿ ಕೂಡ ಇದೆ. ಬಾಟ್ಲಿಂಗ್ ವಿಚಾರ ನಾವು ಸಾಕಷ್ಟು ಮಾತನಾಡಿದ್ದೇವೆ. ಸರ್ಕಾರಿ ವಲಯದಲ್ಲಿರುವ ಈ ಸಂಸ್ಥೆಗಳಿಗಾದರೂ ಬಾಟ್ಲಿಂಗ್ ಕಾಂಟ್ರಾಕ್ಟ್ ಕೊಡಬೇಕು. ಸಹಕಾರಿ ವಲಯದಲ್ಲಿರುವ ಸಕ್ಕರೆ ಕಾರ್ಖಾನೆ ನಷ್ಟದಲ್ಲಿದೆ. ಅವರಿಗೆ ಬಾಟ್ಲಿಂಗ್ ಗುತ್ತಿಗೆ ವಹಿಸಿಕೊಡಿ. ತಮ್ಮ ಅಡ್ಮಿನಿಸ್ಟ್ರೇಟರ್ ಅಥವಾ ಅಧಿಕಾರಿಗಳಿರುವ ಸಂಸ್ಥೆಗೆ ಇದನ್ನು ವಹಿಸಿಕೊಡಿ. ಅದರಿಂದ ಯಾವ ಅಪವಾದವೂ ಬರುವುದಿಲ್ಲ ಎಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಖಾದಿ ಗ್ರಾಮೋದ್ಯೋಗ ಮಂಡಳಿಯಲ್ಲಿ ಎಲ್ಲ ಜಿಲ್ಲೆಗಳಿಗೂ ನೆರವು ಸಿಗಬೇಕು. ದಕ್ಷಿಣ ಕನ್ನಡ ಜಿಲ್ಲೆಗೆ ಸಮರ್ಪಕವಾಗಿ ಸಾಕಷ್ಟು ನೆರವು ಸಿಗುತ್ತಿಲ್ಲ. ಅಲ್ಲಿಗೆ ಸಾಕಷ್ಟು ಪ್ರಚಾರ ಮತ್ತು ನೆರವು ಸಿಗಬೇಕೆಂದು ಹೇಳುತ್ತೇನೆ. ರೇಷ್ಮೆ ಕುರಿತು ಎರಡು ಮಾತು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಅತ್ಯಂತ ಜನಪ್ರಿಯವಾಗುತ್ತಿದೆ. ಅಲ್ಲಿ ರೇರಿಂಗ್ ಸೆಂಟರ್ ಇದೆ, ಆದರೆ ರೇಷ್ಮೆ ಗೂಡನ್ನು ಮಾರಾಟಕ್ಕೆ ರಾಮನಗರಕ್ಕೆ ತರಬೇಕಾಗುತ್ತದೆ, ಅಲ್ಲಿ ಮಾರುವವರು ಹಂಗಿಗೆ ಒಳಪಟ್ಟು ಒಂದೆರಡು ದಿವಸ ಉಳಿಯಬೇಕು. ಅವರು ಎಷ್ಟು ಕೊಡುತ್ತಾರೋ ಅಷ್ಟು ತೆಗೆದುಕೊಂಡು ಹೋಗುವ ಪರಿಸ್ಥಿತಿ ಇದೆ. ನಾನೇ ಸ್ವತಃ ರೇಷ್ಮೆ ಬೆಳೆಗಾರನಾಗಿರುವುದರಿಂದ ಆ ಸಂಕಷ್ಟ ಅನುಭವಿಸಿದ್ದೇನೆ. ಅವರು ಹಣ ಕೊಟ್ಟಷ್ಟು ತೆಗೆದುಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ಇದು ಆಗಬಾರದು. ರೇಷ್ಮೆಯಲ್ಲಿ ಆಧುನಿಕತೆಯನ್ನು ಅಳವಡಿಸಿದ್ದೀರಿ. ಆದರೆ ಸರ್ಕಾರದಲ್ಲಿ ಹಣದ ಮುಗ್ಗಟ್ಟಿದೆ ಎಂದು ಹೇಳುವಾಗ ಕೆಲವು ಕಡೆ ಖರ್ಚು ಜಾಸ್ತಿಯಾಗುತ್ತಿದೆ ಎಂದು ನನಗನ್ನಿಸುತ್ತದೆ, ತಮ್ಮ ಇಲಾಖೆಯಲ್ಲಿ ಕಂಪ್ಯೂಟರ್ ಯಾಂತ್ರೀಕರಣ ೨೦ ಲಕ್ಷ ರೂಪಾಯಿ ವೆಚ್ಚದಲ್ಲಿ ಆಗಿದೆ. ರೇಷ್ಮೆ ಕೃಷಿ ನಿರ್ದೇಶನಾಲಯದಲ್ಲಿ ಒಂದು ಸಭಾಂಗಣ ಇದ್ದರೂ ಇನ್ನೊಂದು ಹೊಸ ಸುಸಜ್ಜಿತ ಸಭಾಂಗಣವಾಗಿದೆ. ರೇಷ್ಮೆ ವಿನಿಮಯ ಕೇಂದ್ರದಲ್ಲಿ ನೂಲು ಬಿಚ್ಚುವವರ ಸಂತೋಷಕ್ಕಾಗಿ ೨೩ ಸೌಂಡ್ ಬಾಕ್ಸ್ ಇರುವ ಸಂಗೀತ ವ್ಯೂಹ ವ್ಯವಸ್ಥೆ ಇದೆ. ಶಾಸಕರಿಗೆ ಶಾಸಕಾಂಗ ಭವನದಲ್ಲಿ ಇಲ್ಲದೇ ಇರುವ ವ್ಯವಸ್ಥೆ ರೇಷ್ಮೆ ಇಲಾಖೆಯಲ್ಲಿ ಆಗಿದೆ ಎಂದರೆ ಈ ಬರಗಾಲದ ಪರಿಸ್ಥಿತಿಯಲ್ಲಿ

ಆಡಂಬರ ಜಾಸ್ತಿಯಾಯಿತು ಎಂದೆನಿಸುತ್ತದೆ. ೫ ವರ್ಷ ಮೇಲಿನವರಿಗೆ ವರ್ಗಾವಣೆ ಮಾಡಬೇಕೆಂಬ ನೀತಿಯನ್ನು ಹಾಕಿದ್ದೀರಿ ವರ್ಗಾವಣೆ ವಿಷಯದಲ್ಲಿ ನಾನು ಆರೋಪ ಮಾಡುವುದಿಲ್ಲ. ಆದರೆ ಕೆಲವು ಜನ ಹೇಳುತ್ತಿದ್ದಾರೆ. ಪಕ್ಷಪಾತ ಆಗಿದೆ ಎಂಬ ಮಾತು ಬರುತ್ತಿದೆ. ಇದು ಆಗದಂತೆ ಸಚಿವರು ನೋಡಿಕೊಳ್ಳಬೇಕು. ಕೆಲವು ವರ್ಗಾವಣೆ ಬೆಂಗಳೂರಿನಿಂದ ಬೆಂಗಳೂರಿಗೇ ಆಗಿದೆ. ಇದು ಯಾವ ರೀತಿಯ ವರ್ಗಾವಣೆ? ಇದು ಆಗಬಾರದು. ಗಂಡಹೆಂಡತಿ ಇಬ್ಬರೂ ಉದ್ಯೋಗಿಗಳಾದರೆ ಸಾಧಾರಣ ಒಂದೇ ಕಡೆ ಕೊಡಬೇಕೆಂದಿದೆ, ಆದರೂ ಕೆಲವು ಸಂದರ್ಭಗಳಲ್ಲಿ ಬೇರ್ಪಡಿಸಲಾಗಿದೆ. ಅಂಗವಿಕಲರಿಗೂ ಇದೇರೀತಿ ಮಾಡಲಾಗಿದೆ. ಇಂಥದ್ದು ಇದ್ದರೆ ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಐದು ನಿಮಿಷದಲ್ಲೇ ಮುಗಿಸಿದ್ದೇನೆಂದು ಕಾಣುತ್ತದೆ.

ಅಧ್ಯಕ್ಷರು.—ನಿಮಗೆ ವಂದನೆಗಳು.

ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ದೊಡ್ಡ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆ ಇನ್ನಿತರ ಬೇಡಿಕೆಗಳ ಕುರಿತು ಕೆಲವು ಮಾತುಗಳನ್ನು ಆಡುವುದಕ್ಕೆ ಅಪೇಕ್ಷೆಪಡುತ್ತೇನೆ. ಆದರೆ ಐದು ನಿಮಿಷದಲ್ಲಿ ಏನು ಹೇಳಬೇಕೋ ಎಂಬುದು ಕಷ್ಟದ ವಿಚಾರ. ಆದರೂ ಕೂಡ ದೊಡ್ಡ ಕೈಗಾರಿಕೆ ವಿಚಾರದಲ್ಲಿ ಹೆಚ್ಚು ಮಾತನಾಡದೆ ಗ್ರಾಮಾಂತರ ಪ್ರದೇಶಗಳಿಗೆ ಬೇಕಾದ ಸಣ್ಣ ಕೈಗಾರಿಕೆಗಳ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಗಳು ತುಂಬಿ ಬರಬೇಕೆಂದು ಹೇಳುತ್ತಿದ್ದೇನೆ. ಸರ್ಕಾರ ಕೂಡ ತಿಂಗಳಲ್ಲಿ ಸಾವಿರ ಕೈಗಾರಿಕೆಗಳನ್ನು ಮಾಡತಕ್ಕ ಒಂದು ಯೋಜನೆಯನ್ನು ಮಾಡತಕ್ಕ ಪ್ರಚಾರವನ್ನು ಮಾಡಿದೆ. ಮಧ್ಯಮ ವರ್ಗದವರು ಮತ್ತು ಬಡವರು ಚರ್ಮದ ಕೆಲಸ, ತೆಂಗಿನ ನಾರಿನ ಕೆಲಸ, ಜೇನು ಸಾಕಣಿಕೆ ಇದನ್ನೆಲ್ಲಾ ಹೆಚ್ಚಾಗಿ ಗ್ರಾಮಾಂತರ ಪ್ರದೇಶದಲ್ಲಿ ಮಾಡುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ, ಚೊಕ್ಕಾಡಿಯಲ್ಲಿ, ಮತ್ತು ಇನ್ನೂ ಅನೇಕ ಕಡೆಯಲ್ಲಿ ಜೇನಿನ ಸಾಕಣಿಕೆಯಲ್ಲಿ ಕೀರ್ತಿಯನ್ನು ಪಡೆದಿದ್ದಾರೆ. ಅವರಿಗೆ ಬೇಕಾದಷ್ಟು ಸಹಕಾರ ಮತ್ತು ಸಹಾಯವನ್ನು ಸರ್ಕಾರ ಕೊಟ್ಟರೆ ಇನ್ನೂ ಹೆಚ್ಚು ಕೆಲಸ ಮಾಡುವುದಕ್ಕೆ ಸಾಧ್ಯವಾದೀತು, ಮತ್ತು ಆದ್ದರಿಂದ ಹೆಚ್ಚಿನ ಲಾಭ ಬಂದೀತು ಎಂದು ನನ್ನ ಅನಿಸಿಕೆ.

೭-೦೦ ಪಿ. ಎಂ.

ಈ ರೀತಿಯಲ್ಲಿ ನಮ್ಮಲ್ಲಿ ತೆಂಗಿನ ಬೆಳೆ, ತೆಂಗಿನ ನಾರು ಬಹಳಷ್ಟು ಇರುವಾಗ, ಅದರಲ್ಲಿಯೂ ಸಮುದ್ರದ ಬದಿಯಲ್ಲಿ ಮತ್ತು ನದಿಯ ಬದಿಯಲ್ಲಿ ಈ ತೆಂಗಿನ ನಾರಿನ ಒಂದು ವ್ಯವಸ್ಥೆಯನ್ನು ಮಾಡಿ ಅದರ ವ್ಯಾಪಾರವನ್ನು ಮಾಡಲಿಕ್ಕೂ ಕೂಡಾ, ಅದರ ಕೈ ಕಸಬನ್ನು ಮಾಡುವುದಕ್ಕೂ ಅನುಕೂಲ ಉಂಟು. ಅದಕ್ಕೆ ಸರಿಯಾದ ವ್ಯವಸ್ಥೆ ಅಲ್ಲಿ ಇಲ್ಲ. ಬಹುಶ: ಇಲ್ಲಿ ರಾಜ್ಯದಲ್ಲಿ ತೆಂಗಿನ ನಾರಿನ ನಿಗಮ ಆಗಲಿಲ್ಲವೋ, ಆಗಬೇಕೋ ಏನೋ ಗೊತ್ತಿಲ್ಲ. ಅದು ಆದರೆ ಅದರ ಒಂದು ಘಟಕವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೆರಡು ಕಡೆ ತೆರೆಯುವಂತಹದ್ದು ಬಹಳ ಒಳ್ಳೆಯದು. ಅದರಿಂದ ಅನೇಕ ಬಡವರಿಗೆ ಕೆಲಸ ಆಗುತ್ತದೆ. ಇವತ್ತೂ ಕೂಡಾ ಜನ ಅದನ್ನು ಕೈಯ್ಯಲ್ಲಿ ಬಡಿದು ಕೆಲಸ ಮಾಡುತ್ತಿದ್ದಾರೆ.

ಇನ್ನು ಸುಣ್ಣದ ಕೈಗಾರಿಕೆ. ಇದು ಕೂಡಾ ನಮ್ಮ ಜಿಲ್ಲೆಯಲ್ಲಿ ಬಹಳ ದೊಡ್ಡ ಕೈಗಾರಿಕೆ. ಇದಕ್ಕೆ ಬೇಕಾದಷ್ಟು ಸಲಹೆಯನ್ನು ಕೊಡತಕ್ಕದ್ದು, ಅವರಿಗೆ ಬೇಕಾದಷ್ಟು ಸಹಾಯವನ್ನು ಮಾಡುವಂತಹದ್ದು ಅವಶ್ಯಕ ಈ ರೀತಿಯಲ್ಲಿ ಸಹಾಯವನ್ನು ಸರ್ಕಾರ ಮಾಡಿದರೆ ನಿಜವಾಗಿಯೂ ಮಧ್ಯಮ ವರ್ಗದವರಿಗೆ, ಬಡವರಿಗೆ ನಿಜವಾಗಿಯೂ ಸಹಾಯ ಮಾಡಬೇಕೆಂದು ಸರ್ಕಾರ ಯಾವ ಒಂದು ಒಳ್ಳೆಯ ಆಲೋಚನೆಯನ್ನು ಇಟ್ಟುಕೊಂಡಿದೆಯೋ ಅದನ್ನು ಪರಿಪೂರ್ಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಬರೀ ಬಾಯಲ್ಲಿ, ಕಾಗದದಲ್ಲಿ ಪತ್ರಿಕೆಗಳಲ್ಲಿ ಇದ್ದರೆ ಅದು ಅಲ್ಲಿ ಹೋಗಿ ಮುಟ್ಟುವುದಿಲ್ಲ.

ಇನ್ನು ಇಟ್ಟಿಗೆ ಕೆಲಸ ಮಾಡುವವರು ನಮ್ಮ ದಕ್ಷಿಣ ಕನ್ನಡದಲ್ಲಿ ಅನೇಕ ಜನರು ಇದ್ದಾರೆ. ಇವರು ಬೇರೆ ಕಡೆಯಲ್ಲೂ ಇರಬಹುದು. ಅವರಿಗೂ ಕೂಡಾ ಟ್ಯಾಕ್ಸನ್ನು ಹಾಕತಕ್ಕಂತಹದ್ದು ಮತ್ತು ಬೇರೆ ರೀತಿಯ ತೆರಿಗೆಯನ್ನು ಹಾಕುವುದನ್ನು ತಪ್ಪಿಸಿ ಆದಷ್ಟು ಅವರು ಕೆಲಸ ಮಾಡಿ ಜೀವನವನ್ನು

ಮಾಡುವ ಹಾಗೆ ಮತ್ತು ಅದೇ ರೀತಿಯಲ್ಲಿ ಒಂದು ಒಳ್ಳೆಯ ಕಾರ್ಯಕ್ರಮವನ್ನು, ಕಸಬನ್ನು ಮಾಡಿ ಕೈಗಾರಿಕೆಯನ್ನು ಮೇಲೆ ತರಲಿಕ್ಕೆ ಅವಕಾಶ ಆಗುತ್ತದೆ. ಇದಕ್ಕೆ ಸಹಾಯ ಮಾಡಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ.

ಇನ್ನು ಖಾದಿ ಬೋರ್ಡ್‌ನ ಬಗ್ಗೆ ನಾನು ಹೇಳಬೇಕಾಗುತ್ತದೆ. ಖಾದಿ ಬೋರ್ಡ್ ಬಿಳಿ ಆನೆ ಯೆಂದು ನಾನು ಮೊದಲೊಮ್ಮೆ ಮಾತನಾಡುವಾಗ ಹೇಳಿದ್ದೇನೆ. ಅದರಲ್ಲಿ ಸಂಶಯವೇ ಇಲ್ಲ. ಅದು ಒಂದು ಬಿಳಿ ಆನೆ. ಈ ಖಾದಿ ಬೋರ್ಡ್‌ನ್ನು ನೀವು ಬೇರೆಯಾಗೇ ಇಟ್ಟಿದ್ದೀರಿ. ಅಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಎಂದು ಎಲ್ಲಾ ಪತ್ರಿಕೆಗಳಲ್ಲಿ ಅನೇಕ ಬಾರಿ ಓದಿಓದಿ ಬೇಜಾರಾಗಿದೆ. ಅದುದರಿಂದ ಅದನ್ನು ಸರ್ಕಾರಿ ಕೈಗಾರಿಕಾ ಇಲಾಖೆಯಲ್ಲಿ ಮರ್ಜ್ ಮಾಡಿಕೊಂಡರೆ ಒಳ್ಳೆಯದು. ಅದನ್ನು ಇವತ್ತು ಬೇರೆಯಾಗಿ ಏಕೆ ಇಡಬೇಕು ? ಅದಕ್ಕೆ ನೀವು ಒಂದು ಮಂಡಲಿಯನ್ನು ಮಾಡಿದ್ದೀರಿ. ಅದರಲ್ಲಿ ೨೦–೨೨ ಜನರನ್ನು ಜಿಲ್ಲೆಗೊಂದರಂತೆ ಮಾಡಿದ್ದೀರಿ. ಅವರು ಏನು ಖದ್ದರು ತೊಡುವವರೋ ಖದ್ದರು ಹಾಕುತ್ತಿದ್ದಾರೋ ? ಅವರು ಖದ್ದರು ಮೇಲೆ ಪ್ರೀತಿ ಇದ್ದವರೋ ? ಖಾದಿ ಮೇಲೆ ಪ್ರೀತಿ ಇದ್ದವರೋ ? ಮಹಾತ್ಮಾ ಗಾಂಧಿ ತತ್ವವನ್ನು ಅನುಸರಣೆ ಮಾಡತಕ್ಕವರೋ ? ಇಂತಹದ್ದನ್ನೆಲ್ಲಾ ನೀವು ಏನು ನೋಡಿ ಮಾಡಿದ್ದೀರೋ ನನಗೆ ಗೊತ್ತಿಲ್ಲ. ಅದು ನಿಮಗೆ ಗೊತ್ತಿರತಕ್ಕ ವಿಚಾರ. ಈ ನಿಗಮದಲ್ಲಿ ಮೊದಲು ೧೦ ಜನ–೧೨ ಜನ ಸದಸ್ಯರು ಇದ್ದರು. ಒಂದು ಸಾರಿ ಬರೀ ೫ ಜನ ಇದ್ದರು. ಇವತ್ತು ಉದ್ದವಾಗಿ ೨೦ ಜನರನ್ನು ಮಾಡಿದ್ದೀರಿ. ಮತ್ತೆ ಅಧಿಕಾರಿಗಳನ್ನೂ ಮಾಡಿದ್ದೀರಿ. ನಾನು ಹೇಳುವುದಾದರೆ, ಜಿಲ್ಲೆಯಲ್ಲಿ ಮಂಡಲಿಯನ್ನು ತೆರೆದಿರುವಾಗ. ಮತ್ತು ಜಿಲ್ಲಾ ಘಟಕಗಳನ್ನು ತೆರೆದಿರುವಾಗ, ಅಲ್ಲಿ ಒಂದು ಸಮಿತಿಯನ್ನು ಮಾಡಿರುವಾಗ, ಈ ರೀತಿ ಉದ್ದವಾಗಿ ಮಾಡುವ ಅಗತ್ಯ ಇರಲಿಲ್ಲ. ೬–೭ ಜನರ ಸಮಿತಿಯನ್ನು ಮಾಡಿದ್ದರೆ ಹಾಗೂ ಜಿಲ್ಲೆಯಲ್ಲಿ ಸಮಿತಿಗಳು ಇದ್ದರೆ ಇದನ್ನು ನಡೆಸಿಕೊಂಡು ಹೋಗಬಹುದಿತ್ತು. ಆದುದರಿಂದ ಇದು ಒಂದು ಬರೀ ಖರ್ಚಿಗೆ ದಾರಿ ಮಾಡಿದ ಹಾಗಿದೆ. ಒಂದು ಟಿ. ಎ., ಡಿ. ಎ, ತೆಗೆದುಕೊಳ್ಳತಕ್ಕ, ಬರೀ ಅನಾವಶ್ಯಕ ಖರ್ಚಿಗೆ ದಾರಿಯಲ್ಲದೇ ಈ ಸದಸ್ಯರಿಂದ ಯಾವುದೇ ಒಂದು ಲಾಭ ಖಾದಿ ಬೋರ್ಡಿಗೆ ಆಗುತ್ತದೆ ಎಂದು ಹೇಳುವುದು ಅಲ್ಲ. ನಾನೂ ಕೂಡಾ ಒಂದು ಸಾರಿ ಖಾದಿ ಬೋರ್ಡಿನ ಸದಸ್ಯನಾಗಿದ್ದೆ. ನನ್ನ ಅನುಭವದ ಮಾತುಗಳನ್ನು ನಾನು ಹೇಳುವಂತಹದ್ದು. ಅದನ್ನು ಆದಷ್ಟು ಒಳ್ಳೆಯ ರೀತಿಯಲ್ಲಿ ಉಪಯೋಗಿಸಬೇಕೆಂದು ಮನಸ್ಸು ಇದ್ದರೆ ಅದನ್ನು ಕೈಗಾರಿಕಾ ಇಲಾಖೆಗೆ ವರ್ಗ ಮಾಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಅವರಷ್ಟಕ್ಕೆ ಅವರಿಗೇ ಬಿಟ್ಟರೆ ಅವರಲ್ಲಿ ಅನೇಕ ರೀತಿಯ ಭ್ರಷ್ಟಾಚಾರ ಆಗಿದೆ ಎಂಬುದನ್ನು ನಾನು ಬೇರೆ ಇವತ್ತು ಹೇಳಬೇಕಾಗಿಲ್ಲ. ಇವತ್ತು ಅಲ್ಲಿಯ ಕೆಲಸಗಾರರಿಗೆ ಸರಿಯಾದ ವ್ಯವಸ್ಥೆ ಮಾಡಬೇಕು. ಸರ್ಕಾರಿ ನೌಕರರಿಗೆ ಏನು ಇಲ್ಲಿ ಕೊಡುತ್ತೀರೋ ಅದನ್ನು ಅಲ್ಲಿ ಅವರಿಗೂ ಕೊಡಬೇಕು. ಅವರು ಕೂಡಾ ಕಳೆದ ಸಲ ಬಹಳ ದೊಡ್ಡ ಬೇಡಿಕೆಗಳನ್ನೆಲ್ಲಾ ಇಟ್ಟಿದ್ದರು. ಅದನ್ನು ಬಹುಶಃ ಮಂತ್ರಿಗಳಾದ ದೇಶಪಾಂಡೆಯವರು ಲೀಲಾಜಾಲವಾಗಿ ಬಿಡಿಸಿದರು ಎಂದು ಪತ್ರಿಕೆಗಳಲ್ಲಿ ಓದಿದೆವು ಅದೇ ರೀತಿಯಲ್ಲಿ ಅಂತಹ ಏನು ಅನಿಸಿಕೆಗಳು ಇದ್ದರೂ ಕೂಡಾ ಕೆಲಸ ಮಾಡುವವರಿಗೆ ತೊಂದರೆ ಮಾಡಬಾರದು. ಅದೂ ಅಲ್ಲದೆ ಇವತ್ತು ಅನೇಕ ದೊಡ್ಡ ಕಾರ್ಖಾನೆಗಳನ್ನು ಮುಚ್ಚಿದಂತಹ ವಿಚಾರವನ್ನು ನಾವು ಕೇಳಿದ್ದೆವು. ನಾನು ಹೇಳುವಂತಹದ್ದು ಏನೆಂದರೆ ಈ ಮುಚ್ಚಿದ ಕಾರ್ಖಾನೆಗಳನ್ನು ತೆರೆಸುವುದಕ್ಕೆ ಮಾನ್ಯ ಪಟೇಲರು ಸಾಧನೆ ಮಾಡಬೇಕು ಅವರು ಹೇಳಿದರು, ಸಾಧ್ಯವೇ ಇಲ್ಲವೆಂದು. ಅಲ್ಲಿ ೫ ಸಾವಿರ ಜನ ಕೆಲಸ ಮಾಡತಕ್ಕವರು ಇದ್ದಾರೆ. ನೀವು ಸಮಾಜ ವಾದಿಗಳು. ಬಡವರ ಕಡೆಗೆ ಸ್ವಲ್ಪ ದೃಷ್ಟಿ ಇರಬೇಕು. ಕೂಲಿಗಾರ ಜನತೆಗೆ ಏನು ತೊಂದರೆ ಬಂದರೂ, ದೊಡ್ಡವರನ್ನು ಸದೆಬಡಿದಾದರೂ ಕೂಡಾ ಬಡವರನ್ನು ಉಳಿಸತಕ್ಕ ರೀತಿಯಲ್ಲಿ ಕೆಲಸ ಮಾಡಿದರೆ ನೀವು ಹಿಂದೆ ಯಾವುದಕ್ಕಾಗಿ ದುಡಿದಿದ್ದೀರೋ ಅದರ ಫಲ ನಿಮಗೆ ಕಡೆಗೆ ಮಾಗಿದ ಕಾಲದಲ್ಲಿ ಮಾಗಿದ ಹಣ್ಣಾಗಿ ಸಿಗುತ್ತದೆ. ಅದು ಸಾಧ್ಯವಾಗುತ್ತದೆ. ಸಾಧ್ಯವಿಲ್ಲವೆಂದು ತಾವು ನಿರಾಶರಾಗ ಬಾರದು. ನೀವು ನಿರಾಶಾವಾದಿಗಳಾದರೆ ಬಹಳ ಕಷ್ಟ. ನಿರಾಶಾವಾದಿಗಳಾಗದಂತಹ ವ್ಯವಸ್ಥೆ ಜನ ಎಂದು ಇರುವಾಗ ಅದು ಮಾಡುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳತಕ್ಕದ್ದು ಸರಿಯಲ್ಲ. ಯಾವುದೇ ರೀತಿಯಿಂದ. ಯಾವುದೇ ಹಣತೊಟ್ಟು ಅಲ್ಲಿ ಕೆಲಸ ಮಾಡತಕ್ಕ ಜನ ಬೀದಿಯಲ್ಲಿ ಬೀಳದಹಾಗೆ ನೋಡಿ ಕೊಳ್ಳುವುದು ಅಗತ್ಯ. ಇನ್ನೊಂದು ಹೊಸ ಕಾರ್ಖಾನೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಆದುದರಿಂದ ಮುಚ್ಚಿ ಹೋಗಿದೆ ರೋಗಗ್ರಸ್ತವಾಗಿದೆಯೆಂದು ಹೇಳಿ ಅದನ್ನು ಬಿಟ್ಟು ಹೋಗಬಾರದು.

ಅದೇ ರೀತಿಯಲ್ಲಿ ನಮ್ಮ ಮಾಲಿನ್ಯದ ಬಗ್ಗೆ ಹೇಳಬೇಕೆಂದರೆ, ಕಾರವಾರದ ಸೋಡಾ ಕಾರ್ಖಾನೆ, ಅದೇ ರೀತಿಯಲ್ಲಿ ದಾವಣಗೆರೆಯಲ್ಲಿರತಕ್ಕ ಒಂದು ಕಾರ್ಖಾನೆಯಿಂದ ಮಾಲಿನ್ಯ ನಿಯಂತ್ರಣದಲ್ಲಿ ಬಹಳ ತೊಂದರೆಯಾಗುತ್ತಿದೆಯೆಂದು ಹೇಳುತ್ತೇನೆ. ನಾವು ಭೂಪಾಲದ ದುರಂತವನ್ನು ಕೇಳಿ ನಿರಂತರವಾಗಿ ದುಃಖ ಪಡುತ್ತಾ ಇರತಕ್ಕ ಜನ, ನಮ್ಮ ರಾಜ್ಯವನ್ನಾದರೂ ನಾವು ಒಳ್ಳೆಯ ರೀತಿಯಲ್ಲಿ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು, ಈ ಮಾಲಿನ್ಯ ನಿಯಂತ್ರಣ ಮಾಡುವುದಕ್ಕೆ ನಾವು ಬೇಕಾದಷ್ಟು ಪ್ರತಿಯೊಂದು ಸಭೆಯಲ್ಲೂ ಹೇಳಿ ಬೇಕಾದಂತಹ ಜಾಗ್ರತೆ ಮಾಡುತ್ತೇವೆಂದು ಎಚ್ಚರಿಕೆಯನ್ನು ಕೊಡತಕ್ಕದ್ದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಇವತ್ತು ನಮ್ಮ ಮಂಗಳೂರಿನಲ್ಲಿ ರಾಸಾಯನಿಕ ಗೊಬ್ಬರ ತಯಾರಿಕೆ ಕಾರ್ಖಾನೆ ಉಂಟು. ಅಲ್ಲಿ ಯಾವ ಕಾಲದಲ್ಲಿ ಏನು ಆಗುತ್ತದೆ. ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಕಾಲಕಾಲಕ್ಕೆ ತನಿಖೆ ಮಾಡಿ ಏನಾದರೂ ಮಾಲಿನ್ಯತೆ, ತೊಂದರೆ ಆಗುವಂತಹದ್ದು ಇದ್ದರೆ ಅಂತಹವರಿಗೆ ಅದನ್ನು ಸರಿಪಡಿಸುವ ಹಾಗೆ ವ್ಯವಸ್ಥೆ ಮಾಡುವ ಒಂದು ಮುನ್ನೆಚ್ಚರಿಕೆಯನ್ನು ಕೂಡಾ ಉಳಿಸಿಕೊಳ್ಳುವಂತಹದ್ದು ಬಹಳ ಮುಖ್ಯ. ಏಕೆಂದರೆ ಇದು ಬಹಳ ಪ್ರಾಮುಖ್ಯವಾದ ವಿಷಯ. ಇನ್ನು ಬ್ರಹ್ಮಾವರದಲ್ಲಿನ ಸಕ್ಕರೆ ಕಾರ್ಖಾನೆಗೆ ೮೭ ಎಕರೆ ಜಮೀನನ್ನು ಕೊಟ್ಟಿತ್ತು. ಅದರಲ್ಲಿ ೪೭ ಎಕರೆಯನ್ನು ಕಾರ್ಖಾನೆಗೆ ಕೊಟ್ಟು ಉಳಿದ ೪೦ ಎಕರೆಯನ್ನು ಬೇರೆ ಒಬ್ಬ ಉದ್ಯಮಿಗೆ ಕೊಟ್ಟಿದ್ದಾರೆ. ಅದಕ್ಕಿಂತ ತಾವೇ ತಮ್ಮ ಕಡೆಯಿಂದಲೇ ಶೆಡ್‌ಗಳನ್ನು ಕಟ್ಟಿ ಅನೇಕರಿಗೆ ಕೊಟ್ಟಿದ್ದರೆ ಎಷ್ಟು ಉಪಕಾರ ಆಗುತ್ತಾ ಇತ್ತು? ದಕ್ಷಿಣಕನ್ನಡದಲ್ಲಿ ಕೈಗಾರಿಕೆಗೆ ಬೇಕಾದಷ್ಟು ಅವಕಾಶ ಉಂಟು. ನೀವು ಅಲ್ಲಲ್ಲಿ ಶೆಡ್‌ಗಳನ್ನು ಹಾಕಿ ಬೇರೆ ಬೇರೆಯವರಿಗೆ ಕೊಡಬೇಕು ಇನ್ನು ಸ್ವ ಉದ್ಯೋಗದಲ್ಲಿ ೨೫ ಸಾವಿರ ರೂಪಾಯಿಗಳನ್ನು ಕೊಡುವುದು. ಇದಕ್ಕೆ ಅನೇಕ ಜನ ಅರ್ಜಿ ಹಾಕಿಕೊಂಡಿದ್ದಾರೆ. ಅದರಲ್ಲಿ ಹೆಚ್ಚಿನವರಿಗೆ ಸಿಗುವುದಿಲ್ಲ. ಅದು ಕೂಡಾ ಏಳೆಂಟು ಸಾರಿ ಅದು ಆಗಬೇಕು, ಇದು ಆಗಬೇಕು ಎಂದು ಹೇಳಿ ಅವರನ್ನು ಅಚೆ ಈಚೆ ಕಳುಹಿಸಿ ಕಷ್ಟಕೊಡುತ್ತಿದ್ದಾರೆ. ಅವರಿಗೆ ಅದು ಬೇಗನೆ ಸಿಗುವುದಿಲ್ಲ. ಅವರು ಅದನ್ನು ಸಂಗ್ರಹಿಸಿ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಸ್ವ ಉದ್ಯೋಗದಲ್ಲಿ ಮುಂದೆ ಬರಬೇಕು, ಪ್ರಗತಿದಾಯಕವಾದ ಕೆಲಸ ಮಾಡಿ ಮುಂದೆ ಹೋಗತಕ್ಕ ದಾರಿಯನ್ನು ಕಾಣಬೇಕೆಂದು ನೀವೇ ಹಾಕಿಕೊಟ್ಟ ವ್ಯವಸ್ಥೆ ಅವರಿಗೆ ಸರಿಯಾಗಿ ಮುಟ್ಟುವುದಿಲ್ಲವೆಂದು ನಾನು ಕೇಳಿದ್ದೇನೆ. ನಮಗೆ ಈ ಬಗ್ಗೆ ಅನೇಕ ದೂರುಗಳು ಬಂದಿವೆ. ಈ ಕಡೆ ಕೂಡಾ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಕೈಗಾರಿಕೆಗಳು ಬರುವಹಾಗೆ. ತೆಂಗಿನ ನಾರಾಗಲೀ, ಜೇನು ಸಾಕಾಣಿಕೆಯಾಗಲೀ ಸುಣ್ಣದ ಕೆಲಸವಾಗಲಿ ಇಟ್ಟಿಗೆ ಕೆಲಸವಾಗಲಿ, ಅಥವಾ ಇನ್ಯಾವುದೇ ಆಗಲಿ ಅದನ್ನು ಬರುವಂತೆ ಮಾಡಬೇಕು. ಮತ್ತು ನಮ್ಮ ಮಂತ್ರಿಗಳ ಹತ್ತಿರ ನನ್ನ ಒಂದು ಪ್ರಾರ್ಥನೆ, ಏನೆಂದರೆ ದೊಡ್ಡ ದೊಡ್ಡ ತಿಮಿಂಗಲಗಳು, ಮೊಸಳೆಗಳು ಕಾರ್ಖಾನೆಗಳಲ್ಲಿ ಸೇರಿಕೊಂಡಿದ್ದಾವೆ. ಅಧಿಕಾರಿಗಳು ಕೂಡಾ-ಕೆಲವರು, ಎಲ್ಲರೂ ಅಲ್ಲ, ಇದಕ್ಕೆ ಕುಮ್ಮಕ್ಕು ಕೊಡುತ್ತಾರೆಂದು ಹೇಳುವಾಗ ನೀವು ಮೂರು ತಿಂಗಳಿಗೊಮ್ಮೆ ಪ್ರತಿ ಕಾರ್ಖಾನೆಯ ಕೆಟ್ಟದ್ದನ್ನು ಹಾಗೂ ಒಳ್ಳೆಯದನ್ನು ನೋಡತಕ್ಕ ಒಂದು ತಃಖ್ತೆಯನ್ನು ತರಿಸಬೇಕು. ಮತ್ತು ಅಲ್ಲಿಗೆ ತಾವು ವಿಶೇಷ ಸಂದರ್ಶನ ನೀಡಬೇಕು. ಹಾಗೂ ಅನಿರೀಕ್ಷಿತವಾಗಿ ಭೇಟಿಕೊಡಬೇಕು. ನಮ್ಮ ಜಿಲ್ಲೆಗೆ ದೇಶಪಾಂಡೆಯವರು ಬಂದದ್ದು ಬಹಳ ಕಮ್ಮಿ. ಅದೇ ರೀತಿಯಲ್ಲಿ ಪಟೇಲರು ಬಂದದ್ದೂ ಬಹಳ ಕಡಿಮೆ. ಹೆಚ್ಚು ಕೈಗಾರಿಕಾ ಪ್ರದೇಶವಿರುವ ದಕ್ಷಿಣ ಕನ್ನಡಕ್ಕೆ, ಹಾಗೂ ಕೈಗಾರಿಕೆಗಳು ಇರತಕ್ಕ ಪ್ರದೇಶಕ್ಕೆ ಬಂದು ಅನಿರೀಕ್ಷಿತ ಭೇಟಿ ಕೊಟ್ಟು ಅವರ ನಾಡಿ ನಾಡಿಗಳಲ್ಲಿರತಕ್ಕ ದೋಷವನ್ನು ಹುಡುಕುವ ಕೆಲಸ ಮಾಡಿದರೆ ನಿಜವಾಗಿಯೂ ಒಳ್ಳೆಯದಾಗುತ್ತದೆ. ಹಾಗೆ ಆಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ) ಮಾನ್ಯ ಅಧ್ಯಕ್ಷರೇ, ಈ ದಿವಸ ಕೈಗಾರಿಕಾ ಇಲಾಖೆಯ ಬೇಡಿಕೆಯನ್ನು ನಾನಾ ಕಾರಣಗಳಿಗೆ ವಿರೋಧಿಸುತ್ತಾ ನನ್ನ ಮಾತುಗಳನ್ನು ಮುಂದುವರಿಸುತ್ತೇನೆ. ಅಧ್ಯಕ್ಷರೇ ಇವತ್ತು ಮಾನವನಿಗೆ ವ್ಯವಸಾಯವನ್ನು ಬಿಟ್ಟರೆ, ಅಗತ್ಯ ವಸ್ತುಗಳು ಹಾಗೂ ಉದ್ಯೋಗವನ್ನು ಒದಗಿಸತಕ್ಕದ್ದು ಕೈಗಾರಿಕೆ. ಆದರೆ ಈ ಕೈಗಾರಿಕೆಯನ್ನು ಖಾಸಗಿ ವಲಯ ಹಾಗೂ ಸಾರ್ವಜನಿಕ ಕ್ಷೇತ್ರದ ಎಂದು ಎರಡು ಭಾಗವಾಗಿ ವಿಂಗಡನೆ ಮಾಡಿದ್ದಾರೆ. ಬಹುಶ; ಈ ಸಾರ್ವಜನಿಕ ಕ್ಷೇತ್ರದ ಕೈಗಾರಿಕಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡತಕ್ಕದ್ದು, ಅವುಗಳು ಹೆಚ್ಚು ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಪ್ರೋತ್ಸಾಹ ಕೊಡುವುದು ಬಹಳ ಮುಖ್ಯ. ಇವತ್ತು ಕೈಗಾರಿಕಾ ಕ್ಷೇತ್ರದಲ್ಲಿ ಏನು ದೇಶದ ಕಾರ್ಮಿ

ಕರು ಶ್ರಮವಹಿಸಿ ದುಡಿಯುತ್ತಾರೆ ಅವರಿಗೆ ತಕ್ಕ ಫಲ ಸಿಗುತ್ತದೆ ಅದು ಸಮಾಜಕ್ಕೆ ಮತ್ತು ಸಮಾಜದ ಅಭಿವೃದ್ಧಿಗಾಗಿ ಮತ್ತೆ ವಿನಿಯೋಗವಾಗುವುದರಿಂದ ಈ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಯೋಗ್ಯವಾದ, ಉತ್ತಮವಾದ ರೀತಿಯಲ್ಲಿ ನಡೆಯುವುದಕ್ಕೆ ಸರ್ಕಾರ ಗಮನಕೊಡಬೇಕಾದುದು ಬಹಳ ಮುಖ್ಯ. ಆದರೆ ಇವತ್ತು ಈ ಸಾರ್ವಜನಿಕ ಕ್ಷೇತ್ರದ ಉದ್ಯಮಗಳು ಯಾವಾಗಲೂ ಸಹಾ ನಷ್ಟಕ್ಕೆ ಗುರಿಯಾಗಿ, ಖಾಸಗೀ ಕ್ಷೇತ್ರದ ಉದ್ಯಮಗಳು ಲಾಭದಾಯಕವಾಗಿ ನಡೆಯುವುದಕ್ಕೆ ಕಾರಣವೇನು? ಇವತ್ತು ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಯನ್ನು ತೆಗೆದುಕೊಳ್ಳೋಣ. ಕಬ್ಬಿಣ ಮತ್ತು ಉಕ್ಕಿನ ಬೆಲೆ ಸುಮಾರು ೨-೩ ವರ್ಷಗಳಲ್ಲಿ ಎರಡು ಪಟ್ಟು ಜಾಸ್ತಿಯಾಗಿದೆ ಎನ್ನುವ ವರದಿ ಇದೆ. ಇವತ್ತು ಒಬ್ಬ ರೈತ ಕೊಳ್ಳುವ ಸಾಮಗ್ರಿಗಳ ಬೆಲೆ ಜಾಸ್ತಿಯಾಗಿರುವಾಗ, ಈ ಕೈಗಾರಿಕೆಗಳು ನಷ್ಟಕ್ಕೆ ಗುರಿಯಾಗಿವೆ ಮತ್ತು ಇವನ್ನು ಮುಚ್ಚತಕ್ಕ ಪರಿಸ್ಥಿತಿಗೆ ಬಂದಿದ್ದವೆಂದರೆ ಇದರಲ್ಲಿ ಇರತಕ್ಕ ದೋಷ ಏನು? ಇವತ್ತು ಆಡಳಿತ ಸರಿಯಾಗಿ ನಡೆಯದಿರುವುದು ಹಾಗೂ ಇವುಗಳಲ್ಲಿ ಸೋರುವಿಕೆ ಇರತಕ್ಕದ್ದು ಹಾಗೂ ಸಾರ್ವಜನಿಕ ಕ್ಷೇತ್ರವನ್ನು ಕುಂಠಿತ ಮಾಡಿ ಖಾಸಗೀ ಕ್ಷೇತ್ರಕ್ಕೆ ಬೆಂಬಲ ಕೊಡತಕ್ಕ ಅಧಿಕಾರಿಗಳು ಮತ್ತು ಅದನ್ನು ನೋಡತಕ್ಕ ಜನರ ಧೋರಣೆಯಿಂದಾಗಿ ಹೀಗಾಗುತ್ತಿದೆಯೋನೋ ಎಂದೆನಿಸುತ್ತದೆ. ಈಗ ಕಬ್ಬಿಣದ ಕಾರ್ಖಾನೆಯನ್ನೇ ತೆಗೆದುಕೊಂಡರೂ ಶರಾವತಿ ಹತ್ತಿರದಲ್ಲೇ ಇದೆ. ಈ ಕಾರ್ಖಾನೆಗೆ ಎಷ್ಟು ವಿದ್ಯುತ್‌ನ್ನು ಸರಬರಾಜು ಮಾಡಬೇಕೆಂಬುದನ್ನೇ ಗಮನದಲ್ಲಿ ಇಟ್ಟುಕೊಂಡು ಸ್ಥಾಪನೆ ಮಾಡಿದಂತಹ ಶರಾವತಿ ಅದಾಗಿದೆ. ಆದರೆ ಇವತ್ತು ಆ ಕಾರ್ಖಾನೆಗೆ ಸಿಗತಕ್ಕ ವಿದ್ಯುತ್‌ನ್ನು ನೋಡಿದರೆ ಅದರ ಅಗತ್ಯವನ್ನು ಪೂರೈಸತಕ್ಕ ಮಟ್ಟಕ್ಕೆ ವಿದ್ಯುತ್ ದೊರೆಯುತ್ತಿಲ್ಲ. ವಿದ್ಯುಚ್ಛಕ್ತಿ ಸರಿಯಾಗಿ ದೊರೆಯದಿರುವುದು ಮತ್ತು ಸುಮಾರು ೬-೭ ಸಾವಿರ ಜನ ಅಗತ್ಯಕ್ಕಿಂತ ಹೆಚ್ಚಿಗೆ ನೌಕರರು ಇದ್ದಾರೆ. ಇದರ ಜೊತೆಗೆ ಟೆಕ್ನಿಕಲ್ ಆಗಿ ಗುಣಮಟ್ಟದ ಬಗ್ಗೆ ಸಾಕಷ್ಟು ತಿಳುವಳಿಕೆ ಇಲ್ಲದಿರತಕ್ಕ ಐ.ಎ.ಎಸ್. ಅಧಿಕಾರಿಗಳನ್ನು ಮ್ಯಾನೇಜಿಂಗ್ ಡೈರೆಕ್ಟರ್‌ಗಳನ್ನಾಗಿ ಹಾಕುತ್ತಿರುವುದರಿಂದ ಈ ಕೈಗಾರಿಕೆಗಳು ಇವತ್ತು ನಷ್ಟಕ್ಕೆ ಗುರಿಯಾಗುವುದಕ್ಕೆ ಕಾರಣವಾಗಿದೆ. ಇದೇ ರೀತಿ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಒಂದು ಅವ್ಯವಹಾರದ ಬಗ್ಗೆ ಹೇಳುವುದಾದರೆ ಲಿಳನೇ ಇಸವಿ ಜುಲೈನಲ್ಲಿ ೬ ಐಟಂ ವಸ್ತುಗಳನ್ನು ಅಂದರೆ ತಾಮ್ರದ ಪಾತ್ರೆಗಳು, ಕಬ್ಬಿಣದ ಪಾತ್ರೆಗಳನ್ನು ಮಾರಾಟ ಮಾಡುವುದಕ್ಕೆ ಒಂದು ಟೆಂಡರ್‌ನ್ನು ಕರೆದಿದ್ದರು. ಅನೇಕ ಜನ ಇವುಗಳನ್ನು ಕೊಳ್ಳುವುದಕ್ಕೆ ತಮ್ಮ ಟೆಂಡರ್‌ಗಳನ್ನು ಹಾಕಿದ್ದರು. ಅವುಗಳನ್ನು ಆ ಎಲ್ಲ ಕಂಟ್ರಾಕ್ಟರ್‌ಗಳ ಎದುರಿನಲ್ಲೇ ಹೆಚ್ಚು ಬೆಲೆಯ ಟೆಂಡರ್‌ನವರಿಗೆ ಮಾರಾಟ ಮಾಡುವುದಕ್ಕೆ ಬದಲಾಗಿ ನ್ಯೂ ಇಂಟರ್ ನ್ಯಾಷನಲ್ ಸಂಸ್ಥೆ ಇವರನ್ನು ಫೋನ್ ಮೂಲಕ ಬರಮಾಡಿಕೊಂಡು ಅವರಿಗೆ ಕಡಿಮೆ ಟೆಂಡರ್‌ಗೆ ಅಂದರೆ ೮.೭೦೦ ರೂ.ಗಳಿಗೆ ಸುಮಾರು ೩ ಲಕ್ಷ ರೂಪಾಯಿ ಬೆಲೆ ಬಾಳುವ ವಸ್ತುಗಳನ್ನು ಮಾರಾಟ ಮಾಡಿದ್ದಾರೆ. ಅಂದರೆ ಮೊದಲಿನ ಟೆಂಡರ್‌ನ ಕೊನೆಯ ಕಾಲಾವಧಿ ಮುಗಿದ ಮೇಲೆ ಈ ರೀತಿ ಮಾಡಿದ್ದಾರೆ. ಮೈಸೂರು ಗಂಧದ ಎಣ್ಣೆ ಕಾರ್ಖಾನೆಗೆ ಹಿಂದಿನ ಮೈಸೂರಿನ ಮಹಾರಾಜರು ೨೫೦ ಕೆ.ಜಿ. ತೂಕದ ಈ ಪಾತ್ರೆಗಳನ್ನು ಕೊಟ್ಟಿದ್ದರು. ಆದ್ದರಿಂದ ಇಂಥ ಅವ್ಯವಹಾರಗಳನ್ನು ಮಾಡಿರತಕ್ಕ ಅಧಿಕಾರಿಗಳನ್ನು ಡಿಸ್‌ಮಿಸ್ ಮಾಡಬೇಕು ಇಲ್ಲದಿದ್ದರೆ ಸಸ್ಪೆಂಡ್ ಮಾಡಬೇಕು, ಮತ್ತು ಇದರಲ್ಲಿ ಆಗಿರತಕ್ಕ ನಷ್ಟವನ್ನು ಅವರಿಂದ ವಸೂಲ್ಮಾಡಿಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಆದರೆ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ನಾನು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಇನ್ನು ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ವರ್ಗದವರಿಗೆ ಮತ್ತು ಪರಿಶಿಷ್ಟ ಜಾತಿಯವರಿಗೆ ಎಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಆ ಮೂಲಕ ಅನುಕೂಲ ಮಾಡಿಕೊಟ್ಟಿದ್ದೀರೆಂದು ನೋಡಿದರೆ ನೀವು ಕೇವಲ ಪುಸ್ತಕದಲ್ಲಿ ಅಥವಾ ವರದಿಯಲ್ಲಿ ಮಾತ್ರ ನಿಮ್ಮ ಸಾಧನೆಗಳನ್ನು ತೋರಿಸಿದ್ದೀರೇ ಹೊರತು ವಾಸ್ತವವಾಗಿ ಆಗಿಲ್ಲ ಎಂಬುದಕ್ಕೆ ಇದೊಂದು ನಿದರ್ಶನ. ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜಾತಿಯವರಿಗೆ ಹಣವನ್ನು ನೀಡಿ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಎಲ್ಲೋ ನಾಲ್ಕಾರು ಜನ ಹರಿಜನ ಕುಟುಂಬದವರಿಗೆ ಸ್ವಲ್ಪ ಹಣವನ್ನು ಕೊಟ್ಟರೆ ಅವರ ಆರ್ಥಿಕ ಸುಧಾರಣೆಯಾಗುವುದಿಲ್ಲ. ನೀವು ಕೊಟ್ಟಿರತಕ್ಕ ಹಣವೆಲ್ಲಾ ಬೇರೆಯವರಿಗೆ ಹೋಗಿದೆ. ನೀವು ವಿಶೇಷ ಘಟಕ ಯೋಜನೆಯಲ್ಲಿ ಏನು ಹಣವನ್ನು ಈ ವರ್ಗದ ಜನರಿಗೆ ಉಪಯೋಗಿಸಬೇಕೆಂದು ಕೊಟ್ಟಂಥ ಹಣವನ್ನು ಸಾರ್ವಜನಿಕ ಕೆಲಸಗಳಾದ ಕೊಳವೆ ಬಾವಿ ತೋಡಿಸುವುದು, ಆಸ್ಪತ್ರೆಗಳನ್ನು ಕಟ್ಟಿಸುವುದು ಎ.ಎನ್.ಎಂ.ಗಳ ವಸತಿ ಗೃಹಗಳನ್ನು ಕಟ್ಟಿಸುವುದು ಇಂಥ ಕೆಲಸ

ಗಳಿಗೆ ಉಪಯೋಗ ಮಾಡಿದ್ದೀರಿ. ಅದೇ ರೀತಿ ಕೈಗಾರಿಕೆಯಲ್ಲಿ ಕೊಟ್ಟಿರತಕ್ಕ ಹಣವನ್ನು ಲೆಕ್ಕ ಹಾಕಿದರೆ ಎಷ್ಟು ಜನರಿಗೆ ಹಣವನ್ನು ಕೊಟ್ಟಿದ್ದೀರಿ? ಅದು ಸದುಪಯೋಗ ಆಗಿದೆಯೇ, ಇಲ್ಲವೇ, ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆಯೇ, ಇಲ್ಲವೇ, ಎಂಬುದನ್ನು ಸಭೆಗೆ ತಿಳಿಸಬೇಕೆಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಇನ್ನು ತುಮಕೂರು ಜಿಲ್ಲೆಯಲ್ಲಿ ಶಿರ, ಚಿಕ್ಕನಾಯಕನಹಳ್ಳಿ, ತರುವೇಕೆರೆಯಲ್ಲಿ ಮಿನಿ ಸಿಮೆಂಟ್ ಕಾರ್ಖಾನೆಗಳು ಸ್ಥಾಪನೆಯಾಗಿವೆ. ಈ ಕಾರ್ಖಾನೆಗಳಿಂದ ಹೊರಬರತಕ್ಕ ಧೂಳು ಗಾಳಿ ಬೀಸತಕ್ಕ ದಿಕ್ಕಿಗೆ ಹಾರಿ ಹೋಗುತ್ತಿರುತ್ತದೆ. ನಾವು ಇದನ್ನು ನೋಡಿದರೆ ಮಂಜು ಬೀಳುತ್ತಿದೆಯೇನೋ ಅನಿಸುತ್ತದೆ. ಈ ಧೂಳು ಆ ಸುತ್ತಮುತ್ತ ಇರತಕ್ಕ ತೆಂಗಿನ ಮರಗಳ ಮೇಲೆ, ಖುಷ್ಕಿ ಬೆಳೆಗಳ ಮೇಲೆ ಬೀಳುತ್ತದೆ. ಇದರಿಂದಾಗಿ ತೆಂಗಿನ ಬೆಳೆ ಮತ್ತು ಖುಷ್ಕಿ ಬೆಳೆ ಹಾಳಾಗುತ್ತಿದೆ. ಈ ತೆಂಗಿನ ಬೆಳೆ, ಖುಷ್ಕಿ ಬೆಳೆ ಹಾಳಾದರೆ ನಮಗೆ ಏನು? ನಮಗೆ ಹಣ ಬಂದರೆ ಸಾಕು ಎನ್ನುವ ಮನೋಭಾವನೆಯನ್ನು ಈ ಕಾರ್ಖಾನೆಯವರು ಹೊಂದಿದ್ದಾರೆ. ಈ ಸಿಮೆಂಟ್ ಪ್ಲಾಂಟ್ ಏನಿದೆ ಇದು ಡ್ರೈ ಪ್ಲಾಂಟ್. ಇದನ್ನು ವೆಟ್ ಪ್ಲಾಂಟ್ ಆಗಿ ಕೂಡ ಪರಿವರ್ತನೆ ಮಾಡಲು ಅವಕಾಶ ಇದೆ. ಜನರು ಹಾಳಾದರೂ ಪರವಾಗಿಲ್ಲ ನಮಗೆ ಹಣ ಬರಬೇಕು ಎಂಬ ಭಾವನೆ ಇವರಲ್ಲಿ ಇದೆ. ಈ ಕೈಗಾರಿಕೆಗಳಿಗೆ ತಮ್ಮ ಕೃಪೆ ಇದೆಯೆಂದು ನಾನು ಕೇಳಿದ್ದೇನೆ. ಆದ್ದರಿಂದ ಸರ್ಕಾರದ ಈ ಧೋರಣೆ ಬದಲಾವಣೆಯಾಗಬೇಕು ಮತ್ತು ಈ ಸಿಮೆಂಟ್ ಕಾರ್ಖಾನೆಗಳು ಡ್ರೈ ಪ್ಲಾಂಟ್‌ಗಳನ್ನು ವೆಟ್ ಪ್ಲಾಂಟ್‌ಗಳಾಗಿ ಅವರು ಮಾರ್ಪಡಿಸಿಕೊಳ್ಳುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು— ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ನಾಳೆಯ ದಿವಸ ಮಂತ್ರಿಯವರು ಉತ್ತರವನ್ನು ಕೊಡುತ್ತಾರೆ. ಈಗ ಸಭೆಯನ್ನು ನಾಳೆ ಬೆಳಿಗ್ಗೆ ೯ ಗಂಟೆಯವರೆಗೂ ಮುಂದೂಡಿದ್ದೇನೆ.

(ಸಭೆಯು ೭ ಗಂಟೆ ೧೫ ನಿಮಿಷಗಳಾಗಿದ್ದಾಗ ಮುಕ್ತಾಯವಾಗಿ ಮರುದಿನ ಬೆಳಿಗ್ಗೆ ೯–೦೦ ಗಂಟೆಗೆ ಸೇರಲು ನಿಶ್ಚಯಿಸಿತು.)